ಸಂಪುಟ: 06 ಸಂಚಿಕೆ: 222 ಪುಟಗಳು: 08 ಬುಧವಾರ 28 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಕನಸುಗಳನ್ನು ಕಣ್ಣಲ್ಲೇ ಕೂಡಿಟ್ಟು ಕಣ್ಣೀರ ಜತೆ ಜಾರಿಹೋಗಲು ಬಿಡಬಾರದು. ಹೃದಯಕ್ಕಿಳಿಸಿಕೊಂಡು ನನಸುಗಳ ಜಾರಿಗೆ ಪ್ರಯತ್ನಿಸಬೇಕು!

ವಂದೇ ಮಾತರಂ ಪೂರ್ಣ ಗಾಯನ ಕಡ್ಡಾಯ: ಕೇಂದ್ರದ ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

• ಉದಯವಾಹಿನಿ, ನವದೆಹಲಿ

ವಂದೇ ಮಾತರಂನ ಸಂಪೂರ್ಣ ಆರು ಚರಣಗಳನ್ನು ಹಾಡುವುದನ್ನು ಕಡ್ಡಾಯಗೊಳಿಸಿರುವ ಕೇಂದ್ರ ಸರ್ಕಾರದ ನಿರ್ದೇಶನಗಳನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ಕುರಿತು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಕೇಳಿದೆ. ಧಾರ್ಮಿಕ ಸ್ವಾತಂತ್ರ್ಯ, ಜಾತ್ಯತೀತ ತತ್ವ ಮತ್ತು ವೈಯಕ್ತಿಕ ಹಕ್ಕುಗಳಿಗೆ ಸಂಬಂಧಿಸಿದ ಈ ವಿವಾದದ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠ ನಡೆಸಿತು.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಲ್ಯ ಬಾಗ್ಚಿ ಮತ್ತು ವಿ.ಮೋಹನಾ ಅವರನ್ನೊಳಗೊಂಡ ನ್ಯಾಯಪೀಠವು ಬೌದ್ಧ ಕಾರ್ಯಕರ್ತರೊಬ್ಬರು ಹಾಗೂ ನಿವೃತ್ತ ಐಎಎಸ್ ಅಧಿಕಾರಿಯೊಬ್ಬರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿ ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿದೆ. ವಂದೇ ಮಾತರಂನ ಸಂಪೂರ್ಣ ಆವೃತ್ತಿಯನ್ನು ಹಾಡುವುದಕ್ಕೆ ಸಂಬಂಧಿಸಿದ ಸರ್ಕಾರದ ನಿರ್ದೇಶನಗಳ ಸಾಂವಿಧಾನಿಕ ಮಾನ್ಯತೆ ಈ ಅರ್ಜಿಗಳಲ್ಲಿ ಪ್ರಶ್ನಿಸಲಾಗಿದೆ. ನಾಗಪುರದ ಬೌದ್ಧ ಕಾರ್ಯಕರ್ತ ಬಿ.ಡಿ.ಬೋರ್ಕರ್ ಅವರು ಸಲ್ಲಿಸಿರುವ ಅರ್ಜಿಯಲ್ಲಿ, ಕೇಂದ್ರ ಗೃಹ ಸಚಿವಾಲಯವು 2026ರ ಜನವರಿ 28 ಮತ್ತು ಜುಲೈ 9ರಂದು ಹೊರಡಿಸಿರುವ ನಿರ್ದೇಶನಗಳನ್ನು ಪ್ರಶ್ನಿಸಲಾಗಿದೆ.

ಸಿಎಂ, ಜಮೀರ್ ಅಹ್ಮದ್ ವಿರುದ್ಧ ಧನ್ವೀರ್‌ದ್ದು ಎನ್ನಲಾದ ಅವಹೇಳನಕಾರಿ ಹೇಳಿಕೆ ಖಂಡನೀಯ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ಅವರ ವಿರುದ್ಧ ನಟ ಧನ್ವೀರ್ ಅವರು ನೀಡಿದ್ದಾರೆ ಎನ್ನಲಾದ ಅವಹೇಳನಕಾರಿ ಹಾಗೂ ಆಕ್ಷೇಪಾರ್ಹ ಹೇಳಿಕೆಗಳ ಕುರಿತು ಸೂಕ್ತ ತನಿಖೆ ನಡೆಸಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಎನ್‌ಎಸ್‌ಯುಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕೀರ್ತನ್ ಗೌಡ ಕೊಡಪಾಲ ಅವರು ಆಗ್ರಹಿಸಿದ್ದಾರೆ.

ಪ್ರತಿಕಾ ಹೇಳಿಕೆ ನೀಡಿರುವ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕಿದೆ. ಆದರೆ, ಆ ಹಕ್ಕನ್ನು ಬಳಸುವಾಗ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಸಂಯಮ, ಜವಾಬ್ದಾರಿ ಮತ್ತು ಪರಸ್ಪರ ಗೌರವವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ರಾಜಕೀಯ ಭಿನ್ನಾಭಿಪ್ರಾಯಗಳಿರಬಹುದು, ವಿಚಾರಧಾರೆಗಳು ಬೇರೆಬೇರೆಯಾಗಿರಬಹುದು. ಆದರೆ, ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ನೆಪದಲ್ಲಿ ವೈಯಕ್ತಿಕ ನಿಂದನೆ ಅಥವಾ ಆಕ್ಷೇಪಾರ್ಹ ಪದಪ್ರಯೋಗಗಳಿಗೆ ಅವಕಾಶ ನೀಡಬಾರದು ಎಂದು ಆಕ್ರೋಶ ಹೊರಹಾಕಿದ್ದಾರೆ.

ಡಿಸಿಎಂ ಪರಮೇಶ್ವರ್ ಆಸ್ಪತ್ರೆಗೆ ದಾಖಲು ಐಸಿಯುನಲ್ಲಿ ಚಿಕಿತ್ಸೆ, ಡಿಕೆಶಿ ದೌಡು

• ಉದಯವಾಹಿನಿ, ಬೆಂಗಳೂರು

ಡಿಸಿಎಂ ಡಾ. ಜಿ. ಪರಮೇಶ್ವರ್ ಅವರಿಗೆ ತೀವ್ರ ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ತಕ್ಷಣವೇ ಬೆಂಗಳೂರಿನ ವೈದೇಹಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಠಾತ್ ಆರೋಗ್ಯ ಏರುಪೇರಾದ ಕಾರಣ ಕುಟುಂಬಸ್ಥರು ಹಾಗೂ ಭದ್ರತಾ ಸಿಬ್ಬಂದಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ಪರಮೇಶ್ವರ್ ಅನಾರೋಗ್ಯಕ್ಕೆ ಒಳಗಾದ ಹಿನ್ನೆಲೆಯಲ್ಲಿ ಸಿಎಂ ಡಿಕೆ ಶಿವಕುಮಾರ್ ಆಸ್ಪತ್ರೆಗೆ ದೌಡಾಯಿಸಿದ್ದಾರೆ. ವೈದೇಹಿ ಆಸ್ಪತ್ರೆಯ ಹಿರಿಯ ವೈದ್ಯರ ತಂಡವು ಸಚಿವರ ಆರೋಗ್ಯ ತಪಾಸಣೆ ನಡೆಸುತ್ತಿದ್ದು, ಅಗತ್ಯ ರಕ್ತ ಪರೀಕ್ಷೆ, ಇಸಿಜಿ ಸೇರಿದಂತೆ ವಿವಿಧ ವೈದ್ಯಕೀಯ ತಪಾಸಣೆಗಳಿಗೆ ಒಳಪಡಿಸಿದೆ. ಸದ್ಯ ವೈದ್ಯರ ತೀವ್ರ ನಿಗಾ ಘಟಕದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ವೈದ್ಯರ ತಂಡ ಅವರ ಆರೋಗ್ಯ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದೆ. ಸಚಿವರ ಆರೋಗ್ಯ ಪರಿಸ್ಥಿತಿ ಕುರಿತಂತೆ ಆಸ್ಪತ್ರೆ ಆಡಳಿತ ಮಂಡಳಿಯು ಶೀಘ್ರದಲ್ಲೇ ಅಧಿಕೃತ ಹೆಲ್ತ್ ಬುಲೆಟಿನ್ ಹೊರಡಿಸುವ ಸಾಧ್ಯತೆಯಿದೆ.

ಸ್ಫೋಟಕ ಮಾಹಿತಿ ಬಿಚ್ಚಿಟ್ಟ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಸ್ಟಿಂಗ್ ಅಪರೇಷನ್ ಕೋಲಾಹಲವನ್ನೇ ಎಬ್ಬಿಸಿದೆ. ಈ ಸ್ಟಿಂಗ್ ಮಾಡಿದ್ಯಾರು ಎನ್ನುವುದನ್ನು ಸ್ವತಃ ದೂರುದಾರ, ಮಾಜಿ ಸಿಎಂ ಸಿದ್ದರಾಮಯ್ಯ, ಮಂಗಳೂರು ಕಾಂಗ್ರೆಸ್ ನಾಯಕಿ ಕೃಪಾ ಆಳ್ವಾ ಹಾಗೂ ಪತ್ರಕರ್ತರೊಬ್ಬರ ಹೆಸರು ಬಹಿರಂಗಪಡಿಸಿದ್ದಾರೆ.

ಹೀಗಾಗಿ ರಾಜ್ಯದಲ್ಲಿ ಸ್ಟಿಂಗ್ ಆಪರೇಷನ್ ಕೋಲಾಹಲ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹೈಕಮಾಂಡ್ ಎಂಟ್ರಿ ಕೊಟ್ಟಿದ್ದು, ಪ್ರಕರಣದ ಸಂಬಂಧ ಮಾಹಿತಿ ಸಹ ಪಡೆದುಕೊಂಡಿದೆ. ಈ ಸಂಬಂಧ ಹೈಕಮಾಂಡ್ ಸಮಯ ನೀಡಿದರೆ ದೆಹಲಿಗೆ ತೆರಳಿ ಹೈಕಮಾಂಡ್ ಭೇಟಿಯಾಗುವೆ ಎಂದು ಪ್ರಕರಣದ ದೂರುದಾರ, ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಈ ಬಗ್ಗೆ ಬೆಂಗಳೂರಿನಲ್ಲಿಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ತನಿಖೆಯ ಬಗ್ಗೆ ತೃಪ್ತಿ, ಅತೃಪ್ತಿ ಅಂತಾ ಇಲ್ಲ. ಸ್ಟಿಂಗ್ ಆಪರೇಷನ್ ಬಗ್ಗೆ ಪೊಲೀಸರು ತನಿಖೆ ಮಾಡ್ತಿದ್ದಾರೆ. ನಿಷ್ಪಕ್ಷಪಾತ ತನಿಖೆಗೆ ಒತ್ತಾಯ ಮಾಡ್ತೇನೆ.

ಕೈಗೆ ಮುಖ ಭಂಗ

ಮೈತ್ರಿ ಅಭ್ಯರ್ಥಿ ಎ.ಪಿ.ರಂಗನಾಥ್ ಭರ್ಜರಿ ಗೆಲುವು

ಶಿಕ್ಷಕರ ಒಗ್ಗಟ್ಟಿಗೆ ಜಯ

2026ರ ಕರ್ನಾಟಕ ವಿಧಾನಪರಿಷತ್ ಚುನಾವಣೆಯ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಪ್ರಚಂಡ ಗೆಲುವು ದಾಖಲಿಸಿದ ಎನ್.ಡಿ.ಎ (ಬಿಜೆಪಿ ಜೆಡಿಎಸ್) ಮೈತ್ರಿಕೂಟದ ಅಭ್ಯರ್ಥಿ ಎ.ಪಿ.ರಂಗನಾಥ್ ಅವರಿಗೆ ಜೆಡಿಎಸ್ ಅಭಿನಂದನೆ ತಿಳಿಸಿದೆ. ರಂಗನಾಥ್ ಅವರ ಮೇಲೆ ವಿಶ್ವಾಸವಿಟ್ಟು, ಶಿಕ್ಷಕರ ಹಿತರಕ್ಷಣೆ ಮತ್ತು ಶಿಕ್ಷಣ ಕ್ಷೇತ್ರದ ಏಳಿಗೆಗಾಗಿ ಮತ ನೀಡಿ ಬೆಂಬಲಿಸಿದ ಬೆಂಗಳೂರು ಶಿಕ್ಷಕರ ಕ್ಷೇತ್ರದ ಸಮಸ್ತ ಶಿಕ್ಷಕ ಹಾಗೂ ಅಧ್ಯಾಪಕ ಬಂಧುಗಳಿಗೆ ಅನಂತ ಧನ್ಯವಾದಗಳು. ಈ ಐತಿಹಾಸಿಕ ಗೆಲುವಿಗಾಗಿ ಒಗ್ಗಟ್ಟಿನಿಂದ ಶ್ರಮಿಸಿದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಎಲ್ಲಾ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರಿಗೂ ವಿಶೇಷ ಕೃತಜ್ಞತೆಗಳು ಎಂದು ತಿಳಿಸಿದೆ.

ಶಿಕ್ಷಕರ ಒಗ್ಗಟ್ಟಿಗೆ ಜಯ, ವಿಶ್ವಾಸಕ್ಕೆ ವಿಜಯ, ಸೇವಾ ಸಂಕಲ್ಪಕ್ಕೆ ಹೊಸ ಶಕ್ತಿ ಎಂದು ಬಿಜೆಪಿ ಶಾಸಕ ಸುರೇಶ್ ಕುಮಾರ್ ಕೂಡ ಸಂತಸ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ 600ಕ್ಕೂ ಅಧಿಕ ಮತಗಳ ಅಂತರದಿಂದ ಅಭೂತಪೂರ್ವ ಗೆಲುವು ಸಾಧಿಸಿರುವ ಬಿಜೆಪಿಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾದ ಎ.ಪಿ. ರಂಗನಾಥ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಶಿಕ್ಷಕರ ಧ್ವನಿಯಾಗಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯ ಹರಿಕಾರರಾಗಿ, ಶಿಕ್ಷಕ ಸಮುದಾಯದ ಆಶೋತ್ತರಗಳನ್ನು ಈಡೇರಿಸುವಲ್ಲಿ ನಿಮ್ಮ ಕಾರ್ಯ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದವರು ತಿಳಿಸಿದ್ದಾರೆ.

- ಬೆಂಗಳೂರು ಶಿಕ್ಷಕರ ಕ್ಷೇತ್ರ:
- ಕಾಂಗ್ರೆಸ್‌ನ ಪುಟ್ಟಣ್ಣಗೆ ಮುಖಭಂಗ
- ಜೆಡಿಎಸ್ ಅಭ್ಯರ್ಥಿ ಎ.ಪಿ. ರಂಗನಾಥ್‌ಗೆ ಗೆಲುವು
- ಪರಿಷತ್ ಫೈಟ್‌ನಲ್ಲಿ ಸರ್ಕಾರಕ್ಕೆ ಮುಖಭಂಗ!

ಸೇವಾ ಸಂಕಲ್ಪಕ್ಕೆ ಹೊಸ ಶಕ್ತಿ

• ಉದಯವಾಹಿನಿ, ಬೆಂಗಳೂರು

ತೀವ್ರ ಜಿದ್ದಾಜಿದ್ದಿನಿಂದ ಕೂಡಿದ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಜೆಡಿಎಸ್ ಅಭ್ಯರ್ಥಿ ಎಪಿ ರಂಗನಾಥ್ ಅವರು ಭರ್ಜರಿ ಗೆಲುವು ಸಾಧಿಸಿದ್ದಾರೆ. 908 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ ಎಂದು ತಿಳಿದುಬಂದಿದೆ.ಒಟ್ಟು 21 000 ಎಣಿಕೆಯಾದ ಮತಗಳಲ್ಲಿ ಎಪಿ ರಂಗನಾಥ್ 10810 , ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ 9902 ಮತಗಳು ಪಡೆದಿದ್ದರೆ. ಈ ಮೂಲಕ ಕಳೆದ ನಾಲ್ಕು ಬಾರಿ ಶಿಕ್ಷಕರ ಕ್ಷೇತ್ರದಿಂದ ಸತತವಾಗಿ ಗೆಲುವು ಸಾಧಿಸಿದ ಪುಟ್ಟಣ್ಣ ಅವರಿಗೆ ಸೋಲಾಗಿದೆ. ಬಿಜೆಪಿಯಿಂದ ಗೆದ್ದು ರಾಜೀನಾಮೆ ನೀಡಿ ನಂತರ ಕಳೆದ ರಾಜಾಜಿನಗರ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಕಂಡಿದ್ದರು. ಆದರೆ ಮತ್ತೊಮ್ಮೆ ವಿಧಾನಪರಿಷತ್ನ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿತ್ತು. ಬಿಜೆಪಿ ಹಾಗೂ ಜೆಡಿಎಸ್ ಜಂಟಿಯಾಗಿ ರಂಗನಾಥ್ ಪರವಾಗಿ ಸತತವಾಗಿ ಶ್ರಮಿಸಿತ್ತು ಅದು ಈಗ ಫಲ ನೀಡಿದೆ. ಇನ್ನು ಮೂರು ಕ್ಷೇತ್ರಗಳಲ್ಲಿ ಕೂಡ ಬಿಜೆಪಿ ಮುನ್ನಡೆ ಸಾಧಿಸಿದ್ದು ಎಲ್ಲಾ ನಾಲ್ಕು ಸ್ಥಾನಗಳನ್ನು ಕೂಡ ಗೆಲ್ಲುವ ಸಾಧ್ಯತೆ ದಟ್ಟವಾಗಿದೆ. ಅಭ್ಯರ್ಥಿ ಗೆಲವಿನಿಂದ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರಲ್ಲಿ ಹೊಸ ಉರುಪು ಮೂಡಿದೆ. ಈ ಮೂಲಕ ಮುಂದಿನ ವಿಧಾನಸಭೆ ಚುನಾವಣೆಗೆ ಈ ಗೆಲವು ಬಲ ನೀಡಿದೆ.

ಕಾಂಗ್ರೆಸ್ ಪತನಕ್ಕೆ ಈ ಗೆಲುವೇ ಮುನ್ನುಡಿ: ನಿಖಿಲ್ ಕುಮಾರಸ್ವಾಮಿ ಎ.ಪಿ. ರಂಗನಾಥ್ ಅವರ ಐತಿಹಾಸಿಕ ವಿಜಯಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸಾಮಾಜಿಕ ಜಾಲತಾಣದಲ್ಲಿ ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಈ ಐತಿಹಾಸಿಕ ಗೆಲುವಿಗಾಗಿ ಅಹೋರಾತ್ರಿ ಶ್ರಮಿಸಿದ ಬಿಜೆಪಿ ಮತ್ತು ಜೆಡಿಎಸ್‌ನ ಎಲ್ಲಾ ಮುಖಂಡರು, ಪದಾಧಿಕಾರಿಗಳು ಹಾಗೂ ಮುಖ್ಯವಾಗಿ ಎನ್‌ಡಿಎ ಮೇಲೆ ವಿಶ್ವಾಸವಿಟ್ಟು ಮತ ಚಲಾಯಿಸಿದ ಗೌರವಾನ್ವಿತ ಶಿಕ್ಷಕ ಸಮುದಾಯಕ್ಕೆ ನನ್ನ ಕೃತಜ್ಞತೆಗಳು' ಎಂದು ತಿಳಿಸಿದ್ದಾರೆ. ಮುಂದುವರಿದು, ಎರಡೂ ಪಕ್ಷಗಳು ಒಗ್ಗಟ್ಟಿನಿಂದ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದಕ್ಕೆ ಈ ಅದ್ಭುತ ಫಲಿತಾಂಶ ಸಿಕ್ಕಿದೆ. ರಾಜ್ಯದಲ್ಲಿರುವ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಪತನಕ್ಕೆ ಈ ಚುನಾವಣಾ ಫಲಿತಾಂಶ ಸ್ಪಷ್ಟ ಮುನ್ನುಡಿ ಬರೆದಿದೆ.

ಅಧಿಕಾರದಿಂದ ಕಾಂಗ್ರೆಸ್‌ನ ನಿರ್ಗಮನದ ದಿನಗಳು ಈಗಿನಿಂದಲೇ ಆರಂಭವಾಗಿವೆ' ಎಂದು ನಿಖಿಲ್ ಕುಮಾರಸ್ವಾಮಿ ಗುಡುಗಿದ್ದಾರೆ.

ಮೈತ್ರಿಕೂಟ ರಚನೆಯಾದ ಬಳಿಕ ಶಿಕ್ಷಕರ ಕ್ಷೇತ್ರದಲ್ಲಿ ಸಿಕ್ಕಿರುವ ಈ ಜಯವು ಬಿಜೆಪಿ-ಜೆಡಿಎಸ್ ಕಾರ್ಯಕರ್ತರಲ್ಲಿ ಹೊಸ ಹುರುಪು ಮೂಡಿಸಿದ್ದು, ಮೈತ್ರಿ ಶಕ್ತಿಗೆ ಸಿಕ್ಕ ದೊಡ್ಡ ಮನ್ನಣೆ ಎಂದೇ ವಿಶ್ಲೇಷಿಸಲಾಗುತ್ತಿದೆ.

1857 ಮತಗಳು ತಿರಸ್ಕೃತ

ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರ ಹಾಗೂ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ -2026ರ ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತ ಎಣಿಕೆ ಪ್ರಕ್ರಿಯೆ ಶಾಂತಿಯುತವಾಗಿ ಮುಕ್ತಾಯಗೊಂಡಿದೆ ಎಂದು ಬೆಂಗಳೂರು ಶಿಕ್ಷಕರ ಕ್ಷೇತ್ರ ಹಾಗೂ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣಾಧಿಕಾರಿ ಅಮ್ಲಾನ್ ಆದಿತ್ಯ ಬಿಸ್ವಾಸ್ ತಿಳಿಸಿದ್ದಾರೆ.

ಅಕ್ಟೋಬರ್ 23ರಂದು ನಡೆದ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನದಲ್ಲಿ ಒಟ್ಟು 27,405 ಮತದಾರರ ಪೈಕಿ 22,468 ಮಂದಿ ಮತ ಚಲಾಯಿಸಿದ್ದು, ಶೇ.81.98ರಷ್ಟು ಮತದಾನವಾಗಿತ್ತು. ಮತ ಚಲಾಯಿಸಿದವರಲ್ಲಿ 8,360 ಪುರುಷರು ಹಾಗೂ 14,108 ಮಹಿಳೆಯರಿದ್ದರು. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಅವರು ಗೆಲುವು ಸಾಧಿಸಿದ್ದಾರೆ. ಎ.ಪಿ. ರಂಗನಾಥ್ 10810 ಮತಗಳನ್ನು ಪಡೆದರೆ, ಕಾಂಗ್ರೆಸ್ ಪಕ್ಷದ ಪುಟ್ಟಣ್ಣ ಅವರು 9902 ಮತಗಳನ್ನು ಪಡೆದಿದ್ದಾರೆ. ರಂಗನಾಥ್ ಅವರು 908 ಮತಗಳಿಂದ ಗೆದ್ದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಇತರ ಅಭ್ಯರ್ಥಿಗಳ ಪೈಕಿ ಕರ್ನಾಟಕ ರಾಷ್ಟ್ರ ಸಮಿತಿಯ ಅಭ್ಯರ್ಥಿಯಾದ ಡಾ. ಜಿ.ಆರ್. ಹೆಬ್ಬೂರು 94 ಮತಗಳು, ಪಕ್ಷೇತರ ಅಭ್ಯರ್ಥಿಯಾದ ಉಮೇಶ್ ಬಾಬು ಪಿಳ್ಳೆಗೌಡ 215 ಮತಗಳು, ಪಕ್ಷೇತರ ಅಭ್ಯರ್ಥಿಯಾದ ಬಿ .ಎಸ್. ನಾಗರಾಜು 11 ಹಾಗೂ ಪಕ್ಷೇತರ ಅಭ್ಯರ್ಥಿಯಾದ ಡಾ. ಎನ್. ಲಕ್ಷ್ಮಣ ಸ್ವಾಮಿ ಅವರು 24 ಮತಗಳನ್ನು ಪಡೆದಿದ್ದಾರೆ. ಒಟ್ಟು 20616 ಮತಗಳು ಮಾನ್ಯವಾಗಿದ್ದು, 1857 ಮತಗಳು ತಿರಸ್ಕೃತಗೊಂಡಿದೆ ಎಂದು ಬೆಂಗಳೂರು ಶಿಕ್ಷಕರ ಕ್ಷೇತ್ರ ಹಾಗೂ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣಾಧಿಕಾರಿ ಹಾಗೂ ಬೆಂಗಳೂರು ಪ್ರಾದೇಶಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್‌ಡಿಎ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಮೂರನೇ ಮತ್ತು ಕೊನೆಯ ಸುತ್ತಿನ ಮತ ಎಣಿಕೆಯ ಬಳಿಕ ಪುಟ್ಟಣ್ಣಗೆ 9902, ಎ.ಪಿ.ರಂಗನಾಥ್‌ಗೆ 10,810 ಮತಗಳ ಬಂದಿವೆ. ಫಲಿತಾಂಶಕ್ಕೂ ಮುನ್ನವೇ ಸಿಹಿ ಹಂಚಿ, ಪಟಾಕಿ ಸಿಡಿಸಿ ಎನ್‌ಡಿಎ ಕಾರ್ಯಕರ್ತರು ಸಂಭ್ರಮಿಸಿದರು. ಇದೇ ವೇಳೆ ಎನ್‌ಡಿಎ ನಾಯಕರ ಪರವಾಗಿ ಕಾರ್ಯಕರ್ತರು ಘೋಷಣೆಗಳನ್ನು ಕೂಗಿದರು. ಮೂರನೇ ಸುತ್ತಿನ ಮತ ಎಣಿಕೆ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಆಭ್ಯರ್ಥಿ ಪುಟ್ಟಣ್ಣ ಅವರು ಮತ ಎಣಿಕೆ ಕೇಂದ್ರದಿಂದ ನಿರ್ಗಮಿಸಿದರು. ಮೊದಲ ಸುತ್ತಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಮುನ್ನಡೆ ಸಾಧಿಸಿದ್ದರು. ಎರಡನೇ ಸುತ್ತು ಮತ್ತು ಮೂರನೇ ಸುತ್ತಿನಲ್ಲಿ ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಮುನ್ನಡೆ ಕಾಯ್ದುಕೊಂಡಿದ್ದರು. ನಗರದ ಮೈಸೂರು ಬ್ಯಾಂಕ್ ವೃತ್ತದ ಬಳಿ ಇರುವ ಸರ್ಕಾರಿ ಕಲಾ ಹಾಗೂ ವಿಜ್ಞಾನ ಕಾಲೇಜು ಆವರಣದಲ್ಲಿ ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತ ಎಣಿಕೆ ನಡೆಯಿತು.

ಸಿದ್ಧವಾಗಿದ್ದ ವಿಜಯೋತ್ಸವದ ವಾಹನ!

ಮತ ಎಣಿಕೆ ಆರಂಭವಾದಾಗಿನಿಂದಲೂ ಪುಟ್ಟಣ್ಣ ಪಾಳಯದಲ್ಲಿ ಗೆಲುವಿನ ವಿಶ್ವಾಸ ಮುಗಿಲು ಮುಟ್ಟಿತ್ತು. ಶಿಕ್ಷಕರ ಕ್ಷೇತ್ರದಲ್ಲಿ ಪುಟ್ಟಣ್ಣ ಅವರಿಗಿದ್ದ ಹಿಡಿತ ಮತ್ತು ವರ್ಚಸ್ಸಿನಿಂದಾಗಿ ಈ ಬಾರಿಯೂ ಅವರೇ ಸುಲಭವಾಗಿ ಗೆಲ್ಲಲಿದ್ದಾರೆ ಎಂದೇ ಕಾಂಗ್ರೆಸ್ ಕಾರ್ಯಕರ್ತರು ಭಾವಿಸಿದ್ದರು. ಅಷ್ಟೇ ಅಲ್ಲದೆ, ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಬೆಂಗಳೂರಿನ ರಸ್ತೆಗಳಲ್ಲಿ ಭರ್ಜರಿಯಾಗಿ ಮೆರವಣಿಗೆ ಮಾಡಲು ಬೆಂಬಲಿಗರು ಹೂವಿನಿಂದ ಅಲಂಕೃತಗೊಂಡ ತೆರೆದ ವಾಹನವನ್ನೂ ಮತ ಎಣಿಕೆ ಕೇಂದ್ರದ ಬಳಿ ಸಿದ್ಧವಾಗಿ ತಂದು ನಿಲ್ಲಿಸಿದ್ದರು. ಆದರೆ, ಎಣಿಕೆ ಮುಗಿದು ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಪರವಾಗಿ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಇಡೀ ಕಾಂಗ್ರೆಸ್ ಪಾಳಯ ಸ್ತಬ್ಧವಾಯಿತು. ವಿಜಯೋತ್ಸವಕ್ಕೆಂದು ತಂದಿದ್ದ ಆ ತೆರೆದ ವಾಹನ ಮೂಕವಿಸ್ಮಿತವಾಗಿ ನಿಂತಲ್ಲೇ ನಿಲ್ಲುವಂತಾಯಿತು. ವಿಧಾನ ಪರಿಷತ್ತಿನಲ್ಲಿ ಈ ಹಿಂದೆಯೇ 5 ಬಾರಿ ಸದಸ್ಯರಾಗಿ ಅಪಾರ ಅನುಭವ ಹೊಂದಿದ್ದ ಪುಟ್ಟಣ್ಣ, ಈ ಚುನಾವಣೆಯಲ್ಲಿ ಗೆದ್ದಿದ್ದರೆ ಸತತ 6ನೇ ಬಾರಿಗೆ ಪರಿಷತ್ ಪ್ರವೇಶಿಸಿ ಹೊಸ ಇತಿಹಾಸ ಸೃಷ್ಟಿಸುತ್ತಿದ್ದರು. ಆದರೆ ಶಿಕ್ಷಕ ಮತದಾರರು ಈ ಬಾರಿ ಬದಲಾವಣೆ ಬಯಸಿದ್ದು, ಎನ್‌ಡಿಎ ಮೈತ್ರಿಗೆ ಜೈ ಎಂದಿದ್ದಾರೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಒಟ್ಟು ಮತದಾರರು - 27,405

ಚಲಾವಣೆಯಾಗಿದ್ದ ಮತಗಳು - 22,913

ಒಟ್ಟು ಸಿಂಧು ಮತಗಳು - 21,056

ಒಟ್ಟು ಅಸಿಂಧು ಮತಗಳು - 1,857

ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಪಡೆದ ಮತಗಳು - 9,902

ಎನ್ ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಪಡೆದ ಮತಗಳು - 10,810

ಗೆಲುವಿನ ಅಂತರ - 908

1 ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳ ಲ್ಲಿ ಮೈತ್ರಿಗೆ ಗೆಲುವು

2 ಜೆಡಿಎಸ್ ಅಭ್ಯರ್ಥಿ ಎ.ಪಿ. ರಂಗನಾಥ್ ಗೆಲುವು.

3 ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿ ಶಶೀಲ್ ಜಿ. ನಮೋಶಿ ಗೆಲುವು

ರಾಜ್ಯದ ಎಸ್‌ಐಆರ್ ಅಂತಿಮ ಮತದಾರರ ಪಟ್ಟಿ ಪ್ರಕಟ: 1000ಕ್ಕೂ ಕಡಿಮೆ ವಿದೇಶಿಗರ ಪತ್ತೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ. ರಾಜ್ಯದಲ್ಲಿ ಒಟ್ಟು 99.32 ಲಕ್ಷ ಮತದಾರರು ಅಂತಿಮ ಮತದಾರರ ಪಟ್ಟಿಯಿಂದ ಡಿಲೀಟ್ ಆಗಿದೆ. ಎಸ್‌ಐಆರ್ ಸಂಬಂಧ ರಾಜ್ಯದಲ್ಲಿ ಸುಮಾರು 1000 ಆಸುಪಾಸು ವಿದೇಶಿ ಪೌರತ್ವ ಹೊಂದಿದವರನ್ನು ಗುರುತಿಸಿ, ಅಂತಿಮ ಮತದಾರರ ಪಟ್ಟಿಯಿಂದ ಕೈ ಬಿಡಲಾಗಿದೆ. ಕೊನೆಗೂ ರಾಜ್ಯದಲ್ಲಿ ಎಸ್‌ಐಆರ್ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಿದೆ. ರಾಜ್ಯದಲ್ಲಿ ಎಸ್‌ಐಆರ್ ಬಳಿಕ ಇದೀಗ ರಾಜ್ಯದಲ್ಲಿ

ಅರ್ಹ ಮತದಾರರ ಸಂಖ್ಯೆ 4.55 ಕೋಟಿ. ಎಸ್‌ಐಆರ್ ಪೂರ್ವದಲ್ಲಿ ರಾಜ್ಯದಲ್ಲಿ 5.54 ಕೋಟಿ ಮತದಾರರು ಇದ್ದರು. ಆ ಮೂಲಕ ಎಸ್‌ಐಆರ್ ಬಳಿಕ 99.32 ಲಕ್ಷ ಮತದಾರರು ಅಂತಿಮ ಮತದಾರರ ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ.: ಆ.24ಕ್ಕೆ ಎಸ್‌ಐಆರ್ ನ ಕರಡು ಮತದಾರರ ಪಟ್ಟಿಯಲ್ಲಿ 4.46 ಕೋಟಿ ಮತದಾರರು ಇದ್ದರು. ಈ ಪೈಕಿ 2002ರ ಮತದಾರರ ಪಟ್ಟಿಯಲ್ಲಿನ ವಿವರ ವ್ಯತ್ಯಾಸವಿರುವ ಹಾಗೂ 2002ರ ಮತದಾರರ ವಿವರ ಲಭ್ಯವಿಲ್ಲದ ಒಟ್ಟು 43.82 ಲಕ್ಷ ಮತದಾರರಿಗೆ ನೋಟಿಸ್ ನೀಡಲಾಗಿತ್ತು. ಈ ಎಲ್ಲರೂ ಅಗತ್ಯ 12 ದಾಖಲೆಗಳೊಂದಿಗೆ ತಮ್ಮ ಪೌರತ್ವ ಸಾಬೀತುಪಡಿಸಬೇಕಾಗಿತ್ತು. ಈ ಪೈಕಿ ವಿಚಾರಣೆ ನಡೆಸಿದ ಇಆರ್ ಒಗಳು 61,867 ಮತದಾರರನ್ನು ಅನರ್ಹಗೊಳಿಸಿದ್ದಾರೆ. ಎಸ್‌ಐಆರ್ ವೇಳೆ ರಾಜ್ಯದಲ್ಲಿ ಕೇವಲ 1,000 ಮಂದಿ ವಿದೇಶಿ ಪೌರತ್ವ ಹೊಂದಿದವರನ್ನು ಪತ್ತೆ ಮಾಡಲಾಗಿದ್ದು, ಅವರನ್ನು ಅಂತಿಮ ಮತದಾರರ ಪಟ್ಟಿಯಿಂದ ಡಿಲೀಟ್ ಮಾಡಲಾಗಿದೆ. ದಕ್ಷಿಣ ಕನ್ನಡದಲ್ಲಿ ಸುಮಾರು 45, ಉಡುಪಿಯಲ್ಲಿ ಸುಮಾರು 40, ಉತ್ತರ ಕನ್ನಡದಲ್ಲಿ 22 ಮತ್ತು ಬೆಂಗಳೂರು ಉತ್ತರದಲ್ಲಿ ಸುಮಾರು 584 ವಿದೇಶಿಗರನ್ನು ಗುರುತು ಮಾಡಲಾಗಿದೆ. ನೋಟೀಸ್ ನೀಡಿ ವಿಚಾರಣೆ ಮಾಡಿದಾಗ ಅವರ ವಿದೇಶಿ ಪೌರತ್ವ ಪತ್ತೆಯಾಗಿದೆ.

ಡಿಲೀಟ್ ಮಾಡಲಾದ ಮತದಾರರಲ್ಲಿ ನೇಪಾಳದವರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಪಾಕಿಸ್ತಾನದ ಇಬ್ಬರು, ಜೊತೆಗೆ ಅಮೆರಿಕ, ಕೆನಡಾ, ನಾರ್ವೆ ಸೇರಿ ಕೆಲ ಇತರ ದೇಶಗಳ ನಾಗರಿಕತ್ವ ಹೊಂದಿದವರೂ ಪತ್ತೆಯಾಗಿದ್ದು, ಪಟ್ಟಿಯಿಂದ ಅವರನ್ನು ಡಿಲೀಟ್ ಮಾಡಲಾಗಿದೆ.

ದಸರಾ ಮಾದರಿಯಲ್ಲಿ ಹಾಸನಾಂಬೆ ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ; ಕೆಎಸ್‌ಆರ್‌ಟಿಸಿಯಿಂದ ಟೂರ್ ಪ್ಯಾಕೇಜ್

• ಉದಯವಾಹಿನಿ, ಬೆಂಗಳೂರು

ಇತ್ತೀಚಿನ ಮಳೆಯಿಂದಾಗಿ ಹಾಸನಾಂಬೆ ಜಾತ್ರೆಯ ಸಿದ್ಧತೆಗಳಿಗೆ ಅಡಚಣೆಯಾಗಿದ್ದರೂ, ಇದೀಗ ಮಳೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಸಿದ್ಧತೆಗಳನ್ನು ಚುರುಕುಗೊಳಿಸಲಾಗಿದೆ. ನಿಗದಿತ ಅವಧಿಯಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ತಿಳಿಸಿದರು. ನಗರದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಹಾಸನಾಂಬೆ ಉತ್ಸವಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಲಾಗಿದ್ದು, ನ.6ರಂದು ಹಾಸನಕ್ಕೆ ಭೇಟಿ ನೀಡಲು ದಿನಾಂಕ ನಿಗದಿಯಾಗಿದೆ ಎಂದರು.

ಹಾಸನಾಂಬೆ ಉತ್ಸವದ ಅಂಗವಾಗಿ ನಗರದಲ್ಲಿ ಮೈಸೂರು ಮಾದರಿಯ ವಿದ್ಯುತ್ ದೀಪಾಲಂಕಾರ ಮಾಡಲು ಕ್ರಮ ಕೈಗೊಳ್ಳಲಾಗುವುದು. ಉತ್ಸವದ ಸಿದ್ಧತೆಗಳನ್ನು ಖುದ್ದಾಗಿ ಪರಿಶೀಲಿಸಿ, ಯಾವುದೇ ಲೋಪದೋಷಗಳಿದ್ದರೆ ಅವುಗಳನ್ನು ತಕ್ಷಣ ಸರಿಪಡಿಸಲಾಗುವುದು. ಕಳೆದ ವರ್ಷದ ಅನುಭವದ ಆಧಾರದಲ್ಲಿ ಈ ಬಾರಿಯೂ ಅಗತ್ಯ ವ್ಯವಸ್ಥೆಗಳನ್ನು ರೂಪಿಸಲಾಗಿದ್ದು, ಉತ್ಸವವನ್ನು ಯಶಸ್ವಿಯಾಗಿ ನಡೆಸಲು ಜಿಲ್ಲಾಡಳಿತ ಸಜ್ಜಾಗಿದೆ ಎಂದು ಹೇಳಿದರು. ಹಾಸನಾಂಬೆ ದರ್ಶನಕ್ಕೆ ಸ್ಥಳೀಯರಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರತಿಕ್ರಿಯಿಸಿದ ಸಚಿವರು, ಕಳೆದ ವರ್ಷ ಅನುಸರಿಸಿದ ವ್ಯವಸ್ಥೆಯನ್ನೇ



ಈ ಬಾರಿಯೂ ಮುಂದುವರಿಸಲಾಗುವುದು ಎಂದು ಸ್ಪಷ್ಟಪಡಿಸಿದರು.ಕಳೆದ ವರ್ಷದ ವ್ಯವಸ್ಥೆ ಯಶಸ್ವಿಯಾಗಿದ್ದು, ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ಮತ್ತು ಮೆಚ್ಚುಗೆ ವ್ಯಕ್ತವಾಗಿತ್ತು.

ಈ ಹಿನ್ನೆಲೆಯಲ್ಲಿ ಅದೇ ಮಾದರಿಯನ್ನು ಮುಂದುವರಿಸಲು ನಿರ್ಧರಿಸಲಾಗಿದೆ ಎಂದರು. ಜಾತ್ರೆಗೆ ಆಗಮಿಸುವ ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು ಹಾಗೂ ಉತ್ಸವದ ವ್ಯವಸ್ಥೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸುವುದು ಜಿಲ್ಲಾಡಳಿತದ ಆದ್ಯತೆಯಾಗಿದೆ ಎಂದು ತಿಳಿಸಿದರು. ವರ್ಷಕ್ಕೊಮ್ಮೆ ಭಕ್ತರಿಗೆ ದರ್ಶನ ಭಾಗ್ಯ ನೀಡುವ ಐತಿಹಾಸಿಕ ಹಾಸನಾಂಬ ದೇವಿಯ ದರ್ಶನಕ್ಕೆ ತೆರಳುವ ಭಕ್ತರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ವತಿಯಿಂದ ವಿಶೇಷ ಪ್ರವಾಸ ಪ್ಯಾಕೇಜ್‌ಗಳನ್ನು ಪರಿಚಯಿಸಿದೆ. ಅ.30 ರಿಂದ ನ.10 ರವರೆಗೆ ಬೆಂಗಳೂರು ಮತ್ತು ಮೈಸೂರಿನಿಂದ ಐರಾವತ ಹಾಗೂ ಅಶ್ವಮೇಧ ಬಸ್‌ಗಳಲ್ಲಿ ಒಂದು ದಿನದ ಪ್ರವಾಸ ಸೌಲಭ್ಯ ಕಲ್ಪಿಸಲಾಗಿದೆ. ಹಾಸನಾಂಬ ದೇವಿಯ ದರ್ಶನದ ಜೊತೆಗೆ ಸಿದ್ದೇಶ್ವರ ದೇವಾಲಯ ಮತ್ತು ದೇವಿಗೆರೆ ಕಲ್ಯಾಣಿ ದೇವಾಲಯವನ್ನೂ ವೀಕ್ಷಿಸಲು ಅವಕಾಶವಿದೆ. ಮೈಸೂರಿನಿಂದ ಹೊರಡುವ ಪ್ಯಾಕೇಜ್‌ನಲ್ಲಿ ಹೊಳೆನರಸೀಪುರದ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯಕ್ಕೂ ಭೇಟಿ ನೀಡಬಹುದು. ಪ್ರತಿ ಪ್ರಯಾಣಿಕರ ಟಿಕೆಟ್ ದರದಲ್ಲಿ 1 ಸಾವಿರ ರೂ. ಮೌಲ್ಯದ ದೇವಿಯ ಅಧಿಕೃತ ವಿಶೇಷ ಪ್ರವೇಶ ದರ್ಶನದ ಟಿಕೆಟ್ ಸೇರಿಸಲಾಗಿದೆ.

ನಗರದಿಂದ ಎರಡು ಬಗೆಯ ಪ್ಯಾಕೇಜ್

ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಿಂದ ಬೆಳಗ್ಗೆ 6 ಗಂಟೆಗೆ ಎರಡೂ ಮಾದರಿಯ ಬಸ್‌ಗಳು ಹೊರಡಲಿವೆ.ಐರಾವತ ವೋಲ್ವೊ ಬಸ್‌ನಲ್ಲಿ ತೆರಳಿ ಸಂಜೆ 7 ಗಂಟೆಗೆ ಹಿಂದಿರುಗುವ ಪ್ಯಾಕೇಜ್‌ನ ದರ ಪ್ರತಿ ವ್ಯಕ್ತಿಗೆ 2500 ರೂ. ಅಶ್ವಮೇಧ ಬಸ್‌ನಲ್ಲಿ ತೆರಳುವವರಿಗೆ ಪ್ರತಿ ವ್ಯಕ್ತಿಗೆ 2 ಸಾವಿರ ರೂ.ದರ ನಿಗಧಿಪಡಿಸಲಾಗಿದ್ದು, ಸಂಜೆ 8 ಗಂಟೆಗೆ ಬೆಂಗಳೂರು ತಲುಪುವ ವೇಳಾಪಟ್ಟಿ ರೂಪಿಸಲಾಗಿದೆ. ಈ ಎರಡು ಪ್ಯಾಕೇಜ್‌ಗಳಲ್ಲಿ ಒಟ್ಟು ಪ್ರಯಾಣದ ದೂರ 380 ಕಿ.ಮೀ ಆಗಿದೆ. ಪ್ಯಾಕೇಜ್ ದರದಲ್ಲಿ ಹಾಸನಾಂಬ ದೇವಿಯ 1 ಸಾವಿರ ರೂ. ಮೌಲ್ಯದ ವಿಶೇಷ ದರ್ಶನದ ಟಿಕೆಟ್ ಸೇರಿದ್ದರೂ, ಊಟ, ಉಪಹಾರ ಮತ್ತು ದೇವಾಲಯಗಳಲ್ಲಿ ವಿಧಿಸುವ ಇತರ ಪ್ರವೇಶ ಶುಲ್ಕಗಳನ್ನು ಪ್ರಯಾಣಿಕರೇ ಪ್ರತ್ಯೇಕವಾಗಿ ಭರಿಸಬೇಕು.

ಸ್ಟಿಂಗ್ ಚರ್ಚೆ ನಡುವೆ ಹೆಚ್.ಡಿ. ಕುಮಾರಸ್ವಾಮಿ ಭೇಟಿಯಾದ ಎಂಎಲ್ಸಿ ರಾಜೇಂದ್ರ, ರಾಜಣ್ಣ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ಸ್ಟಿಂಗ್ ಕಾರ್ಯಾಚರಣೆಯ ಚರ್ಚೆಗಳು ಹೆಚ್ಚು ಪ್ರಚಲಿತದಲ್ಲಿರುವಾಗಲೇ, ಕಾಂಗ್ರೆಸ್ ಎಂಎಲ್ಸಿ ರಾಜೇಂದ್ರ, ರಾಜಣ್ಣ ಅವರು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಮಾಜಿ ಸಚಿವ ರಾಜಣ್ಣ ಪುತ್ರರೂ ಆಗಿರುವ ರಾಜೇಂದ್ರ, ಅವರ ಈ ನಡೆ ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಪ್ರಸಕ್ತ ರಾಜಕೀಯ ಬೆಳವಣಿಗೆಗಳ ಬಗ್ಗೆ ಉಭಯ ನಾಯಕರು ಸುದೀರ್ಘ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ಈ ಹಿಂದೆ, ಸ್ಟಿಂಗ್ ಕಾರ್ಯಾಚರಣೆಯ ಕುರಿತು ಕುಮಾರಸ್ವಾಮಿ ಅವರು ಮಾತನಾಡಿದಾಗ, ರಾಜಣ್ಣ ಅವರ ಹೆಸರೂ ಪ್ರಸ್ತಾಪವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜೇಂದ್ರ, ರಾಜಣ್ಣ ಅವರ ಭೇಟಿಯು ಮಹತ್ವ ಪಡೆದುಕೊಂಡಿದೆ.

ಈ ದಿನದ ದರ ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹14,329/Gram24ct ₹13,135/Gram22ct ಬೆಳ್ಳಿ: ₹235.00/Gram

ಕಾರಿನ ಅಡಿಯಲ್ಲಿ ಸಿಲುಕಿ ವ್ಯಕ್ತಿ ಸಾವು, ಮೂವರು ವಶಕ್ಕೆ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆದ ರೋಡ್ ರೇಜ್ ಘಟನೆಯೊಂದರಲ್ಲಿ, ವ್ಯಕ್ತಿಯೊಬ್ಬರನ್ನು ಕಾರಿನಿಂದ ಡಿಕ್ಕಿ ಹೊಡೆದು ಸುಮಾರು 150 ಮೀಟರ್‌ಗಳಷ್ಟು ದೂರ ಎಳೆದುಕೊಂಡು ಹೋದ ಪರಿಣಾಮ ಅವರು ಮೃತಪಟ್ಟಿದ್ದಾರೆ.

ಈ ಘಟನೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಮೂವರು ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತ ವ್ಯಕ್ತಿಯನ್ನು ಬಿಹಾರ ಮೂಲದ ರಂಜಿತ್ ಕುಮಾರ್ ಸಾಹು ಎಂದು ಗುರುತಿಸಲಾಗಿದೆ. ಅವರು ಬಿಟಿಎಂ ಲೇಔಟ್‌ನಲ್ಲಿರುವ ಪೇಯಿಂಗ್ ಗೆಸ್ಟ್ ವಸತಿ ಗೃಹವೊಂದರಲ್ಲಿ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಘಟನೆಯು ಅಕ್ಟೋಬರ್ 21ರಂದು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಪೊಲೀಸರ ಪ್ರಕಾರ, ರಂಜಿತ್ ತನ್ನ ಸ್ನೇಹಿತರೊಂದಿಗೆ ದಸರಾ ಹಬ್ಬವನ್ನು ಆಚರಿಸಲು ಎಲೆಕ್ಟ್ರಾನಿಕ್ ಸಿಟಿಗೆ ಹೋಗಿದ್ದರು. ಅಂದು ರಾತ್ರಿ ಸುಮಾರು 1:50ರ ಸುಮಾರಿಗೆ, ದೂರುದಾರ ನಿತೀಶ್ ಮುಖಿಯಾ ಮತ್ತು ಅವರ ಸ್ನೇಹಿತರು ಗಣೇಶ ದೇವಸ್ಥಾನದ ಬಳಿಯ ಪ್ರಗತಿ ನಗರದಲ್ಲಿ ರಸ್ತೆ ದಾಟುತ್ತಿದ್ದಾಗ, ವೇಗವಾಗಿ ಬಂದ ಬಿಳಿ ಬಣ್ಣದ ಕಾರೊಂದು ಅವರತ್ತ ನುಗ್ಗಿ ಬಂದಿದೆ.

ಕಾರಿನಲ್ಲಿದ್ದವರು ವಾಹನವನ್ನು ನಿಲ್ಲಿಸಿ, ನಿತೀಶ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜಮನೆತನದ ಗೌರವಕ್ಕೆ ಚ್ಯುತಿ ತರುವ ಉದ್ದೇಶವಿಲ್ಲ: ಡಿಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ರಾಜಮನೆತನಕ್ಕೆ ನೀಡಬೇಕಾದ ಗೌರವ ಹಾಗೂ ಸಾಂಪ್ರದಾಯಿಕ ಪದ್ಧತಿಗಳಿಗೆ ಯಾವುದೇ ಚ್ಯುತಿ ತರುವ ಉದ್ದೇಶ ಸರ್ಕಾರಕ್ಕಿಲ್ಲ ಎಂದು ಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಮೈಸೂರು ದಸರಾ ಮಹೋತ್ಸವ ಆಚರಣೆ ವಿಚಾರವಾಗಿ ಮೈಸೂರು ರಾಜಮನೆತನದ ಪ್ರಮೋದಾದೇವಿ ಒಡೆಯರ್ ಅವರು ನೀಡಿರುವ ಹೇಳಿಕೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ದಸರಾ ಮಹೋತ್ಸವ ಸರ್ಕಾರದ ಕಾರ್ಯಕ್ರಮವೇ ಹೊರತು ಡಿಕೆಶಿ ಕಾರ್ಯಕ್ರಮವಲ್ಲ. ನಮ್ಮ ಕಡೆಯಿಂದ ಏನಾದರೂ ತಪ್ಪಾಗಿದ್ದರೆ ಅದನ್ನು ತಿದ್ದಿಕೊಳ್ಳಲು ನಾವು ಸಿದ್ಧರಿದ್ದೇವೆ ಎಂದು

ಉದಯವಾಹಿನಿ ಚಿತ್ರ

ತಿಳಿಸಿದರು. ಪ್ರಮೋದಾದೇವಿ ಅವರು ನೀಡಿರುವ ಹೇಳಿಕೆಯನ್ನು ನಾನು ಇನ್ನೂ ಪೂರ್ಣವಾಗಿ ನೋಡಿಲ್ಲ. ಅವರು ಏನು ಹೇಳಿದ್ದಾರೆ ಎಂಬುದನ್ನು ಗಮನಿಸಿ, ಅವರೊಂದಿಗೆ ಚರ್ಚೆ ಮಾಡುತ್ತೇನೆ. ಇದು ನನ್ನ ವೈಯಕ್ತಿಕ ವಿಚಾರವೂ ಅಲ್ಲ, ಪ್ರಮೋದಾದೇವಿ ಅವರ ವೈಯಕ್ತಿಕ ವಿಚಾರವೂ ಅಲ್ಲ ಇದು ಇಡೀ ರಾಜ್ಯದ ಹೆಮ್ಮೆಯ ಹಬ್ಬದ ವಿಚಾರ ಎಂದರು. ಮೊದಲಿನಿಂದಲೂ ರಾಜಮನೆತನಕ್ಕೆ ಯಾವ ರೀತಿ ಗೌರವ ನೀಡಬೇಕೋ, ಆ ಪರಂಪರೆಯ ಪ್ರಕಾರವೇ ಎಲ್ಲವನ್ನೂ ಮಾಡಿಕೊಂಡು ಬರಲಾಗಿದೆ.

ಹಳೆಯ ಪದ್ಧತಿ ಏನಿದೆಯೋ ಅದನ್ನೇ ಮುಂದುವರಿಸಿದ್ದೇವೆ. ನನಗೆ ಇತಿಹಾಸದ ಎಲ್ಲಾ ಸೂಕ್ಷ್ಮಗಳು ಗೊತ್ತಿಲ್ಲದಿರಬಹುದು, ಆದರೆ ಪರಂಪರೆಗೆ ಗೌರವ ನೀಡಿದ್ದೇವೆ.

ಈಗ ಪ್ರಜಾಪ್ರಭುತ್ವ ವ್ಯವಸ್ಥೆ ಇದೆ. ಪ್ರಜಾಪ್ರಭುತ್ವ ಇರದಿದ್ದರೆ ಬೇರೆಯೇ ಇರುತ್ತಿತ್ತು, ಆದರೆ ಈಗ ನಿಯಮಗಳ ಪ್ರಕಾರ ನಡೆಯಬೇಕಾಗುತ್ತದೆ ಎಂದು ಹೇಳಿದರು.

ಖರ್ಗೆ ಆ 'ಮಹಾನ್' ವ್ಯಕ್ತಿಯ ಬಗ್ಗೆ ಮಾತನಾಡಿಲ್ಲ, ಎಲ್ಲೆಡೆ ಬೆಂಕಿ ಹಚ್ಚುವುದು ಅವರೇ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ತಂದೆಯ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ವಿವಾದಾತ್ಮಕ ಹೇಳಿಕೆಯನ್ನು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸಮರ್ಥಿಸಿಕೊಂಡಿದ್ದಾರೆ. ಇದು ವೈಯಕ್ತಿಕ ದಾಳಿಯಲ್ಲ, ಬದಲಾಗಿ ಸೈದ್ಧಾಂತಿಕ ಟೀಕೆ ಎಂದು ಅವರು ಹೇಳಿದ್ದಾರೆ.

ಬೆಂಕಿ ಇಲ್ಲದೆ ಹೊಗೆ ಬರುವುದಿಲ್ಲ ಎಂಬ ಮಾತಿದೆ. ಖರ್ಗೆ ಅವರು ಬಿಜೆಪಿ ಶೈಲಿಯಲ್ಲೇ ಮಾತನಾಡಿದ್ದಾರೆ ಎಂದು ಹೇಳಿದ ಹರಿಪ್ರಸಾದ್, ಆರ್‌ಎಸ್‌ಎಸ್) ಮತ್ತು ಬಿಜೆಪಿ ವಲಯಗಳಲ್ಲಿ 'ಮಾತೃಭೂಮಿ' (ತಾಯ್ನಾಡು) ಎನ್ನುವ ಬದಲು 'ಪಿತೃಭೂಮಿ' (ತಂದೆಯ ನಾಡು) ಮತ್ತು 'ಪುಣ್ಯಭೂಮಿ' ಎಂದು ಕರೆಯಲಾಗುತ್ತದೆ ಎಂಬುದನ್ನು ಉಲ್ಲೇಖಿಸಿದರು. ಹೀಗೆ ಹೇಳುವವರ ಲೆಕ್ಕಾಚಾರದ ಪ್ರಕಾರ ನೋಡಿದರೆ, ಅವರ ಪೂರ್ವಜರೇ ಇಲ್ಲಿಂದ ಹೊರಹೋಗಬೇಕಾಗುತ್ತದೆ ಎಂದು ಖರ್ಗೆ ಹೇಳಿದ್ದಾರೆ. ಇದೊಂದು ವೈಯಕ್ತಿಕ ಹೇಳಿಕೆಯಲ್ಲ. ಖರ್ಗೆ ಅವರು ಆ 'ಮಹಾನ್ ವ್ಯಕ್ತಿ'ಯ (ಮೋದಿ) ಬಗ್ಗೆ ಮಾತನಾಡಿಲ್ಲ, ಎಂದು ಅವರು ಸ್ಪಷ್ಟಪಡಿಸಿದರು. ಮೋದಿ ಅವರು ಕಾಂಗ್ರೆಸ್ ನಾಯಕರ ಮೇಲೆ ವೈಯಕ್ತಿಕ ದಾಳಿಗಳನ್ನು ನಡೆಸುತ್ತಿದ್ದಾರೆ ಎಂದು ಹರಿಪ್ರಸಾದ್ ಆರೋಪಿಸಿದರು. ಆ 'ಮಹಾನ್ ವ್ಯಕ್ತಿ' ಟೆಲಿಪ್ರಾಂಪ್ಟರ್‌ನಿಂದ ದೂರ ಸರಿದ ಕೂಡಲೇ, ಅವರ ಬಾಯಿಯಿಂದ 'ಜ್ಞಾನದ ಮುತ್ತುಗಳು' ಉದುರುತ್ತವೆ, ಎಂದು ಅವರು ವ್ಯಂಗ್ಯವಾಡಿದರು.

ತಂದೆ ಹೇಳಿಕೆ ಸಮರ್ಥಿಸಿಕೊಂಡ ಪ್ರಿಯಾಂಕ್ ಖರ್ಗೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ತಮ್ಮ ತಂದೆ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ಹೇಳಿಕೆಯನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಸಮರ್ಥಿಸಿಕೊಂಡಿದ್ದಾರೆ.

ಬಿಜೆಪಿ ತನ್ನದೇ ನಾಯಕರು ನೀಡಿದ ಹೇಳಿಕೆಗಳನ್ನು ಕಡೆಗಣಿಸಿ, ಈ ವಿಷಯವನ್ನು ಅನಗತ್ಯವಾಗಿ ದೊಡ್ಡದು ಮಾಡುತ್ತಿದೆ ಎಂದು ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ. ಬಿಹಾರದ ಮೊದಲ ಮುಖ್ಯಮಂತ್ರಿ ಕೃಷ್ಣ ಸಿಂಗ್ ಅವರ 139ನೇ ಜನ್ಮದಿನದ ಅಂಗವಾಗಿ ಪಾಟ್ನಾದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಈ ವಿವಾದಾತ್ಮಕ ಹೇಳಿಕೆ ನೀಡಿದ್ದರು.

ಮೋದಿ ಹೋಗುವುದಿಲ್ಲ ಎಂದು ಸಭಿಕರಲ್ಲೊಬ್ಬರು ಕೂಗಿದಾಗ, ಅದಕ್ಕೆ ಪ್ರತಿಕ್ರಿಯಿಸಿದ ಮಲ್ಲಿಕಾರ್ಜುನ ಖರ್ಗೆ, ಮೋದಿ ಕಾ ಬಾಪ್ ಭೀ ಜಾಯೇಗಾ (ಮೋದಿ ಏನ್ ಅವರ ಅಪ್ಪನ ಹೋಗುತ್ತಾರೆ) ಎಂದು ತಿರುಗೇಟು ನೀಡಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಅನಗತ್ಯ ವಿಷಯಗಳನ್ನು ದೊಡ್ಡ ವಿವಾದವನ್ನಾಗಿ ಮಾಡುವುದು ಬಿಜೆಪಿಗೆ ಇಷ್ಟ.

ಈ ಹೇಳಿಕೆಯನ್ನು ಯಾವ ಸಂದರ್ಭದಲ್ಲಿ ನೀಡಲಾಗಿದೆ ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿದ್ದ ಬಿಜೆಪಿ ಬೆಂಬಲಿಗರೊಬ್ಬರು, ಮೋದಿಯವರನ್ನು ಏನೂ ಮಾಡಲು ನಿಮ್ಮಿಂದಾಗಲಿ ಅಥವಾ ನಿಮ್ಮ ತಂದೆಯಿಂದಾಗಲಿ ಸಾಧ್ಯವಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸವಾಲು ಹಾಕಿದ್ದರು.

ನ.1ರವರೆಗೆ ಮಳೆಯಿಲ್ಲ, ಒಣಹವೆ ಮುನ್ಸೂಚನೆ ಕೊಟ್ಟ IMD..!.!

• ಉದಯವಾಹಿನಿ, ಬೆಂಗಳೂರು

ಚಂಡಮಾರುತ 'ಅರ್ನಬ್' ನೆರೆಯ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಭಾರಿ ಮಳೆ ಸುರಿಸುತ್ತಿದ್ದರೂ, ಕರ್ನಾಟಕಕ್ಕೆ ಮಳೆಯಾಗುವ ಸಾಧ್ಯತೆ ಕಡಿಮೆಯಿದೆ. ರಾಜ್ಯದಲ್ಲಿ ನವೆಂಬರ್ 1ರವರೆಗೆ ಬಹುತೇಕ ಒಣಹವೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ಹಗಲಿನ ಗರಿಷ್ಠ ತಾಪಮಾನ ಏರಿಕೆಯಾಗುವ ಹಾಗೂ ರಾತ್ರಿ ತಾಪಮಾನ ಇಳಿಕೆಯಾಗುವ ಸಾಧ್ಯತೆಯ ಬಗ್ಗೆಯೂ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಕರ್ನಾಟಕದಲ್ಲಿ ಗರಿಷ್ಠ ತಾಪಮಾನ 29ರಿಂದ 30 ಡಿಗ್ರಿ ಸೆಲ್ಸಿಯಸ್‌ನಷ್ಟಿರಲಿದ್ದು, ಕನಿಷ್ಠ ತಾಪಮಾನ 18ರಿಂದ 19 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭಾರತೀಯ ಹವಾಮಾನ ಇಲಾಖೆಯ ನಿರ್ದೇಶಕ ಎನ್. ಪುವಿಯರಸನ್ ಅವರು, ಮುಂದಿನ ಕೆಲವು ದಿನಗಳ ಕಾಲ ಕರ್ನಾಟಕದಲ್ಲಿ ಒಣಹವೆ ಮುಂದುವರಿಯಲಿದೆ. ಕೇರಳ ಕರಾವಳಿಯ ದಕ್ಷಿಣ ಭಾಗ ಮತ್ತು ಮನ್ನಾರ್ ಕೊಲ್ಲಿಯ ಸಮೀಪ ಅರಬ್ಬಿ ಸಮುದ್ರದಲ್ಲಿ ಉಂಟಾಗಿದ್ದ ಚಂಡಮಾರುತದ ಪರಿಚಲನೆಯಿಂದಾಗಿ ಕರ್ನಾಟಕದಲ್ಲಿ ಮಳೆಯಾಗುತ್ತಿತ್ತು.

ಸುಧಾರಣೆ ಜಾರಿಗೊಳಿಸುವವರೆಗೂ kpsc ಪರೀಕ್ಷೆ ನಡೆಸಬೇಡಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗವು 319 ಹುದ್ದೆಗಳನ್ನು ಭರ್ತಿ ಮಾಡಲು ನ. 15ರಂದು ನಿಗದಿಪಡಿಸಿರುವ ಪ್ರಾಥಮಿಕ ಪರೀಕ್ಷೆಯನ್ನು ಮುಂದೂಡುವಂತೆ, ಗೆಜೆಟೆಡ್ ಪ್ರೊಬೇಷನರಿ (ಕರ್ನಾಟಕ ಆಡಳಿತ ಸೇವೆ) ಹುದ್ದೆಗಳಿಗೆ ಆಕಾಂಕ್ಷಿಗಳಾಗಿರುವ ಅಭ್ಯರ್ಥಿಗಳು ಒತ್ತಾಯಿಸಿದ್ದಾರೆ.

ಹಿರಿಯ ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪ ಅವರ ನೇತೃತ್ವದ ನಿಯೋಗವೊಂದು, ಕ್ವೀನ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಪ್ರಧಾನ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದೆ.

ಈ ಮನವಿ ಪತ್ರವು ಸುಧಾರಣೆಗಳನ್ನು ತರಲು ಮತ್ತು ಆಯೋಗದ ಕಾರ್ಯನಿರ್ವಹಣೆಯಲ್ಲಿ ನಡೆದಿರಬಹುದಾದ ಅಕ್ರಮಗಳ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸಿದೆ. ಅಲ್ಲದೆ, ಶಾಸಕ ಆರ್.ವಿ. ದೇಶಪಾಂಡೆ ಅವರ ನೇತೃತ್ವದ ಸದನ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸುವವರೆಗೂ ಪರೀಕ್ಷೆಯನ್ನು ಮುಂದೂಡುವಂತೆ ಸರ್ಕಾರವನ್ನು ಕೋರಿದೆ.

ಈ ಮನವಿ ಪತ್ರವನ್ನು ಸಿದ್ಧಪಡಿಸಿದ 'ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘವು, ಆಯೋಗದ ಕಾರ್ಯನಿರ್ವಹಣೆಯ ಬಗ್ಗೆ ಗಂಭೀರ ಕಳವಳಗಳು ವ್ಯಕ್ತವಾಗಿರುವುದು ಹಾಗೂ ಅದರ ಮಾಜಿ ಪದಾಧಿಕಾರಿಗಳು ಮತ್ತು ಸದಸ್ಯರ ವಿರುದ್ಧ ಕೇಳಿಬಂದಿರುವ ಆರೋಪಗಳು ಅಭ್ಯರ್ಥಿಗಳಲ್ಲಿನ ವಿಶ್ವಾಸವನ್ನು ಕುಂದಿಸಿವೆ ಎಂದು ಆರೋಪಿಸಿದೆ.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಕಾಂಗ್ರೆಸ್ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ

ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಾಗದ ಕಾಂಗ್ರೆಸ್ ಈಗ ವೈಯಕ್ತಿಕ ನಿಂದನೆಯ ರಾಜಕಾರಣಕ್ಕೆ ಇಳಿದಿದೆ.

• ಉದಯವಾಹಿನಿ, ಬೆಂಗಳೂರು

1 ನವೆಂಬರ್ 2ಕ್ಕೆ ಪದಾಧಿಕಾರಿಗಳ ಸಭೆ
2 ಹಿರಿಯತನ ಮತ್ತು ಘನತೆಗೆ ತಕ್ಕುದಲ್ಲ
3 ಹನಿಟ್ರ್ಯಾಪ್‌ಗೆ ಒಳಪಡಿಸುವ ಹಂತಕ್ಕೆ

ಬಿಹಾರದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕ್ರಮವೊಂದರಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ತಂದೆಯ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿದ ಹೇಳಿಕೆಗೆ ರಾಜ್ಯ ಬಿಜೆಪಿ ನಾಯಕರು ಸೋಮವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಖರ್ಗೆ ಅವರ ಹೇಳಿಕೆಯನ್ನು ಖಂಡಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದ್ದು, ಪ್ರತಿಭಟನೆ ವೇಳೆ ಕಾಂಗ್ರೆಸ್ ಹಾಗೂ ಖರ್ಗೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಖರ್ಗೆ ಅವರ ಹೇಳಿಕೆ ಅವರ ಹಿರಿಯತನ ಮತ್ತು ಘನತೆಗೆ ತಕ್ಕುದಲ್ಲ. ಇದು ತೀವ್ರ ಖಂಡನೀಯ ಎಂದು ಹೇಳಿದ್ದಾರೆ.

ಈ ಹಿಂದೆ ಇದೇ ರೀತಿಯ ಹೇಳಿಕೆಗಳನ್ನು ನೀಡಿದಾಗ ಸಾರ್ವಜನಿಕರು ಹೇಗೆ ಪ್ರತಿಕ್ರಿಯಿಸಿದ್ದರು ಎಂಬುದನ್ನು ಗಮನಿಸಿ, ಅದಕ್ಕೆ ತಕ್ಕಂತೆ ನಡೆದುಕೊಳ್ಳಬೇಕು ಎಂದು ಖರ್ಗೆ ಅವರಿಗೆ ಸಲಹೆ ನೀಡಿದ್ದಾರೆ.

ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಸಾಧ್ಯವಾಗದ ಕಾಂಗ್ರೆಸ್ ಈಗ ವೈಯಕ್ತಿಕ ನಿಂದನೆಯ ರಾಜಕಾರಣಕ್ಕೆ ಇಳಿದಿದೆ. ರಾಜಕೀಯ ಚರ್ಚೆಗೆ ಪ್ರಧಾನಿಯವರ ಪೋಷಕರನ್ನು ಎಳೆದು ತರುವುದು ಕಾಂಗ್ರೆಸ್‌ನ ಹತಾಶೆ ಮತ್ತು ಕುಸಿಯುತ್ತಿರುವ ರಾಜಕೀಯ ಮಟ್ಟವನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ. ಭಾರಿ ಬಹುಮತ ಹೊಂದಿರುವ ಸರ್ಕಾರವೇ ಪತನದ

ಉದಯವಾಹಿನಿ ಚಿತ್ರ

ಅಂಚಿನಲ್ಲಿದೆ. ಒಂದು ಪ್ರಬಲ ಬಣ ಮತ್ತೊಂದು ಪ್ರಬಲ ಬಣವನ್ನು ಬ್ಲ್ಯಾಕ್‌ಮೇಲ್ ಮಾಡುವ ಹಾಗೂ ಹನಿಟ್ರ್ಯಾಪ್‌ಗೆ ಒಳಪಡಿಸುವ ಹಂತಕ್ಕೆ ತಲುಪಿದೆ ಎಂದು ಆರೋಪಿಸಿದ್ದಾರೆ. ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಖರ್ಗೆ ಹೇಳಿಕೆ ಕಾಂಗ್ರೆಸ್ ಪಕ್ಷದ ಹತಾಶೆ ಹಾಗೂ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ. ದೇಶದ ಜನರ ಮುಂದೆ ಕಾಂಗ್ರೆಸ್ ನಾಯಕರು ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಈ ನಡುವೆ ಕರ್ನಾಟಕ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆ ನವೆಂಬರ್ 2ರಂದು ಬೆಂಗಳೂರಿನಲ್ಲಿ ನಡೆಯಲಿದೆ ಎಂದು ತಿಳಿದುಬಂದಿದೆ. ರಾಜ್ಯದಲ್ಲಿ ಬಿಜೆಪಿಗೆ ಪೂರಕವಾದ ಅಲೆ ಸೃಷ್ಟಿಯಾಗುತ್ತಿದೆ ಎಂದು ಪ್ರತಿಪಾದಿಸಿದ ಅವರು, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಎದುರಿಸಲು ಪಕ್ಷ ಸಿದ್ಧವಾಗಿದೆ ಎಂದು ಹೇಳಿದ್ದಾರೆ.

> ಕಾಂಗ್ರೆಸ್‌ಗೆ ಸೂಕ್ತ ದಿಕ್ಕು ತೋರಿಸುವುದು, ಸಮತೋಲನ ಕಾಯ್ದುಕೊಳ್ಳುವುದು ಮತ್ತು ಪ್ರಬುದ್ಧ ನಾಯಕತ್ವ ನೀಡುವುದನ್ನು ಬಿಡಿ, ತಮ್ಮ ತವರು ರಾಜ್ಯದಲ್ಲೇ ಕಾಂಗ್ರೆಸ್ ಘಟಕ ಹಾಗೂ ಸರ್ಕಾರವನ್ನು ಒಗ್ಗಟ್ಟಿನಿಂದ ಮುನ್ನಡೆಸಲು ಖರ್ಗೆ ಅವರಿಗೆ ಸಾಧ್ಯವಾಗುತ್ತಿಲ್ಲ ಎಂದು ಟೀಕಿಸಿದ್ದಾರೆ.
> – ಸಂಸದ ಲಹರ್ ಸಿಂಗ್ ಸಿರೋಯಾ

2ರಿಂದ 4ರವರೆಗೆ ಕರ್ನಾಟಕ ಪ್ರವಾಸ

ಪಕ್ಷದ ರಾಜ್ಯ ಉಸ್ತುವಾರಿ ಹರೀಶ್ ದ್ವಿವೇದಿ ಅವರು ನವೆಂಬರ್ 2ರಿಂದ 4ರವರೆಗೆ ಕರ್ನಾಟಕ ಪ್ರವಾಸ ಕೈಗೊಳ್ಳಲಿದ್ದು, ಈ ಸಂದರ್ಭದಲ್ಲಿ ಹಿರಿಯ ನಾಯಕರನ್ನು ಭೇಟಿ ಮಾಡಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಖರ್ಗೆ ವಿರುದ್ಧ ಅಶೋಕ್ ಕಿಡಿ

ಕಾಂಗ್ರೆಸ್ ದೇಶ ಮತ್ತು ರಾಜ್ಯದಲ್ಲಿ ಸರ್ವನಾಶವಾಗಲು ಅಪ್ಪ ಮತ್ತು ಮಗ ಸಾಕು. ಅಲ್ಲಿ ಅಪ್ಪ ಮಲ್ಲಿಕಾರ್ಜುನ ಖರ್ಗೆ ಇಲ್ಲಿ ಮಗ ಮರಿ ಖರ್ಗೆ ಸಾಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ವ್ಯಂಗ್ಯವಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಜಿ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಮಲ್ಲಿಕಾರ್ಜುನ್ ಖರ್ಗೆ ವಿರುದ್ಧ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆ ಉದ್ದೇಶಿಸಿ ಅವರು ಮಾತನಾಡಿದರು.

16 ಗಂಟೆಯಲ್ಲಿ ಬೆಂಗಳೂರು ಟು ಮುಂಬೈ ವಂದೇ ಭಾರತ್ ಸ್ಲೀಪರ್ ರೈಲು

• ಉದಯವಾಹಿನಿ, ಬೆಂಗಳೂರು

ಅಂದಾಜು ಟಿಕೆಟ್ ದರ: ರೈಲ್ವೆಯ ಮೂಲ ದರದ ಲೆಕ್ಕಾಚಾರದ ಪ್ರಕಾರ ಅಂದಾಜು ಟಿಕೆಟ್ ದರಗಳು: 2,684 ರಿಂದ 2,750, 3,466 ರಿಂದ 3,550, 4,250 ರಿಂದ 4,350 ಇರಬಹುದು ಎನ್ನಲಾಗಿದೆ. ಆದರೆ, ಊಟ ಹಾಗೂ ಜಿಎಸ್‌ಟಿ ಸೇರಿ ಬದಲಾಗಬಹುದು.

ದೂರದ ಊರುಗಳಿಗೆ ರೈಲಿನಲ್ಲಿ ಪ್ರಯಾಣಿಸುವುದೆಂದರೆ ಸಮಯದ ವ್ಯರ್ಥ, ದಣಿವು ಎಂಬ ಕಾಲ ಇನ್ನು ಮುಗಿಯಿತು. ಅತ್ಯಾಧುನಿಕ ಸೌಲಭ್ಯ, ವಿಮಾನದಂತಹ ಆರಾಮದಾಯಕ ಅನುಭವ ನೀಡಲು ಸಜ್ಜಾಗಿರುವ ಬಹುನಿರೀಕ್ಷಿತ ವಂದೇ ಭಾರತ್ ಸ್ಲೀಪರ್ ರೈಲುಗಳು ಶೀಘ್ರದಲ್ಲೇ ಹಳಿಗೆ ಇಳಿಯಲಿವೆ.

ಅದರಲ್ಲೂ ಬೆಂಗಳೂರು ಹಾಗೂ ಮುಂಬೈ ನಡುವಿನ ಪ್ರಯಾಣಿಕರಿಗೆ ಈ ರೈಲು ಸಂಚಾರ ಕ್ರಾಂತಿಕಾರಿ ಬದಲಾವಣೆ ತರಲಿದೆ. ಅಷ್ಟಕ್ಕೂ ಈ ರೈಲು ಯಾವಾಗ ಹೊರಡುತ್ತದೆ ತಲುಪುವ ಸಮಯವೇನು? ಯಾವೆಲ್ಲ ನಿಲ್ದಾಣಗಳಲ್ಲಿ ನಿಲ್ಲುತ್ತದೆ? ಟಿಕೆಟ್ ದರ ಎಷ್ಟು ನಿಗದಿಯಾಗಬಹುದು. ಇದೇ ನವೆಂಬರ್ 1 ರಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬೆಂಗಳೂರು ಮತ್ತು ಮುಂಬೈ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ನಡುವೆ ಸಂಚರಿಸಲಿದ್ದು, ಸುಮಾರು 1,000 ಕಿ.ಮೀ ದೂರವನ್ನು 16 ಗಂಟೆಗಳಲ್ಲಿ ಕ್ರಮಿಸಲಿದೆ. ಈ ಮೂಲಕ ಇದು ಸಾಮಾನ್ಯ ರೈಲುಗಳಿಗಿಂತ (ಉದಾಹರಣೆಗೆ ಉದ್ಯಾನ್ ಎಕ್ಸ್‌ಪ್ರೆಸ್) ಸುಮಾರು 5 ರಿಂದ 6 ಗಂಟೆಗಳ ಪ್ರಯಾಣದ ಸಮಯವನ್ನು ಉಳಿಸಲಿದೆ. ಅದರಂತೆ, ಸೋಮವಾರ ಹೊರತುಪಡಿಸಿ ರೈಲು ಸಂಖ್ಯೆ 27652 ಬೆಂಗಳೂರಿನಿಂದ ರಾತ್ರಿ 10:00 ಕ್ಕೆ ಹೊರಟು, ಮರುದಿನ ಮಧ್ಯಾಹ್ನ 1:50 ಕ್ಕೆ ಮುಂಬೈ ತಲುಪಲಿದೆ. ರೈಲು ಸಂಖ್ಯೆ 27651 ಮಂಗಳವಾರ ಹೊರತುಪಡಿಸಿ ಮುಂಬೈನಿಂದ ರಾತ್ರಿ 10:30 ಕ್ಕೆ ಹೊರಟು, ಮರುದಿನ ಮಧ್ಯಾಹ್ನ 2:50 ಕ್ಕೆ ಬೆಂಗಳೂರು ತಲುಪಲಿದೆ. ಇನ್ನು ಮಾರ್ಗ ಮಧ್ಯ ಕಲ್ಯಾಣ್, ಪುಣೆ, ಸೋಲಾಪುರ, ಕಲಬುರಗಿ, ರಾಯಚೂರು, ಗುಂತಕಲ್ ಮತ್ತು ಅನಂತಪುರದಂತಹ ಪ್ರಮುಖ ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ.

2 ದಿನಗಳ ಬಳಿಕ ದಂಪತಿ ಮೃತದೇಹ ಪತ್ತೆ..!

• ಉದಯವಾಹಿನಿ, ಬೆಂಗಳೂರು

ಗಂಗಮ್ಮನಗುಡಿ ಸಮೀಪದ ಕಮ್ಮಗೊಂಡನಹಳ್ಳಿಯಲ್ಲಿ ಅಕ್ರಮ ಗ್ಯಾಸ್ ಮರುಪೂರಣ ಅಂಗಡಿಯಲ್ಲಿ ಸಂಭವಿಸಿದ ಭಾರೀ ಅಗ್ನಿ ಅವಘಡದಲ್ಲಿ ದಂಪತಿಗಳು ಮೃತಪಟ್ಟಿದ್ದು, ದುರ್ಘಟನೆ ನಡೆದು 2 ದಿನಗಳ ಬಳಿಕ ಇಬ್ಬರ ಮೃತದೇಹಗಳು ಪತ್ತೆಯಾಗಿವೆ.

ಕಟ್ಟಡದ ಮೊದಲ ಮಹಡಿಯಲ್ಲಿ ದಂಪತಿಗಳ ಮೃತದೇಹ ಸೋಮವಾರ ಪತ್ತೆಯಾಗಿದ್ದು, ದಟ್ಟ ಹೊಗೆಯಿಂದ ಉಸಿರುಗಟ್ಟಿ ಇಬ್ಬರೂ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಮೃತರನ್ನು 27 ವರ್ಷದ ಆಕಾಶ್ ಬಸವರಾಜ್ ಮತ್ತು 24 ವರ್ಷದ ನಾಗರತ್ನ ಎಂದು ಗುರುತಿಸಲಾಗಿದೆ.

ಗ್ಯಾಸ್ ಮರುಪೂರಣ ಅಂಗಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 20ಕ್ಕೂ ಹೆಚ್ಚು ಗ್ಯಾಸ್ ಸಿಲಿಂಡರ್‌ಗಳು ಸರಣಿ ಸ್ಫೋಟಗೊಂಡಿದ್ದವು. ಆರಂಭದಲ್ಲಿ ಪೊಲೀಸರು ಮತ್ತು ಅಗ್ನಿಶಾಮಕ ಸಿಬ್ಬಂದಿ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಭಾವಿಸಿದ್ದರು.

JDS ಕಾರ್ಯಕರ್ತನ ಪತ್ನಿ, ಸ್ನೇಹಿತೆ ವಿರುದ್ಧ ಕೇಸ್ ದಾಖಲು..!

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆಗೆ ತೆರಳಿದ್ದ ಸಿಸಿಬಿ ಮಹಿಳಾ ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ನಡೆಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದ ಸದಸ್ಯ ಮೋಹನ್ ಗೌಡ ಅವರ ಪತ್ನಿ ಪವಿತ್ರಾ ಮತ್ತು ಅವರ ಸ್ನೇಹಿತೆಯ ವಿರುದ್ಧ ಬೆಂಗಳೂರಿನ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಬಂಧಿಸಿದ ಎನ್ನಲಾದ ಸ್ಟಿಂಗ್ ಆಪರೇಷನ್ ವಿಡಿಯೋ ಪ್ರಕರಣದ ತನಿಖೆಯ ಭಾಗವಾಗಿ ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದ ಸದಸ್ಯರೊಬ್ಬರ ನಿವಾಸದಲ್ಲಿ ಶೋಧ ನಡೆಸುವ ವೇಳೆ ಮಹಿಳಾ ಪೊಲೀಸ್ ಇನ್‌ಸ್ಪೆಕ್ಟರ್ ಮೇಲೆ ಹಲ್ಲೆ ನಡೆಸಿ, ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪ ಕೇಳಿ ಬಂದಿದೆ. ಈ ಸಂಬಂಧ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಮಹಿಳಾ ರಕ್ಷಣಾ ವಿಭಾಗದ ಇನ್‌ಸ್ಪೆಕ್ಟರ್ ಕವಿತಾ ಜಿ.ಎಂ. ಅವರು ಅಕ್ಟೋಬರ್ 24ರಂದು

ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದ ಸದಸ್ಯ ಮೋಹನ್ ಗೌಡ ಅವರ ಪತ್ನಿ ಪವಿತ್ರಾ ಮತ್ತು ಅವರ ಸ್ನೇಹಿತೆ ಪವಿತ್ರಾ ಎಂಬುವವರ ವಿರುದ್ಧ ದೂರು ನೀಡಲಾಗಿದೆ.

ಮೋಹನ್ ಗೌಡ ಅವರಿಗೆ ಶೋಧನಾ ವಾರಂಟ್ ಜಾರಿಗೊಳಿಸಿದ ಅಧಿಕಾರಿಗಳು ಸಂಜೆ 5ರಿಂದ 6 ಗಂಟೆಯವರೆಗೆ ಮನೆಯಲ್ಲಿ ಶೋಧ ನಡೆಸಿದ್ದರು. ಈ ವೇಳೆ ಪರಿಶೀಲನೆಗಾಗಿ ತಮ್ಮ ಮೊಬೈಲ್ ಫೋನ್ ನೀಡಲು ಮೋಹನ್ ಗೌಡ ಅವರ ಪತ್ನಿ ಪವಿತ್ರಾ ನಿರಾಕರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಕರ್ತವ್ಯ ನಿರ್ವಹಣೆಗೆ ಅಡ್ಡಿ: ಕವಿತಾ ಅವರು ಮೊಬೈಲ್ ಫೋನ್ ಪಡೆಯಲು ಮುಂದಾದಾಗ ಪವಿತ್ರಾ ಮತ್ತು ಅವರ ಸ್ನೇಹಿತೆ ಇನ್‌ಸ್ಪೆಕ್ಟರ್ ಅವರನ್ನು ಪ್ರಶ್ನಿಸಿ, ಕೈಗಳನ್ನು ಹಿಡಿದು ಬಲವಂತವಾಗಿ ಎಳೆದಾಡಿದ್ದಾರೆ. ಇದರಿಂದ ಅವರ ಕರ್ತವ್ಯ ನಿರ್ವಹಣೆಗೆ ಅಡ್ಡಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫ್ರೀಡಂ ಪಾರ್ಕ್ ಪ್ರತಿಭಟನೆಗೆ ಸೀಮಿತಗೊಳಿಸಬೇಡಿ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಹೃದಯ ಭಾಗದಲ್ಲಿರುವ ಫ್ರೀಡಂ ಪಾರ್ಕ್ ಅನ್ನು ಕೇವಲ ಪ್ರತಿಭಟನೆಗಳಿಗೆ ಸೀಮಿತಗೊಳಿಸಬಾರದು. ಈ ಹಿಂದೆ 2021ರಲ್ಲಿ ಫ್ರೀಡಂ ಪಾರ್ಕ್ ಹೊರತಾಗಿ ಬೇರೆ ಪ್ರದೇಶದಲ್ಲಿ ಪ್ರತಿಭಟನೆ ನಡೆಸಬಾರದು ಎಂಬ ಪೊಲೀಸ್ ಆದೇಶವನ್ನು ಹಿಂಪಡೆಯಬೇಕು.

ಸಂವಿಧಾನದ ದಿನವಾಗಿರುವ ನವೆಂಬರ್ 26ರೊಳಗೆ ಈ ಆದೇಶವನ್ನು ಹಿಂಪಡೆಯದಿದ್ದರೆ, ನವೆಂಬರ್ 28ರಂದು ನಗರದಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ವಿವಿಧ ನಾಗರಿಕ ಸಂಘಟನೆಗಳು ಕರೆ ನೀಡಿವೆ.

ನಡೆದ ದುಂಡುಮೇಜಿನ ಸಭೆಯಲ್ಲಿ ಕಾರ್ಮಿಕ ಸಂಘಟನೆಗಳು, ದಲಿತ, ಮಹಿಳಾ, ವಿದ್ಯಾರ್ಥಿ, ಪರಿಸರ ಮತ್ತು ನಾಗರಿಕ ಸ್ವಾತಂತ್ರ್ಯ ಗುಂಪುಗಳ ಪ್ರತಿನಿಧಿಗಳು ಹಾಗೂ ಎಲ್‌ಜಿಬಿಟಿಕ್ಯೂ ಸಂಘಟನೆಯ ಸುಮಾರು 100 ಸದಸ್ಯರು ಪಾಲ್ಗೊಂಡು ಈ ಕುರಿತು ಚರ್ಚಿಸಿದವು. ಕೇವಲ ಫ್ರೀಡಂ ಪಾರ್ಕ್ ಹೊರತಾಗಿ ಬೇರೆಡೆ ಪ್ರತಿಭಟನೆಗೆ ವಿಧಿಸಲಾದ ನಿರ್ಬಂಧಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಆಗ್ರಹಿಸಿದವು. ಈ ಪೊಲೀಸ್ ಆದೇಶವು ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ವಾದಿಸಿದ ಅವರು, ಹೈಕೋರ್ಟ್ ಆದೇಶದ ಮೇರೆಗೆ ಈ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂಬ ಹೇಳಿಕೆಯು ತಪ್ಪಾಗಿದೆ ಎಂದು ಅವರು ತಿಳಿಸಿದರು. ಇತಿಹಾಸಕಾರ ರಾಮಚಂದ್ರ ಗುಹಾ ಮಾತನಾಡಿ, ಈ ನಿರ್ಬಂಧಗಳು ಕಾಂಗ್ರೆಸ್ ಸರ್ಕಾರದ ದ್ವಂದ್ವ ನಿಲುವು ಬಯಲುಗೊಳಿಸಿವೆ.

ಪ್ರಜಾಪ್ರಭುತ್ವ ರಾಷ್ಟ್ರವೊಂದರ ಯಾವುದೇ ನಗರದಲ್ಲಿ, ಸಾರ್ವಜನಿಕರಿಗೆ ಕಾಣುವಂತಹ ಸ್ಥಳಗಳಲ್ಲಿ ಪ್ರತಿಭಟನೆಗಳು ನಡೆಯುತ್ತವೆ. ಈ ಹಿಂದೆ ಮೌರ್ಯ ಸರ್ಕಲ್, ಟೌನ್ ಹಾಲ್, ಮೈಸೂರು ಬ್ಯಾಂಕ್ ಸರ್ಕಲ್ ಹಾಗೂ ಸರ್ಕಾರಿ ಕಚೇರಿಗಳ ಹೊರಗಿನ ಪ್ರದೇಶಗಳು ಸೇರಿದಂತೆ ಹಲವೆಡೆ ಪ್ರತಿಭಟನೆಗಳಿಗೆ ಬಳಸಲಾಗುತ್ತಿದ್ದ ಸ್ಥಳಗಳನ್ನು ಮತ್ತೆ ಅನುಮತಿಸಬೇಕು ಎಂದು ಆಗ್ರಹಿಸಿದರು.

ವಕೀಲ ವಿನಯ್ ಶ್ರೀನಿವಾಸ ಮಾತನಾಡಿ, ಸಿಎಂ ಡಿ.ಕೆ. ಶಿವಕುಮಾರ್ ದ್ವಂದ್ವ ನಿಲುವು ಅನುಸರಿಸುವುದಿಲ್ಲ ಭರವಸೆಯು ಬೆಂಗಳೂರಿನ ಪ್ರತಿಭಟನಾಕಾರರಿಗೂ ಅನ್ವಯಿಸಬೇಕು. ವಿಶೇಷವಾಗಿ ದೆಹಲಿಯಲ್ಲಿ ವಿರೋಧ ಪಕ್ಷಗಳು ಮತ್ತು ಚಳವಳಿಗಳು ಸಾರ್ವಜನಿಕ ಸ್ಥಳಗಳನ್ನು ಮರಳಿ ತಮ್ಮ ವಶಕ್ಕೆ ಪಡೆಯುತ್ತಿರುವ ಸಂದರ್ಭದಲ್ಲಿ ಇದು ಹೆಚ್ಚು ಪ್ರಸ್ತುತವಾಗಿದೆ ಎಂದು ವಾದಿಸಿದರು.

ಎಐಎಲ್‌ಎಜೆ ಅಧ್ಯಕ್ಷೆ, ವಕೀಲೆ ಮೈತ್ರೇಯಿ ಕೃಷ್ಣನ್ ಮಾತನಾಡಿ, ಈ ನಿರ್ಬಂಧಗಳು ಪ್ರತಿಭಟನೆಗಳು, ನಡೆದ ದುಂಡುಮೇಜಿನ ಸಭೆಯಲ್ಲಿ ಕಾರ್ಮಿಕ ಸಂಘಟನೆಗಳು ಪ್ರದರ್ಶನಗಳು ಮತ್ತು ಪ್ರತಿಭಟನಾ ಮೆರವಣಿಗೆಗಳ ಪರವಾನಗಿ ಮತ್ತು ನಿಯಂತ್ರಣ (ಬೆಂಗಳೂರು ನಗರ) ಆದೇಶ, 2021ರ ಅನುಕರಣೆಯಾಗಿದೆ.

ವೋಟರ್ ಲಿಸ್ಟ್‌ನಲ್ಲಿ ಅರ್ಹ ಮತದಾರರ ಹೆಸರು ನಾಪತ್ತೆ!

ರಾಜ್ಯ ಸರ್ಕಾರ ಜಿಬಿಎಗೆ ಚುನಾವಣೆಗಳನ್ನು ನಡೆಸದಿರಬಹುದು ಎಂದು ಬಿಜೆಪಿ ಮತ್ತು ಕಾಂಗ್ರೆಸ್‌ನ ಅನೇಕ ನಾಯಕರು ಹೇಳಿದ್ದಾರೆ.

• ಉದಯವಾಹಿನಿ, ಬೆಂಗಳೂರು

1 ನಾಯಕರು ಹುಟ್ಟಿಕೊಳ್ಳುವುದು ಇಷ್ಟವಿಲ್ಲ
2 ಎಸ್‌ಐಆರ್' ಅನ್ನು ಬಳಸಿಕೊಳ್ಳುತ್ತಿದ್ದಾರೆ
3 ಐದು ನಗರ ಪಾಲಿಕೆಗಳಿಗೆ ಚುನಾವಣೆಗಳ

ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕೆಲವರ ಹೆಸರುಗಳು ಕಾಣೆಯಾಗಿರುವ ಕುರಿತಾದ ಆತಂಕಗಳು ಹಾಗೂ ಎದುರಾಗಬಹುದಾದ ಕಾನೂನು ಸವಾಲುಗಳಿಂದಾಗಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗಳು ವಿಳಂಬವಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ರಾಜಕೀಯ ನಾಯಕರು ಇದೀಗ ತಮ್ಮ ಗಮನವನ್ನು ವಿಧಾನಸಭಾ ಚುನಾವಣೆಗಳತ್ತ ತಿರುಗಿಸಿದ್ದಾರೆ.

ಕರ್ನಾಟಕ ರಾಷ್ಟ್ರ ಸಮಿತಿಯ (ಕೆಆರ್‌ಎಸ್) ರವಿ ಕೃಷ್ಣಾ ರೆಡ್ಡಿ ಅವರು 'ಟಿಎನ್‌ಐಇಗೆ ತಿಳಿಸಿದ ಪ್ರಕಾರ, ಸದ್ಯದ ರಾಜಕೀಯ ಪಕ್ಷಗಳು ಕೆಲವು ಪ್ರಭಾವಶಾಲಿ ಕುಟುಂಬಗಳ ನಿಯಂತ್ರಣದಲ್ಲಿವೆ. ಇವರಿಗೆ ತಮ್ಮನ್ನು ಪ್ರಶ್ನಿಸುವಂತಹ ಕಾರ್ಪೊರೇಟರ್‌ಗಳು ಅಥವಾ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರಂತಹ ದ್ವಿತೀಯ ಹಂತದ ನಾಯಕರು ಹುಟ್ಟಿಕೊಳ್ಳುವುದು ಇಷ್ಟವಿಲ್ಲ. ಈ ಹಿಂದೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಮುಂದೂಡಿಕೆಯಾಗಲು ಅವರು ಕ್ಷೇತ್ರ ಮರುವಿಂಗಡಣೆ ಮತ್ತು ಮೀಸಲಾತಿಯನ್ನು ಕಾರಣವಾಗಿ ನೀಡಿದ್ದರು. ಇದೀಗ, ಚುನಾವಣೆಗಳನ್ನು ಮತ್ತಷ್ಟು ವಿಳಂಬಗೊಳಿಸಲು ಅವರು 'ಎಸ್ ಐಆರ್' ಅನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದರು.

ಉದಯವಾಹಿನಿ ಚಿತ್ರ

ರೆಡ್ಡಿ ಅವರ ಮಾತಿಗೆ ಸಹಮತ ವ್ಯಕ್ತಪಡಿಸಿದ ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಪುಲಕೇಶಿನಗರದಿಂದ ಮೂರು ಬಾರಿ ಕಾರ್ಪೊರೇಟರ್ ಆಗಿ ಆಯ್ಕೆಯಾಗಿರುವ ಎಆರ್ ಝಾಕಿರ್, 'ನಾನು 30 ವರ್ಷಗಳಿಂದ ಪಕ್ಷದೊಂದಿಗೆ ಗುರುತಿಸಿಕೊಂಡಿದ್ದೇನೆ. ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಯು ನನಗೆ ಚುನಾವಣಾ ಕಣಕ್ಕಿಳಿಯಲು ಅವಕಾಶ ನೀಡಬಹುದು ಎಂದು ಆಶಿಸುತ್ತೇನೆ. 'ಎಸ್‌ಐಆರ್' ಸಂಬಂಧಿತ ಸಮಸ್ಯೆಗಳು ಶೀಘ್ರವೇ ಬಗೆಹರಿಯದಿದ್ದರೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ವಿಳಂಬವಾಗಬಹುದು. ಅಂತಹ ಸಂದರ್ಭದಲ್ಲಿ, ನಾನು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧನಿದ್ದೇನೆ' ಎಂದರು.

'2015ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಕೌನ್ಸಿಲ್‌ಗೆ ಚುನಾವಣೆ ನಡೆದಾಗ, ಆಗ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದರೂ ಮತ್ತು ಕಾಂಗ್ರೆಸ್‌ನ ಪ್ರಮುಖ ಪ್ರಚಾರಕರಾಗಿದ್ದರೂ, ಬಿಜೆಪಿ 198 ಸ್ಥಾನಗಳ ಪೈಕಿ 100 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈಗ ಚುನಾವಣೆ ನಡೆದರೆ, ಬಿಜೆಪಿ ಜಯಶಾಲಿಯಾಗಲಿದೆ' ಎಂದರು.

ಆಮ್ ಆದ್ಮಿ ಪಕ್ಷದ (ಎಎಪಿ) ಹಿರಿಯ ನಾಯಕರೊಬ್ಬರು ಮಾತನಾಡಿ, ನಗರದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವು ಸಿದ್ಧತೆ ನಡೆಸುತ್ತಿದ್ದು, ಕಾರ್ಯಕರ್ತರು ಪ್ರಚಾರ ಕಾರ್ಯವನ್ನು ಆರಂಭಿಸಲು ಸಿದ್ಧರಾಗಿದ್ದಾರೆ. ಆದರೆ, ಚುನಾವಣಾ ಘೋಷಣೆಯಲ್ಲಿನ ವಿಳಂಬವು ಎಎಪಿ ಕಾರ್ಯಕರ್ತರಲ್ಲಿ ಆತಂಕಕ್ಕೆ ಕಾರಣವಾಗಿದೆ. ಈಗ ಅವರು ಬಹುಶಃ ವಿಧಾನಸಭಾ ಚುನಾವಣೆಯತ್ತ ಗಮನಹರಿಸಬೇಕಾಗಬಹುದು ಎಂದು ತಿಳಿಸಿದರು.

> ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸೋಲಿನ ಭೀತಿಯಲ್ಲಿರುವ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ನಗರದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ವಿಳಂಬಗೊಳಿಸಲು 'ಎಸ್‌ಐಆರ್' ಅನ್ನು ಬಳಸಿಕೊಳ್ಳಲಿದೆ ಎಂದು ಈ ಹಿಂದೆ ತಿಳಿಸಿದ್ದರು.-ಆರ್. ಅಶೋಕ

ಒಂದು ವರ್ಷ ಮಾತ್ರ ಬಾಕಿ: ಮುಂದಿನ ಮೇ ತಿಂಗಳ ವೇಳೆಗೆ ಸಂಬಂಧಿತ ಸಮಸ್ಯೆಗಳು ಬಗೆಹರಿಯದಿದ್ದರೆ ಮತ್ತು ವಿಧಾನಸಭಾ ಚುನಾವಣೆಗಳಿಗೆ ಕೇವಲ ಒಂದು ವರ್ಷ ಮಾತ್ರ ಬಾಕಿ ಉಳಿದಿರುವುದರಿಂದ, ರಾಜ್ಯ ಸರ್ಕಾರವು ಐದು ನಗರ ಪಾಲಿಕೆಗಳಿಗೆ ಚುನಾವಣೆಗಳನ್ನು ನಡೆಸದಿರಬಹುದು ಎಂದು ಬಿಜೆಪಿ ಮತ್ತು ಕಾಂಗ್ರೆಸ್‌ನ ಅನೇಕ ನಾಯಕರು ಹೇಳಿದ್ದಾರೆ.

ದೇವಿಕೆರೆಯಲ್ಲಿ ಚಾಮುಂಡೇಶ್ವರಿ ತೆಪ್ಪೋತ್ಸವ

• ಉದಯವಾಹಿನಿ, ಮೈಸೂರು

ನಾಡಹಬ್ಬ ಮೈಸೂರು ದಸರಾ ಮುಗಿದ ಬಳಿಕ ನಡೆಯುವ ಪ್ರಮುಖ ಧಾರ್ಮಿಕ ಕಾರ್ಯಕ್ರಮವಾದ ತಾಯಿ ಚಾಮುಂಡೇಶ್ವರಿ ತೆಪ್ಪೋತ್ಸವ ಇಂದು ಚಾಮುಂಡಿ ಬೆಟ್ಟದ ದೇವಿಕೆರೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ತಾಯಿಗೆ ವಿಶೇಷ ಅಭಿಷೇಕ, ಅಲಂಕಾರ ಪೂಜೆ ನೆರವೇರಿಸಲಾಯಿತು. ಬಳಿಕ ಉತ್ಸವ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸಿದ ಪಲ್ಲಕ್ಕಿಯಲ್ಲಿ ದೇವಿಕೆರೆಗೆ ತರಲಾಯಿತು. ದೇವಿಕೆರೆಯಲ್ಲಿ ಹೂವುಗಳಿಂದ ಸಿಂಗರಿಸಿದ್ದ ತೆಪ್ಪದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಯನ್ನು ಕೂರಿಸಿ ಕೆರೆಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಹಾಕಿಸಲಾಯಿತು. ಈ ವೇಳೆ ಕೆರೆಯ ಸುತ್ತ ನೆರೆದಿದ್ದ ಸಾವಿರಾರು ಭಕ್ತರು ''ಜೈ ಚಾಮುಂಡೇಶ್ವರಿ'' ಎಂದು ಜಯಘೋಷ ಮೊಳಗಿಸಿದರು. **ವಿಶೇಷತೆ:** ದಸರಾ ಸಂದರ್ಭದಲ್ಲಿ ನಾಡಿಗೆ ಒಳಿತಾಗಲೆಂದು ನಡೆಸುವ ಈ ತೆಪ್ಪೋತ್ಸವಕ್ಕೆ ವಿಶೇಷ ಮಹತ್ವವಿದೆ. ತಾಯಿ ನೀರಿನಲ್ಲಿ ತೇಲುತ್ತಾ ಭಕ್ತರಿಗೆ ದರ್ಶನ ನೀಡಿದರೆ ಇಡೀ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ ಎಂಬ ನಂಬಿಕೆ ಇದೆ. ಕಾರ್ಯಕ್ರಮದಲ್ಲಿ ಚಾಮುಂಡಿ ಬೆಟ್ಟದ ಪ್ರಧಾನ ಅರ್ಚಕರು, ದೇವಸ್ಥಾನ ಸಮಿತಿ ಸದಸ್ಯರು, ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ಸಾವಿರಾರು ಭಕ್ತರು ಭಾಗವಹಿಸಿದ್ದರು. ತೆಪ್ಪೋತ್ಸವದ ಹಿನ್ನೆಲೆಯಲ್ಲಿ ದೇವಿಕೆರೆ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.


ಉದಯವಾಹಿನಿ ಚಿತ್ರ

ಕಿಟಕಿ ಸರಳು ಕತ್ತರಿಸಿ ನೈಜೀರಿಯಾ ಮಹಿಳೆ ಪರಾರಿ

• ಉದಯವಾಹಿನಿ, ತುಮಕೂರು

ಇಲ್ಲಿನ ದಿಬ್ಬೂರು ಬಳಿ ಇರುವ ವಿದೇಶಿ ವಲಸಿಗರ ಬಂಧನ ಕೇಂದ್ರ ದ ಕಿಟಕಿಯ ಕಬ್ಬಿಣದ ಸರಳುಗಳನ್ನು ಕತ್ತರಿಸಿ ನೈಜೀರಿಯಾ ಮೂಲದ ಮಹಿಳೆಯೊಬ್ಬರು ಪರಾರಿಯಾಗಿರುವ ಪರಾರಿಯಾಗಿದ್ದು, ಈ ಘಟನೆ ಕೇಂದ್ರದ ಭದ್ರತಾ ವ್ಯವಸ್ಥೆ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುವಂತೆ ಮಾಡಿದೆ.

ಅಕ್ಟೋಬರ್ 20ರಂದು ಈ ಘಟನೆ ನಡೆದಿದ್ದು, ನೈಜೀರಿಯಾ ಮೂಲದ ಅಡೆವೋಲೆ ಅಡೆತು ಅನು (33) ಅಲಿಯಾಸ್ ರೆಜಿನಾ ಜಾರಾ ಅಲಿಯಾಸ್ ಆಯಿಷಾ ಕಿಟಕಿಯ ಕೆಳಭಾಗದಲ್ಲಿದ್ದ ಕಬ್ಬಿಣದ ಸರಳನ್ನು ಕತ್ತರಿಸಿ ಕಟ್ಟಡದಿಂದ ಪರಾರಿಯಾಗಿದ್ದಾಳೆ ಎನ್ನಲಾಗಿದೆ. ಆಕೆಯ ಪತ್ತೆಗಾಗಿ ಪೊಲೀಸರು ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ.

ಕಳೆದ ಹಲವು ವರ್ಷಗಳಿಂದ ಈ ಬಂಧನ ಕೇಂದ್ರದಲ್ಲಿ ಪದೇಪದೇ ಇಂತಹುದ್ದೇ ಘಟನೆಗಳು ನಡೆಯುತ್ತಿದ್ದರೂ, ಅವುಗಳನ್ನು ತಡೆಯಲು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವ ಬಗ್ಗೆ ಪ್ರಶ್ನೆಗಳು ವ್ಯಕ್ತವಾಗಿವೆ. ಈ ಘಟನೆ ಕೇಂದ್ರದ ಭದ್ರತಾ ವ್ಯವಸ್ಥೆ ಕುರಿತು ಗಂಭೀರ ಪ್ರಶ್ನೆಗಳನ್ನು 2023ರ ಜುಲೈನಲ್ಲಿ ಕೇಂದ್ರದಲ್ಲಿದ್ದ ವಿದೇಶಿ ಮಹಿಳೆಯರು ಸಿಬ್ಬಂದಿ ಮತ್ತು ಮಹಿಳಾ ಪೊಲೀಸರ ಮೇಲೆ ಹಲ್ಲೆ ನಡೆಸಿದ್ದರು ಎನ್ನಲಾಗಿದೆ. ಈ ಘಟನೆಯಲ್ಲಿ ಹಲವು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದರು.

ವಾಲ್ಮೀಕಿ ರಾಮಾಯಣ ಬತ್ತದ ಜ್ಞಾನಗಂಗೆ ಎಂದ ಸಚಿವ ಸಿ.ಪುಟ್ಟರಂಗಶೆಟ್ಟಿ

ಸಮಾಜದಲ್ಲಿ ವರ್ಗಗಳಿಗೂ ಶಿಕ್ಷಣ, ಸಮಾನತೆ, ಸಾಮಾಜಿಕ ನ್ಯಾಯ ದೊರೆಯಬೇಕು

• ಉದಯವಾಹಿನಿ, ಚಾಮರಾಜನಗರ

1 ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ
2 ಯುವಜನತೆ ರಾಮಾಯಣವನ್ನು ಅರ್ಥೈಸಿಕೊಂಡು ಆದರ್ಶ
3 ಮಹನೀಯರು ಸಮಾಜಕ್ಕೆ ನೀಡಿರುವ ಕೊಡುಗೆ

ರಾಮಾಯಣ ಎಂಬ ಮಹಾಕಾವ್ಯ ರಚಿಸುವ ಮೂಲಕ ಮಾನವ ಸಂಬಂಧ, ಜೀವನದ ಆದರ್ಶಗಳನ್ನು ಜಗತ್ತಿಗೆ ಪ್ರಸ್ತುತಪಡಿಸಿದ ಮಹರ್ಷಿ ವಾಲ್ಮೀಕಿ ಸದಾ ಸ್ಮರಣೀಯರು ಎಂದು ಪಶು ಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು. ನಗರದ ಮಾರಮ್ಮ ದೇವಸ್ಥಾನದ ಮುಂಭಾಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ನಗರಸಭೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಸಚಿವರು, ರಾಮಾಯಣ ಶ್ರೇಷ್ಠ ಮಹಾಕಾವ್ಯವಾಗಿದ್ದು ಬದುಕಿನ ಸಂಪೂರ್ಣ ಸಾರವನ್ನು ಒಳಗೊಂಡಿದೆ ಎಂದರು. ಮನುಷ್ಯನ ನಡುವಿನ ಸಂಬಂಧಗಳು, ಆದರ್ಶಗಳು, ರಾಜನ ಕರ್ತವ್ಯ ಸಹಿತ ಮಹತ್ವದ ವಿಚಾರಗಳನ್ನು ತಿಳಿ ಹೇಳಲಾಗಿದೆ.

ಯುವಜನತೆ ರಾಮಾಯಣವನ್ನು ಅರ್ಥೈಸಿಕೊಂಡು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಮಾಜದಲ್ಲಿ ವರ್ಗಗಳಿಗೂ ಶಿಕ್ಷಣ, ಸಮಾನತೆ, ಸಾಮಾಜಿಕ ನ್ಯಾಯ ದೊರೆಯಬೇಕು. ಯಾವ ಸಮುದಾಯವೂ ಶಿಕ್ಷಣದಿಂದ ವಂಚಿತವಾಗಬಾರದು. ಸರ್ಕಾರ ಶಿಕ್ಷಣಕ್ಕೆ ಪ್ರೇರೇಪಿಸಲು ಮೊರಾರ್ಜಿ, ಕಿತ್ತೂರು ರಾಣಿ ಚನ್ನಮ್ಮ, ಇಂದಿರಾಗಾಂಧಿ, ಆದರ್ಶ ವಸತಿ ಶಾಲೆಗಳನ್ನು ತೆರೆದಿದ್ದು ಸದುಪಯೋಗ ಪಡಿಸಿಕೊಳ್ಳಬೇಕು. ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಉದಯವಾಹಿನಿ ಚಿತ್ರ

ಜಯಂತಿಗಳಲ್ಲಿ ಅಬ್ಬರದ ಬದಲಾಗಿ ಮಹನೀಯರು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನು ತಿಳಿಸಬೇಕು, ಮಹನೀಯರ ಆದರ್ಶ, ತತ್ವ ಸಿದ್ಧಾಂತಗಳನ್ನು ತಿಳಿಸಿಕೊಡಬೇಕು ಎಂದು ಸಲಹೆ ನೀಡಿದ ಸಚಿವರು, ಮುಂದಿನ ವಾಲ್ಮೀಕಿ ಜಯಂತಿಯೊಳಗೆ ಮಹರ್ಷಿ ವಾಲ್ಮೀಕಿ ಪ್ರತಿಮೆ ನಿರ್ಮಿಸಲಾಗುವುದು ಎಂದು ಭರವಸೆ ನೀಡಿದರು.

ಸಂಪನ್ಮೂಲ ವ್ಯಕ್ತಿ ಉದ್ದನೂರು ಮಹಾದೇವನಾಯಕ ಮಾತನಾಡಿ, ರಾಮಾಯಣದಲ್ಲಿ 24,000 ಶ್ಲೋಕಗಳನ್ನು ರಚಿಸುವ ಮೂಲಕ ಮಹರ್ಷಿ ವಾಲ್ಮೀಕಿ ಸ್ವಸ್ಥ ಸಮಾಜಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ರಾಮಾಯಣದಲ್ಲಿ ಪಾತ್ರಗಳ ಮೂಲಕವೇ ಮಾನವ ಸಂಬಂಧಗಳು ಹಾಗೂ ಬಾಂಧವ್ಯಗಳನ್ನು ಸಾರ್ವತ್ರಿಕಗೊಳಿಸಿದ್ದಾರೆ. ವಾಲ್ಮೀಕಿಯವರ ರಾಮಾಯಣ ಎಂದೂ ಬತ್ತದ ಜ್ಞಾನಗಂಗೆಯಾಗಿದೆ' ಎಂದರು. ಪರಿಶಿಷ್ಟ ಸಮುದಾಯಕ್ಕೆ ಹೆಚ್ಚಿನ ಮೀಸಲಾತಿ ನೀಡಲು ಸಂವಿಧಾನದ 15 ಮತ್ತು 16ನೇ ವಿಧಿಗೆ ತಿದ್ದುಪಡಿಯಾಗಬೇಕಿದೆ. ವಾಲ್ಮೀಕಿ ಅವರ ಹೆಸರು ಚಿರಸ್ಥಾಯಿಗೊಳಿಸುವ ಕಾರ್ಯ ಆಗಬೇಕಿದೆ, ರಾಮನ ಮಂದಿರಗಳಲ್ಲಿ ನಾಯಕ ಸಮುದಾಯದ ಪೂಜಾರಿಗಳ ನೇಮಕ ಮಾಡಿಕೊಳ್ಳಬೇಕು ಎಂದು ಉದ್ದನೂರು ಮಹಾದೇವನಾಯಕ ಒತ್ತಾಯಿಸಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ವಿ.ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ (ಮುನ್ನ), ಹೆಚ್ಚುವರಿ ಜಿಲ್ಲಾಧಿಕಾರಿ ವಿ. ಪ್ರಿಯದರ್ಶಿನಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹರೀಶ್, ಮುಖಂಡರಾದ ಎಂ. ರಾಮಚಂದ್ರ, ಸುರೇಶ್ ನಾಯಕ, ರಾಮಸಮುದ್ರ ಸುರೇಶ್, ಅರಕಲವಾಡಿ ಸೋಮನಾಯಕ, ಕೆಲ್ಲಂಬಳ್ಳಿ ಸೋಮನಾಯಕ, ಚಾ.ಸಿ.ಸೋಮನಾಯಕ, ಶ್ರೀನಿವಾಸ ನಾಯಕ, ರಮೇಶ್, ಜಯಸಂದರ್, ಕಪನಿನಾಯಕ, ಚೆಂಗುಮಣಿ, ಶಿವರಾಜು, ನಾಗರಾಜು, ಚಿಕ್ಕ ಮಹದೇವು, ಎನ್.ರಾಚಪ್ಪ, ವಿರಾಟ್ ಶಿವು, ಪರಶಿವ ಮೂರ್ತಿ, ವರದನಾಯಕ, ಚಂದ್ರು, ನಾಗೇಂದ್ರ ನಾಯಕ, ಮನೋಜ್ ಕುಮಾರ್, ಮಾದಪ್ಪ, ಪ್ರಸಾದ್ ಕಾರ್ಯಕ್ರಮದಲ್ಲಿ ಇದ್ದರು.

> ಮಾನವ ಬಂಧುತ್ವ ವೇದಿಕೆಯ ತಾಲ್ಲೂಕು ಸಂಚಾಲಕ ಎಚ್.ಜಲೇಂದ್ರ ಮಾತನಾಡಿ, ವಾಲ್ಮೀಕಿ ಅವರು ದೇಶದ ಮೊದಲ ಮಹಾಕವಿ. ಅವರ ಆದರ್ಶ ತತ್ವ- ಸಿದ್ಧಾಂತಗಳನ್ನು ದೇಶದ ಪ್ರತಿಯೊಬ್ಬರೂ ಪಾಲನೆ ಮಾಡಬೇಕು. ರಾಮಾಯಣದಂತಹ ಶ್ರೇಷ್ಠ ಕಾವ್ಯವನ್ನು ಜಗತ್ತಿಗೆ ಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ.

ಆಕರ್ಷಕ ಮೆರವಣಿಗೆ

ಬೆಳಿಗ್ಗೆ ನಗರದ ಪ್ರವಾಸಿ ಮಂದಿರದಿಂದ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನೊಳಗೊಂಡ ಬೆಳ್ಳಿರಥದ ಮೆರವಣಿಗೆ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು. ಜಾನಪದ ಕಲಾತಂಡಗಳ ಪ್ರದರ್ಶನ ಮೆರವಣಿಗೆಯ ಅಂದ ಹೆಚ್ಚಿಸಿತು. ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ವೇದಿಕೆ ಕಾರ್ಯಕ್ರಮ ನಡೆಯುವ ಮಾರಮ್ಮ ದೇವಸ್ಥಾನದ ಮುಂಭಾಗದಲ್ಲಿ ಮುಕ್ತಾಯಗೊಂಡಿತು.

ಮಿನಿ ನ್ಯೂಸ್

ನಶೆ ಮುಕ್ತ ಸಮಾಜ ನಿರ್ಮಾಣಕ್ಕೆ ಮುಂದಾಗಲು ಕರೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ತಿಪಟೂರು

ನಗರದಲ್ಲಿ ಅಮನ್ ಏ ಇಸ್ಲಾಂ ಸುನ್ನಿ ಮುಸ್ಲಿಂ ಟ್ರಸ್ಟ್, ಗೌಸೇ ಅಜಂ ಟ್ರಸ್ಟ್ ಹಾಗೂ ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ನಶೆ ಮುಕ್ತ ಸಮಾಜ, ನಶೆ ಮುಕ್ತ ಭಾರತ ಜನಜಾಗೃತಿ ಅಭಿಯಾನ ನಡೆಯಿತು. ಟ್ರಸ್ಟ್ ಕಾರ್ಯದರ್ಶಿ ಮೊಹಮ್ಮದ್ ಶಾಯಿಖ್, ಡ್ರಗ್ಸ್ ಸೇರಿದಂತೆ ವಿವಿಧ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳು, ಯುವಕರು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು. ಮೌಲಾನ ಅನ್ವರ್ ಸಾದಿ ಮಾತನಾಡಿ, ವೈದ್ಯರು, ಧಾರ್ಮಿಕ ಮುಖಂಡರು ಮತ್ತು ಚುನಾಯಿತ ಜನಪ್ರತಿನಿಧಿಗಳು ಒಗ್ಗೂಡಿ ಯುವಜನತೆಯನ್ನು ದುಶ್ಚಟಗಳಿಂದ ದೂರವಿಡುವ ಮೂಲಕ ನಶೆ ಮುಕ್ತ ಸಮಾಜ ನಿರ್ಮಾಣ ಮಾಡಬೇಕಿದೆ ಎಂದರು. ಇನ್‌ಸ್ಪೆಕ್ಟರ್ ಯತೀಶ್ ಮಾತನಾಡಿ, ಪೋಷಕರು ತಮ್ಮ ಮಕ್ಕಳ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಶಾಲಾ-ಕಾಲೇಜುಗಳಲ್ಲಿ ಮಕ್ಕಳ ನಡವಳಿಕೆ ಹಾಗೂ ಅವರ ಸ್ನೇಹಿತರ ವಲಯದ ಕುರಿತು ಮಾಹಿತಿ ಪಡೆದುಕೊಳ್ಳಬೇಕು ಎಂದು ಹೇಳಿದರು. ಧಾರ್ಮಿಕ ಗುರು ಮೌಲಾನ ನಿಸಾರ್ ಅಹಮದ್ ಖಾದರಿ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳ ಜತೆಗೆ ಕಾರ್ಯಗಳಿಗೂ ಆದ್ಯತೆ ನೀಡಬೇಕು ಎಂದರು.

ಅಭಿವೃದ್ಧಿ ಕಾಮಗಾರಿ ಹಿನ್ನೆಲೆ ರೈಲು ಸಂಚಾರದಲ್ಲಿ ವ್ಯತ್ಯಯ

ಉದಯವಾಹಿನಿ ಚಿತ್ರ

• ಉದಯವಾಹಿನಿ, ತುಮಕೂರು

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ತುಮಕೂರು ರೈಲ್ವೆ ನಿಲ್ದಾಣದಲ್ಲಿ ನಡೆಯುತ್ತಿರುವ ಪುನರ್ ಅಭಿವೃದ್ಧಿ ಕಾಮಗಾರಿ ಹಿನ್ನೆಲೆಯಲ್ಲಿ ಅ. 23 ರಿಂದ ನ. 7ರ ನಡುವೆ ವಿವಿಧ ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಲಿದೆ.

ರೈಲು ಸಂಖ್ಯೆ 66572 ತುಮಕೂರು-ಬೆಂಗಳೂರು ಮೆಮು ರೈಲು ಹಾಗೂ ರೈಲು ಸಂಖ್ಯೆ 66571 ಬೆಂಗಳೂರು-ತುಮಕೂರು ಮೆಮು ರೈಲು ಸಂಚಾರವು ಅಕ್ಟೋಬರ್ 23ರಿಂದ 25, ಅಕ್ಟೋಬರ್ 28ರಿಂದ ನವೆಂಬರ್ 1 ಹಾಗೂ ನವೆಂಬರ್ 4 ರಿಂದ ನವೆಂಬರ್ 7ರ ನಡುವೆ ಸಂಪೂರ್ಣ ರದ್ದಾಗಿದೆ. ತುಮಕೂರಿನಿಂದ ಬೆಂಗಳೂರಿಗೆ ನಿತ್ಯ ಪ್ರಯಾಣಿಸುವ ವಿದ್ಯಾರ್ಥಿಗಳು, ನೌಕರರು, ಕಾರ್ಮಿಕರಿಗೆ ಇದರಿಂದ ತೊಂದರೆಯಾಗಲಿದೆ. ಅಕ್ಟೋಬರ್ 28 ರಿಂದ ನವೆಂಬರ್ 1 ಹಾಗೂ ನವೆಂಬರ್ 4 ರಿಂದ ನ. 7ರ ನಡುವೆ ಸಂಚರಿಸುವ ರೈಲು ಸಂಖ್ಯೆ 20689 ಯಶವಂತಪುರ? ಶಿವಮೊಗ್ಗ ಟೌನ್ ಎಕ್ಸ್‌ಪ್ರೆಸ್ ಯಶವಂತಪುರದಿಂದ ನಿಗದಿತ ಸಮಯಕ್ಕಿಂತ 75 ನಿಮಿಷ ತಡವಾಗಿ ಹೊರಡಲಿದೆ. ಅದೇ ರೀತಿ, ರೈಲು ಸಂಖ್ಯೆ 12725 ಬೆಂಗಳೂರು-ಧಾರವಾಡ ಎಕ್ಸ್‌ಪ್ರೆಸ್ ಬೆಂಗಳೂರಿನಿಂದ ನಿಗದಿತ ಸಮಯಕ್ಕಿಂತ 30 ನಿಮಿಷ ತಡವಾಗಿ ಹೊರಡಲಿದೆ. ಒಟ್ಟು 12 ದಿನಗಳ ಕಾಲ ಈ ವ್ಯತ್ಯಯ ಇರಲಿದೆ.

ಕಾಮಗಾರಿ ನಡೆಯುವಾಗ ಕೆಲವು ರೈಲುಗಳನ್ನು ಮಾರ್ಗ ಮಧ್ಯೆ 15 ರಿಂದ 40 ನಿಮಿಷ ತಡೆದು ನಂತರ ಬಿಡಲಾಗುವುದು.

ಯುವಜನರಲ್ಲಿ ರಾಷ್ಟ್ರೀಯ ಏಕತೆ ಬೆಳೆಸಲು ಸಹಕಾರಿ ಯದುವೀರ್ ಒಡೆಯರ್

• ಉದಯವಾಹಿನಿ, ಮೈಸೂರು

ಉದಯವಾಹಿನಿ ಚಿತ್ರ

ದೇಶಭಕ್ತಿ, ರಾಷ್ಟ್ರೀಯ ಏಕತೆ ಹಾಗೂ ಸಾಂಸ್ಕೃತಿಕ ವಿನಿಮಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮೈಸೂರಿನ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ ಆವರಣದಲ್ಲಿ ಆಯೋಜಿಸಲಾದ ವಂದೇ ಮಾತರಂ ಶಿಬಿರ'ವು ವಿವಿಧ ರಾಜ್ಯಗಳ ಯುವಜನರಿಗೆ ಪರಸ್ಪರ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಅರಿತುಕೊಳ್ಳಲು ಉತ್ತಮ ವೇದಿಕೆಯಾಗಿದೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ವಿದ್ಯಾವರ್ಧಕ ಕಾಲೇಜಿನಲ್ಲಿ ಆಯೋಜಿಸಿದ್ದ ವಂದೇ ಮಾತರಂ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ವಿವಿಧ ಭಾಗಗಳಿಂದ ಆಗಮಿಸಿದ ಯುವಜನರು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು, ಇತರ ರಾಜ್ಯಗಳ ಸಂಸ್ಕೃತಿಯನ್ನು ಗೌರವಿಸುವ ಮೂಲಕ ದೇಶದ ಏಕತೆಯನ್ನು ಬಲಪಡಿಸಬೇಕು ಎಂದರು. ವಂದೇ ಮಾತರಂ' ಗೀತೆಯ 150ನೇ ವರ್ಷದ ಸ್ಮರಣೆಯ ಹಿನ್ನೆಲೆಯಲ್ಲಿ ಆಯೋಜಿಸಲಾದ ಈ ಶಿಬಿರವು ದೇಶದ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ದೇಶಭಕ್ತಿಯ ಭಾವನೆ ಮತ್ತು ರಾಷ್ಟ್ರದ ಮೇಲಿನ ಗೌರವವನ್ನು ಯುವಜನರಿಗೆ ಪರಿಚಯಿಸುವ ಮಹತ್ವವನ್ನು ಹೊಂದಿದೆ. ಭಾರತವು ವಿವಿಧ ಭಾಷೆ, ಧರ್ಮ, ಸಂಸ್ಕೃತಿಯನ್ನು ಹೊಂದಿದ್ದರೂ ಎಲ್ಲರನ್ನು ಒಗ್ಗೂಡಿಸುವ ಶಕ್ತಿ ರಾಷ್ಟ್ರೀಯ ಏಕತೆಯಾಗಿದೆ. ಯುವಜನರು ಪರಸ್ಪರ ಗೌರವ ಮತ್ತು ಸಹಕಾರದ ಮನೋಭಾವ ಬೆಳೆಸಿಕೊಂಡು ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಬದ್ಧ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಹಿಂದಿನ ತಲೆಮಾರುಗಳ ತ್ಯಾಗವನ್ನು ಸ್ಮರಿಸುತ್ತಾ, ಬಲಿಷ್ಠ, ಏಕತೆಯಿಂದ ಕೂಡಿದ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ಯುವಜನರು ಪ್ರಮುಖ ಪಾತ್ರ ವಹಿಸಬೇಕು. ವಿಕಸಿತ ಭಾರತದ ಕನಸನ್ನು ನನಸಾಗಿಸಲು ಯುವಜನರಲ್ಲಿ ದೇಶಭಕ್ತಿ, ಸಾಮಾಜಿಕ ಹೊಣೆಗಾರಿಕೆ ಬೆಳೆಸುವುದು ಅಗತ್ಯ ಎಂದು ಹೇಳಿದರು.

ಗುಂಡ್ಲುಪೇಟೆ ಕ್ಷೇತ್ರದಲ್ಲಿ 18,143 ಮತದಾರರ ಹೆಸರು ಕೈಬಿಡುವಿಕೆ : ಪರಿಷ್ಕರಣೆ ಬಳಿಕ 2,00,357 ಮತದಾರರು; 257 ಮತಗಟ್ಟೆ ನಿಗದಿ

• ಉದಯವಾಹಿನಿ, ಗುಂಡ್ಲುಪೇಟೆ:

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಬಳಿಕ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯಲ್ಲಿ 2,00,357 ಮತದಾರರು ದಾಖಲಾಗಿದ್ದಾರೆ. ಗೈರು, ಸ್ಥಳಾಂತರ, ಮರಣ, ನಕಲು ಸೇರಿದಂತೆ ವಿವಿಧ ಕಾರಣಗಳಿಂದ 18,143 ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಮತದಾರರ ನೋಂದಣಾಧಿಕಾರಿ ವಿಶ್ವನಾಥ್ ತಿಳಿಸಿದರು. ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೂ ಮುನ್ನ ಕ್ಷೇತ್ರದಲ್ಲಿ 1,05,302 ಪುರುಷರು, 1,11,293 ಮಹಿಳೆಯರು ಹಾಗೂ 10 ಇತರೆ ಮತದಾರರು ಸೇರಿದಂತೆ ಒಟ್ಟು 2,16,605 ಮತದಾರರಿದ್ದರು. ಪರಿಷ್ಕರಣೆ ಬಳಿಕ 97,588 ಪುರುಷರು, 1,00,761 ಮಹಿಳೆಯರು ಹಾಗೂ 8 ಇತರೆ ಮತದಾರರು ಸೇರಿದಂತೆ ಒಟ್ಟು 2,00,357 ಮತದಾರರು ಪಟ್ಟಿಯಲ್ಲಿ ಉಳಿದಿದ್ದಾರೆ ಎಂದು ವಿವರಿಸಿದರು.

257 ಮತಗಟ್ಟೆಗಳಿಗೆ ನಿಗದಿ : ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಪ್ರಕ್ರಿಯೆಯಡಿ ಆಗಸ್ಟ್ 24ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸೆಪ್ಟೆಂಬರ್ 23ರವರೆಗೆ ಸಾರ್ವಜನಿಕರಿಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಮತಗಟ್ಟೆಗಳ ಪುನರ್ ವಿಂಗಡಣೆ ಹಿನ್ನೆಲೆಯಲ್ಲಿ ಈ ಹಿಂದೆ ಇದ್ದ 249 ಮತಗಟ್ಟೆಗಳಿಗೆ ಹೆಚ್ಚುವರಿಯಾಗಿ 8 ಮತಗಟ್ಟೆಗಳನ್ನು ಸೇರ್ಪಡೆಗೊಳಿಸಿ ಒಟ್ಟು 257 ಮತಗಟ್ಟೆಗಳನ್ನು ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಹೆಸರು ಸೇರ್ಪಡೆ, ತಿದ್ದುಪಡಿಗೆ ಅವಕಾಶ : ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಲು ನಮೂನೆ-6, ಸಾಗರೋತ್ತರ ಭಾರತೀಯ ಮತದಾರರ ನೋಂದಣಿಗೆ ನಮೂನೆ-6ಎ, ಹೆಸರು ತೆಗೆದುಹಾಕಲು ಹಾಗೂ ಆಕ್ಷೇಪಣೆ ಸಲ್ಲಿಸಲು ನಮೂನೆ-7 ಮತ್ತು ಹೆಸರು ತಿದ್ದುಪಡಿ, ಸ್ಥಳಾಂತರ, ಅಂಗವೈಕಲ್ಯ ಗುರುತು ಹಾಗೂ ಎಪಿಕ್ ಕಾರ್ಡ್ ಬದಲಾವಣೆಗೆ ನಮೂನೆ-8ರಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಮಾಹಿತಿ ನೀಡಿದರು.

ಉದಯವಾಹಿನಿ ಚಿತ್ರ

ಪಟ್ಟಿ ಪರಿಶೀಲಿಸಲು ಸಾರ್ವಜನಿಕರಿಗೆ ಮನವಿ ತಹಶೀಲ್ದಾರ್ ತನ್ಮಯ್ ಮಾತನಾಡಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,00,357 ಮತದಾರರಿದ್ದಾರೆ. ವಿವಿಧ ಕಾರಣಗಳಿಂದ ಸುಮಾರು 16 ಸಾವಿರ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿದಿದ್ದು, ಹೊಸದಾಗಿ ಸುಮಾರು 2 ಸಾವಿರ ಯುವ ಮತದಾರರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸಿದರು. ಅಂತಿಮ ಮತದಾರರ ಪಟ್ಟಿ ಗ್ರಾಮ ಪಂಚಾಯಿತಿಗಳು, ಮತಗಟ್ಟೆಗಳು ಹಾಗೂ ನಾಡಕಚೇರಿಗಳಲ್ಲಿ ಲಭ್ಯವಿದ್ದು, ಸಾರ್ವಜನಿಕರು ಪರಿಶೀಲಿಸಿಕೊಳ್ಳಬಹುದು. ಆ್ಯಪ್ ಮೂಲಕವೂ ಮತದಾರರ ಪಟ್ಟಿಯನ್ನು ವೀಕ್ಷಿಸಲು ಅವಕಾಶವಿದೆ. ಅಂತಿಮ ಪಟ್ಟಿಯಲ್ಲಿಯೂ ಹೆಸರು ಕೈಬಿಟ್ಟುಹೋಗಿದ್ದರೆ ನಮೂನೆ-6ರ ಮೂಲಕ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಕಚೇರಿಯ ಜಯರಾಮ್ ವೈ.ಎಂ. ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅರಾಭಿಕೊತ್ತನೂರು ಶಾಲೆಯಲ್ಲಿ ವಾಲ್ಮೀಕಿ ಜಯಂತಿ ಆಚರಣೆ

• ಉದಯವಾಹಿನಿ, ಕೋಲಾರ

ಪ್ರತಿಭೆಗೆ ಜಾತಿಮತದ ಅಡ್ಡಿಯಿಲ್ಲವೆಂಬುದನ್ನು ಸಾರಿದ ಮಹರ್ಷಿ ವಾಲ್ಮೀಕಿ ಒಂದು ಸಮುದಾಯಕ್ಕೆ ಸೀಮಿತರಲ್ಲ, ಅವರೊಬ್ಬ ಇಡೀ ಜನಸಮುದಾಯದ ಆದರ್ಶ ಪುರುಷ ಹಾಗೂ ರಾಮಾಯಣದಂತಹ ಮಹಾಕಾವ್ಯವನ್ನು ಸಮಾಜಕ್ಕೆ ನೀಡಿದ ಆದಿಕವಿ,ಎಂದು ಶಾಲೆಯ ಪ್ರಭಾರ ಮುಖ್ಯಶಿಕ್ಷಕಿ ಸಿದ್ದೇಶ್ವರಿ ತಿಳಿಸಿದರು.

ತಾಲ್ಲೂಕಿನ ಅರಾಭಿಕೊತ್ತನೂರು ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. ರಾಮನಾಮದ ಮೂಲಕ ಅಪಾರ ಜ್ಞಾನ ಪಡೆದ ವಾಲ್ಮೀಕಿ, ಇಂದಿನ ಯುವ ಸಮುದಾಯಕ್ಕೆ ಆದರ್ಶವಾಗಿದ್ದಾರೆ, ಪ್ರಪಂಚಕ್ಕೆ ರಾಮನಾಮದ ಶಕ್ತಿಯನ್ನು ತಿಳಿಸಿಕೊಟ್ಟ ಮಹಾನ್ ಚೇತನ ಅವರು ಎಂದು ಹೇಳಿದರು. ಎಸ್‌ಡಿಎಂಸಿ ಅಧ್ಯಕ್ಷ ಎ. ಮಹೇಂದ್ರ ಮಾತನಾಡಿ, ವಾಲ್ಮೀಕಿಯವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಓದಬೇಕು.

ಓರ್ವ ವ್ಯಕ್ತಿ ಹಿಂಸೆಯ ಮನಸ್ಸಿನಿಂದ ಹೊರ ಬಂದು ಮಹಾಕವಿಯಾದದ್ದರ ಹಿರಿಮೆ ಸಮಾಜಕ್ಕೆ ತಿಳಿಯಬೇಕು, ಎಂದರು.

'ನಾವು ಮಾಡುವ ಅನ್ಯಾಯ, ಅಕ್ರಮಗಳು ನಮ್ಮನ್ನು ಪಾಪವಾಗಿ ಕಾಡುತ್ತವೆ ಎಂಬ ಸತ್ಯ ಅರಿತ ನಂತರ ರತ್ನಾಕರರಾಗಿದ್ದ ವಾಲ್ಮೀಕಿ ಆದಿಕವಿಯಾದದ್ದರ ಕುರಿತು ಮಕ್ಕಳಿಗೂ ತಿಳಿಸಬೇಕು. ಇಂದು ನಾವು ತಪ್ಪು ಮಾಡಿದರೆ ಆ ಪಾಪ ನಮ್ಮನ್ನು ಕಾಡದಿರದು ಎಂಬ ಸತ್ಯ ಅರಿತು ಸರಿದಾರಿಯಲ್ಲಿ ನಡೆಯಬೇಕಿದೆ, ಎಂದರು.

ವಾಲ್ಮೀಕಿ ಸಮುದಾಯದ ಮುಖಂಡ ಹಾಗೂ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಮುಳ್ಳಹಳ್ಳಿ ಮಂಜುನಾಥ್, ಇಂದಿನ ಯುವ ಸಮುದಾಯಕ್ಕೆ ಆದರ್ಶವಾಗಿದ್ದಾರೆ, ವಾಲ್ಮೀಕಿಯಂತಹ ಅನೇಕ ಮಹಾನ್ ಪುರುಷರು ನಮಗೆ ದಾರಿದೀಪವಾಗಿದ್ದಾರೆ.

ಡಾ. ಬಾಬು ಜಗಜೀವನ್ ರಾಂ ಸಂಘಟನೆಗಳ ಒಕ್ಕೂಟದ ತಾಲ್ಲೂಕು ಅಧ್ಯಕ್ಷರಾಗಿ ಸಿದ್ದೇಶ್ ಹಂಗಳ ಆಯ್ಕೆ

• ಉದಯವಾಹಿನಿ, ಗುಂಡ್ಲುಪೇಟೆ

ಉದಯವಾಹಿನಿ ಚಿತ್ರ

ಡಾ.ಬಾಬು ಜಗಜೀವನ್ ರಾಂ ಸಂಘಟನೆಗಳ ಒಕ್ಕೂಟದ ಗುಂಡ್ಲುಪೇಟೆ ತಾಲ್ಲೂಕು ಅಧ್ಯಕ್ಷರಾಗಿ ವಕೀಲ ಸಿದ್ದೇಶ್ ಹಂಗಳ ಅವರನ್ನು ಆಯ್ಕೆ ಮಾಡಲಾಗಿದೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಒಕ್ಕೂಟದ ನೂತನ ತಾಲ್ಲೂಕು ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ಮಳವಳ್ಳಿ ಮಹದೇವಯ್ಯ, ಉಪಾಧ್ಯಕ್ಷರಾಗಿ ತೆರಕಣಾಂಬಿ ಸಿದ್ದರಾಜು, ಕೆಬ್ಬೆಪುರ ಸಿದ್ದಯ್ಯ, ಬೊಮ್ಮನಹಳ್ಳಿ ಶಿವಣ್ಣ, ಹಿರಿಯ ಸಲಹೆಗಾರರಾಗಿ ಗುರುಲಿಂಗಯ್ಯ, ಪ್ರಧಾನ ಕಾರ್ಯದರ್ಶಿಯಾಗಿ ನಾರಾಯಣ ಮಡಹಳ್ಳಿ, ಕಾನೂನು ಸಲಹೆಗಾರರಾಗಿ ರವಿ ಕೆಬ್ಬೆಪುರ, ಖಜಾಂಚಿಯಾಗಿ ಸಂತೋಷ್ ಕಾಲೋನಿ ಹಾಗೂ ಮಾಧ್ಯಮ ಸಲಹೆಗಾರರಾಗಿ ಬಂಗಾರಸ್ವಾಮಿ (ರಘು) ಆಯ್ಕೆಯಾಗಿದ್ದಾರೆ. ಸಂಘಟನಾ ಕಾರ್ಯದರ್ಶಿಗಳಾಗಿ ಉಮೇಶ್, ರಂಗಸ್ವಾಮಿ (ಸೆಂಟ್ರಿಂಗ್), ಸಿದ್ದಯ್ಯನಪುರ ರಾಮಚಂದ್ರಯ್ಯ ,ಸಹ ಕಾರ್ಯದರ್ಶಿಗಳಾಗಿ ರಂಗಸ್ವಾಮಿ ಟೌನ್ ಮತ್ತು ಶ್ರೀನಿವಾಸ್ ಹೊನ್ನಶೆಟ್ಟರಹುಂಡಿ ಅವರನ್ನು ನೇಮಕ ಮಾಡಲಾಯಿತು. ಒಕ್ಕೂಟದ ಜಿಲ್ಲಾಧ್ಯಕ್ಷ ಎಚ್.ಎಚ್. ನಾಗರಾಜು, ಉಪಾಧ್ಯಕ್ಷ ಹಸಗೂಲಿ ಸಿದ್ದಯ್ಯ, ಹಿರಿಯ ಸಲಹೆಗಾರ ಅರಕಲವಾಡಿ ಜವರಯ್ಯ, ಪ್ರಧಾನ ಕಾರ್ಯದರ್ಶಿ ಶಿವು, ಕಾರ್ಯದರ್ಶಿ ಶಿವಕುಮಾರ್, ಮಲ್ಲಮ್ಮನಹುಂಡಿ ಚನ್ನಬಸವಯ್ಯ, ಅರಕಲವಾಡಿ ಮಹದೇವಯ್ಯ, ಜಿಲ್ಲಾ ನಿರ್ದೇಶಕ ದೇವರಾಜು ಹೊನ್ನಶೆಟ್ಟರಹುಂಡಿ, ತಾಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ನಾಗಮಲ್ಲು ಭೀಮನಬೀಡು, ಮಹೇಶ್ ಕುಮಾರ್, ಹೊನ್ನಶೆಟ್ಟರಹುಂಡಿ ರಾಚಯ್ಯ, ರಾಜು ಸಿದ್ದಯ್ಯ, ಕೊಡಹಳ್ಳಿ ನಾಗರಾಜು, ಹನುಮಯ್ಯ, ಅಂಕಹಳ್ಳಿ ಪಿ. ಬಿಳಿಗಿರಯ್ಯ, ನಿಂಗಯ್ಯ ಬೆಳಚಲವಾಡಿ, ಹೊನ್ನೆಗೌಡನಹಳ್ಳಿ ಕೃಷ್ಣಮೂರ್ತಿ, ರಾಚಪ್ಪ, ಸತ್ಯ, ಹಂಗಳ ನಾಗರಾಜು, ಶಿವಪುರ ಪುಟ್ಟಯ್ಯ, ಸಿದ್ದರಾಜು, ತೆರಕಣಾಂಬಿ ಚಂದ್ರಶೇಖರ್, ಗೋಪಾಲ, ರಾಜಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಆದೇಶದಂತೆ ಸಾರ್ವಜನಿಕ ರಸ್ತೆ ಒತ್ತುವರಿ ತೆರವು

• ಉದಯವಾಹಿನಿ, ಬಂಗಾರಪೇಟೆ

ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಸಾರ್ವಜನಿಕ ರಸ್ತೆಗ ಆತಿಕ್ರಮಿಸಿದ ಅಂಗಡಿ ಮಳಿಗೆಗಳು ಮತ್ತು ಇತರ ಕಟ್ಟಡಗಳ ಒತ್ತುವರಿ ತೆರವುಗೊಳಿಸಲು ನಗರಸಭೆಯಿಂದ ಕಾರ್ಯಾಚರಣೆ ನಡೆಯುತ್ತಿದೆ ಎಂದು ನಗರಸಭೆಯ ಪೌರಾಯುಕ್ತ ಜಗ್ಗ ರೆಡ್ಡಿ ತಿಳಿಸಿದ್ದಾರೆ.

ಪಟ್ಟಣದ ಕೋಲಾರ ಪ್ರಮುಖ ರಸ್ತೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಯಾವುದೇ ತೊಂದರೆ ಇಲ್ಲದೆ ಸುಗಮವಾಗಿ ಸಂಚರಿಸಲು ಅನುಕೂಲ ಕಲ್ಪಿಸಲು ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ ಎಂದು ಹೇಳಿದ್ದಾರೆ. ಪಟ್ಟಣದ ಪ್ರಮುಖ ರಸ್ತೆಗಳಲ್ಲಿನ ಕೆಲವು ಅಂಗಡಿ ಮಾಲೀಕರು ಮತ್ತು ಕಟ್ಟಡ ಮಾಲೀಕರು ಸಾರ್ವಜನಿಕ ರಸ್ತೆ ಮತ್ತು ಪಾದಚಾರಿ ಮಾರ್ಗಗಳನ್ನು ಆತಿಕ್ರಮಿಸಿದ್ದರಿಂದ ಪಾದಚಾರಿಗಳಿಗೆ ಮತ್ತು ವಾಹನ ಸವಾರರಿಗೆ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ವಿಶೇಷವಾಗಿ ಜನನಿಬಿಡ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳು ಆತಿಕ್ರಮಿತವಾಗಿರುವುದರಿಂದ ಸಾರ್ವಜನಿಕರು ರಸ್ತೆಯಲ್ಲಿ ನಡೆತರಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇದರಿಂದ ವಾಹನಗಳ ಸುಗಮ ಸಂಚಾರಕ್ಕೂ ತೊಂದರೆ ಆಗುತ್ತಿದೆ.


ಉದಯವಾಹಿನಿ ಚಿತ್ರ

> ಪಟ್ಟಣದ ನಗರಸಭ ವ್ಯಾಪ್ತಿಯಲ್ಲಿರುವ ಸಾರಿಗೆ ಮಾರ್ಗಗಳಲ್ಲಿ ಒತ್ತುವರಿ ಕಂಡುಬಂದಲ್ಲಿ ಹಂತ ಹಂತವಾಗಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆ ಮತ್ತು ಪಾದಚಾರಿ ಮಾರ್ಗಗಳು ಮುಕ್ತವಾಗಿರುವುದು ಅಗತ್ಯ. ಈ ನಿಟ್ಟಿನಲ್ಲಿ ಕ್ರಮ ಮುಂದುವರಿಸಲಾಗುವುದು ಎಂದು ಹೇಳಿದರು.

ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ನಗರಸಭಾ ವತಿಯಿಂದ ಒತ್ತುವರಿ ತೆರವು ಕಾರ್ಯ ನಡೆಯುತ್ತಿದೆ. ಕಾರ್ಯಾಚರಣೆ ಆರಂಭಿಸುವ ಮುನ್ನಾ ಆತಿಕ್ರಮನಾಧಿಕಾರಿಗಳಿಗೆ ಮಾಹಿತಿ ನೀಡಿ, ಸಾರ್ವಜನಿಕ ಸ್ಥಳಗಳನ್ನು ತೆರವುಗೊಳಿಸಲು ಸೂಚಿಸಲಾಗಿತ್ತು. ಈ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡುವ ಮೂಲಕ ತೆರವು ಕಾರ್ಯಾಚರಣೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಪ್ರಸ್ತಾಪಿಸಿದರು.

ನಗರಸಭೆಯ ಸಿಬ್ಬಂದಿ ಮತ್ತು ಜೆಸಿಬಿ ಯಂತ್ರದ ಸಹಾಯದಿಂದ ಸಾರ್ವಜನಿಕ ರಸ್ತೆ ಹಾಗು ಪಾದಚಾರಿ ಮಾರ್ಗಗಳಲ್ಲಿನ ಒತ್ತುವರಿಗಳನ್ನು ತೆರವುಗೊಳಿಸುತ್ತಿದ್ದಾರೆ.

ನರಸೀಪುರದಲ್ಲಿ ವಿಜೃಂಭಣೆಯ ಮಹರ್ಷಿ ವಾಲ್ಮೀಕಿ ಜಯಂತಿ

ನಮ್ಮ ಮಕ್ಕಳಿಗೆ ಕೈಯಲ್ಲಿ ಪುಸ್ತಕ ನೀಡಿ, ಅವರನ್ನು ಜ್ಞಾನ ವಂತರಾಗಿ ಮಾಡಬೇಕು. ವಾಲ್ಮೀಕಿಯವರ ಆದರ್ಶ, ಚಿಂತನೆಗಳನ್ನು ಮಕ್ಕಳಿಗೆ ಅರಿವು ಮೂಡಿಸಿ

• ಉದಯವಾಹಿನಿ, ತಿ.ನರಸೀಪುರ

1 ಮಾನವೀಯ ಮೌಲ್ಯಗಳ ಸಂದೇಶ
2 ಅರಿವು ಮೂಡಿಸಿ ಸಂಸ್ಕಾರ ಬೆಳೆಸಿ
3 ಕೃತಿ ರಚಿಸಿ ಜಗತ್ತಿನ ಮನುಕುಲಕ್ಕೆ

ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಕೃತಿ ರಚನೆ, ಸಂದೇಶಗಳ ಮೂಲಕ ಸಂಸ್ಕೃತ, ಸಾಹಿತ್ಯ, ಆಧ್ಯಾತ್ಮಿಕ ಬೋಧನೆಗಳು ಹಾಗೂ ಭಾರತೀಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಜುನಾಥನ್ ಹೇಳಿದರು.

ಪಟ್ಟಣದ ಚಿಕ್ಕಮ್ಮ ಯಾತ್ರಿ ಭವನದಲ್ಲಿ ತಾಲ್ಲೂಕು ಆಡಳಿತ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ತಾಲ್ಲೂಕು ನಾಯಕರ ಸಂಘದ ವತಿಯಿಂದ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರಾಮಾಯಣದ ಕರ್ತೃ, ಆದಿ ಕವಿ ಎಂದೇ ಪ್ರಸಿದ್ಧರಾದ ಮಹರ್ಷಿ ವಾಲ್ಮೀಕರ ಆದರ್ಶಗಳು ಸಮಾಜಕ್ಕೆ ಸದಾ ಪ್ರೇರಣೆಯಾಗಿವೆ. ಅವರ ಜೀವನದ ಸಂದೇಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಂಡು ಸಮಾಜದಲ್ಲಿ ಸಮಾನತೆ ಮಾನವೀಯತೆ ಹಾಗೂ ಸೌಹಾರ್ದತೆಯನ್ನು ಬೆಳೆಸಿಕೊಂಡು ಹೋಗಬೇಕೆಂದು ಸಲಹೆ ನೀಡಿದರು. ತಾಲ್ಲೂಕು ನಾಯಕರ ಸಂಘದ ಅಧ್ಯಕ್ಷ ಮೂಗೂರು ಎಂ.ಡಿ. ಬಸವರಾಜು ಮಾತನಾಡಿ ತಾಲ್ಲೂಕಿನಲ್ಲಿ ನಾಯಕರ ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವಲ್ಲಿ ಹಲವಾರು ತೊಡಕುಗಳು ಉಂಟಾಗುತ್ತಿವೆ ಈ ಬಗ್ಗೆ ತಾಲ್ಲೂಕಿನ ಜನತೆ ಸಂಘಕ್ಕೆ ದೂರಿದ್ದಾರೆ, ನಮ್ಮ ಸಮಾಜದ ಬಂಧುಗಳಲ್ಲಿ ವಿದ್ಯಾಭ್ಯಾಸದ ಕೊರತೆ ಹೆಚ್ಚಾಗಿರುವುದರಿಂದ ಅನಗತ್ಯವಾಗಿ ಅವರನ್ನು ಅಲೆಸದೆ ಸರಿಮಾಡಿ ಸರ್ಟಿಫಿಕೇಟ್ ಗಳನ್ನ ವಿತರಣೆ ಮಾಡುವಂತೆ ತಹಶೀಲ್ದಾರ್ ರವರಲ್ಲಿ ಮನವಿ ಮಾಡಿದರು, ಸಪ್ತಾರ್ಷಿಗಳ ಅನುಗ್ರಹದಿಂದ ಮಹರ್ಷಿಯಾದ ಬುಕ್ಕ, ಕಾಡಿನ ಜನಾಂಗದಲ್ಲಿ ಹುಟ್ಟಿ ಸಿಕ್ಕಸಿಕ್ಕಲ್ಲಿ ಕಳ್ಳತನ ದರೋಡೆ ಮಾಡುತ್ತಾ ಕ್ರೂರ ಜೀವನ ನಡೆಸುತ್ತಿದ್ದ ಬುಕ್ಕ, ವಾಲ್ಮೀಕಿಯಾಗಿ ಪರಿವರ್ತನೆ ಆದಾಗ ತಾನು ಇಂದಿನ ಜನ್ಮದಲ್ಲಿ ಏನಾಗಿದೆ ಎಂಬ ಅರಿವಾಗುತ್ತದೆ, ಪ್ರಧಾನ ಭಾಷಣ ಮಾಡಿ ಮಾತನಾಡಿದ ವಿದ್ಯೋದಯ ಕಾಲೇಜಿನ ಉಪನ್ಯಾಸಕ ಡಾ.ಸಿ.ಕೆ.ಚಂದ್ರಪ್ಪ, ಬೇಡ ಜನಾಂಗದ ವಾಲ್ಮೀಕಿ ಮಹರ್ಷಿಗಳಾದದು ಅಪ್ರತಿಮ, ಅದ್ವಿತೀಯ ಸಾಧನೆಯೇ ಸರಿ. ದುಷ್ಟಶಕ್ತಿ ಗಿಂತ ದೈವಶಕ್ತಿ ದೊಡ್ಡದು ಎಂಬಂತೆ ವಾಲ್ಮೀಕಿಯು ದೈವಾನುಗ್ರಹ, ನಾರದಮುನಿಗಳ ಸಹವಾಸದಿಂದ ಸಪ್ತ ಋಷಿಗಳ ದರ್ಶನದಿಂದ, ಜ್ಞಾನದ ಉತ್ತುಂಗ ತಲುಪಿ ರಾಮಾಯಣದಂತಹ ಕೃತಿ ರಚಿಸಿ ಜಗತ್ತಿನ ಮನುಕುಲಕ್ಕೆ ಮಾನವೀಯ ಮೌಲ್ಯಗಳ ಸಂದೇಶ ಸಾರಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಸಮಾಜ ಸೇವೆ ಗುರುತಿಸಿ ಕೊಳತ್ತೂರು ಕುಮಾರ್, ಮರಡೀಪುರ ನಾಗರಾಜು, ಚಿತ್ರಕಲೆ ವಿಭಾಗದಲ್ಲಿ ಕಲಾವಿದ ಶ್ರೀ ಹರಿ ಹಾಗೂ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾದ ಮಕ್ಕಳಿಗೆ ಸನ್ಮಾನಿಸಲಾಯಿತು. ಮುನ್ನಾ ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದ ಬಳಿ ಶ್ರೀ ಮಹರ್ಷಿ ವಾಲ್ಮೀಕಿ ಮೆರವಣಿಗೆಯ ಭಾವಚಿತ್ರಕ್ಕೆ ಕ್ಷೇತ್ರದ ಶಾಸಕ ಡಾ. ಎಚ್ ಸಿ. ಮಹದೇವಪ್ಪ ಚಾಲನೆ ನೀಡಿದರು. ಇಪ್ಪತ್ತಕ್ಕೂ ಹೆಚ್ಚು ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರಗಳ ಟ್ಯಾಬ್ಲೋ ಮೆರವಣಿಗೆಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ್ದ ಜನರು ಹೆಜ್ಜೆ ಹಾಕಿ, ಸಾರ್ವಜನಿಕರ ಗಮನ ಸೆಳೆದರು. ವಿವಿಧ ಜಾನಪದ ಕಲಾತಂಡಗಳಾದ ಡೊಳ್ಳು ಕುಣಿತ, ನಂದಿಕೋಲು ಮತ್ತು ಕಂಸಾಳೆ ಪ್ರದರ್ಶನಗಳು ಮೆರವಣಿಗೆಗೆ ಮೆರುಗು ನೀಡಿದವು.

ಉದಯವಾಹಿನಿ ಚಿತ್ರ

> ನಮ್ಮ ಮಕ್ಕಳಿಗೆ ಕೈಯಲ್ಲಿ ಪುಸ್ತಕ ನೀಡಿ, ಅವರನ್ನು ಜ್ಞಾನ ವಂತರಾಗಿ ಮಾಡಬೇಕು. ವಾಲ್ಮೀಕಿಯವರ ಆದರ್ಶ, ಚಿಂತನೆಗಳನ್ನು ಮಕ್ಕಳಿಗೆ ಅರಿವು ಮೂಡಿಸಿ ಸಂಸ್ಕಾರ ಬೆಳೆಸಿದರೆ ಜಯಂತಿಯು ಸಾರ್ಥಕತೆ ಕಾಣುತ್ತದೆ ಎಂದು ಅವರು ಹೇಳಿದರು.
> -ಉಪನ್ಯಾಸಕ ಡಾ.ಸಿ.ಕೆ.ಚಂದ್ರಪ್ಪ

> ಅವರು ರಾಮಾಯಣ ಅಂತಹ ಪುಸ್ತಕವನ್ನು ಬರೆದರು, ರಾಮಾಯಣ ಮಹಾಕಾವ್ಯವಲ್ಲ ನಮ್ಮ ಬಾಳನ್ನು ಬೆಳಗುವ ಮಹಾ ಬೆಳಕು ಇಂತಹ ದೈವಿ ಕೃತಿಯನ್ನು ಕೊಟ್ಟ ಮಹಾಕವಿ ವಾಲ್ಮೀಕಿ ಮಹರ್ಷಿ ಸದಾ ನೆನೆಯುವಂತಾಗಬೇಕು ಎಂದರು.
> -ಮೂಗೂರು ಎಂ.ಡಿ. ಬಸವರಾಜು

ಮಹನೀಯರ ಜಯಂತಿಗಳನ್ನು ಹಬ್ಬದಂತೆ ಆಚರಿಸಬೇಕು: ಮಂಜು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪೇಟೆ

ದೇವರನ್ನು ಭಕ್ತಿಯಿಂದ ಪೂಜಿಸುವವರಿಗಿಂತಲೂ ಭಯದಿಂದ ಪೂಜಿಸುವವರೇ ಹೆಚ್ಚು. ಅದೇ ರೀತಿ ಮಹನೀಯರ ಜಯಂತಿಗಳಿಗೆ ನಿಷ್ಠೆಯಿಂದ ಮಹನೀಯರ ಜಯಂತಿಗಳನ್ನು ಹಬ್ಬದಂತೆ ಆಚರಿಸುವ ವಾತಾವರಣ ನಿರ್ಮಾಣವಾಗಬೇಕೆಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು. ಅವರು ಪಟ್ಟಣದ ಕೆ.ಪಿ.ಎಸ್ ಶಾಲೆಯ ಆವರಣದಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತಿ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರದಲ್ಲಿ ಜರುಗಿದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಾನವ ಕುಲದ ಉದ್ದಾರಕ್ಕೆ ಶ್ರಮಿಸಿದ ಮಹನೀಯರ ಜಯಂತಿಗಳು ಜಾತಿ ಜಯಂತಿಗಳಾಗಿ ಪರಿವರ್ತನೆಯಾಗಿ ನಾಡಿನ ಮಹನೀಯರು, ದಾರ್ಶನಿಕರು ಮತ್ತು ತತ್ವಜ್ಞಾನಿಗಳನ್ನು ಜಾತಿ ಚೌಕಟ್ಟಿನಿಂದ ಕೆಲಸವಾಗಬೇಕಾಗಿದೆ. ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಸರ್ವ ಸಮಾಜಗಳು ಸಹಬಾಳ್ವೆಯ ಬದುಕನ್ನು ಅನುಸರಿಸಬೇಕಾಗಿದೆ ಎಂದ ಶಾಸಕ ಹೆಚ್.ಟಿ.ಮಂಜು ಪಟ್ಟಣದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕೆ ಹಿಂದಿನ ಸರ್ಕಾರದಲ್ಲಿ 1.54 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಕಾಮಗಾರಿ ಆರಂಭಿಸಿದ್ದು ಇದಕ್ಕೆ ಪ್ರಾರಂಭಿಕ ಹಂತದಲ್ಲಿ 45 ಲಕ್ಷರೂ ಅನುದಾನ ಬಿಡುಗಡೆಯಾಗಿತ್ತು. ಅನುದಾನದ ಕೊರತೆಯಿಂದ ನಲುಗುತ್ತಿದ್ದ ವಾಲ್ಮೀಕಿ ಭವನ ನಿರ್ಮಾಣಕ್ಕೆ ನಾನು ಶ್ರಮವಹಿಸಿ 95 ಲಕ್ಷ ರೂ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಕಾಮಗಾರಿ ಪೂರ್ಣಗೊಳ್ಳಲು 3 ಕೋಟಿ ಅನುದಾನದ ಅಗತ್ಯವಿದ್ದು ಹೆಚ್ಚುವರಿ ಅನುದಾನಕ್ಕೆ ಸರ್ಕಾರದ ಗಮನ ಸೆಳೆದಿದ್ದೇನೆ.

ಅಂತರಾಳದಿಂದ.. EDITORIAL

ಸಾಮಾಜಿಕ ಜಾಲತಾಣ ಪೋಸ್ಟ್ ಹೈಕೋರ್ಟ್ ಮಹತ್ವದ ತೀರ್ಪು

ಅಕ್ಟೋಬರ್ 14, 2026ರಂದು ಕೇಂದ್ರ ಸರಕಾರವು ತನ್ನ ಒಡೆತನದಲ್ಲಿದ್ದ ಐಡಿಬಿಐ ಬ್ಯಾಂಕನ್ನು ಕೆನಡಾದ ಪ್ರೇಮ್ ವತ್ಸ ಅವರ ಫೇರ್ ಫೇಕ್ಸ್ ಫೈನಾನ್ಶಿಯಲ್ ಹೋಲ್ಡಿಂಗ್ ಕಂಪೆನಿಗೆ ಮಾರಾಟ ಮಾಡಲು ಒಪ್ಪಿಗೆ ನೀಡಿತು. ಸರಕಾರ ಮತ್ತು ಜೀವವಿಮಾ ನಿಗಮದ ಹಿಡಿತದಲ್ಲಿದ್ದ ಶೇ. 60.72ರಷ್ಟು ಶೇರುಗಳನ್ನು ಕೆನಡಾದ ಕಂಪೆನಿಯು ರೂ. 52,878 ಕೋಟಿಗೆ ಖರೀದಿಸಲಿದೆ. ಈ ಪ್ರಕ್ರಿಯೆಯಿಂದ ಸುಮಾರು 60 ವರ್ಷ ಸರಕಾರದ ಅಧೀನದಲ್ಲಿದ್ದ ಹಣಕಾಸು ಸಂಸ್ಥೆಯನ್ನು ವಿದೇಶಿ ಮೂಲದ ಮಾಲಕರಿಗೆ ಹಸ್ತಾಂತರಿಸಲಿದೆ. ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಅತ್ಯಂತ ಹಿಂದುಳಿದ ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತದಲ್ಲಿ ದ್ರುತ ಗತಿಯ ಪ್ರಗತಿಗೆ ಆಧುನಿಕ ಕೈಗಾರಿಕೆಗಳು ಅಗತ್ಯ ಎಂಬುದನ್ನು ಅಂದಿನ ರಾಜಕೀಯ ನಾಯಕರು ಮನಗಂಡಿದ್ದರು. ಇದಕ್ಕೆ ಪೂರಕವಾದ ಹಣಕಾಸನ್ನು ಸರಕಾರವು ಒದಗಿಸಬೇಕಿತ್ತು. ಈ ಅಗತ್ಯದ ಹಿನ್ನೆಲೆಯಲ್ಲಿ 1948ರಲ್ಲಿ ಭಾರತೀಯ ಕೈಗಾರಿಕಾ ಹಣಕಾಸು ಸಂಸ್ಥೆಯನ್ನು (ಐಎಫ್‌ಸಿಐ) ಸ್ಥಾಪಿಸಲಾಯಿತು. ಐಡಿಬಿಐ ಎಂದು ಖ್ಯಾತಿ ಪಡೆದ ಈ ಹಣಕಾಸು ಸಂಸ್ಥೆ ಮುಂದಿನ ದಶಕಗಳಲ್ಲಿ ದೇಶದ ಕೈಗಾರಿಕೆಗಳ ವಿಕಾಸದಲ್ಲಿ ಅನನ್ಯವಾದ ಪಾತ್ರವನ್ನು ವಹಿಸಿತು. ಅಭಿವೃದ್ಧಿ ಹಣಕಾಸು ಸಂಸ್ಥೆಗಳ ನಿಯಂತ್ರಣವೂ ಅಲ್ಲದೆ, ಐಡಿಬಿಐಯು ತಾನೇ ಸ್ವತಃ ದೊಡ್ಡ ದೊಡ್ಡ ಹೊಸ ಉದ್ದಿಮೆಗಳಿಗೆ ಅಗತ್ಯವಿದ್ದ ಸಾಲವನ್ನು ನೀಡುತ್ತಿತ್ತು. ಅವುಗಳಿಗೆ ಬೇಕಾದ ತಾಂತ್ರಿಕ ಮತ್ತು ಹಣಕಾಸಿಗೆ ಸಂಬಂಧಿಸಿದ ಸಲಹೆಗಳನ್ನು ಕೊಡುವ ಕೌಶಲವನ್ನು ಸಂಸ್ಥೆ ಬೆಳೆಸಿತ್ತು. ಹೀಗೆ ಹಣಕಾಸು ಒದಗಿಸುವ ಸಂಸ್ಥೆಯಾಗಿ, ನಿಯಂತ್ರಕನಾಗಿ ಮತ್ತು ಸಲಹಾ ಸಂಸ್ಥೆಯಾಗಿ ಮಹತ್ವವಾದ ಪಾತ್ರವನ್ನು ಐಡಿಬಿಐಯು ವಹಿಸಿತ್ತು. ಮುಂದೆ ದೇಶದ ಆರ್ಥಿಕ ಪ್ರಗತಿಗೆ ಬ್ಯಾಂಕುಗಳು ತಮ್ಮಲ್ಲಿರುವ ಸಂಪನ್ಮೂಲಗಳನ್ನು ವಿನಿಯೋಗಿಸಬೇಕೆಂಬ ಉದ್ದೇಶದಿಂದ 1969ರಲ್ಲಿ ಅವುಗಳ ರಾಷ್ಟ್ರೀಕರಣವೂ ಆಯಿತು. ಆ ಬಳಿಕವೂ ಐಡಿಬಿಐಯು ಕೈಗಾರಿಕಾ ವಿಕಾಸದಲ್ಲಿ ತನ್ನದೇ ಛಾಪನ್ನು ಉಳಿಸಿಕೊಂಡಿತು. 1990ರ ದಶಕದಲ್ಲಿ ಆರಂಭವಾದ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಶಕೆಯಲ್ಲಿ ದೇಶದ ಹಿತದೃಷ್ಟಿಯಿಂದ, ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಲಿಲ್ಲ ಆದರೆ ಖಾಸಗಿಯವರ ಒಡೆತನದಲ್ಲಿ ಹೊಸ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳ ಪ್ರವೇಶಕ್ಕೆ ಉತ್ತೇಜನ ನೀಡಲಾಯಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ಮಾಡಿ ಅಭಿವೃದ್ಧಿ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕು ಎಂಬ ಅಂತರವನ್ನು ಅಳಿಸಿ ಯುನಿವರ್ಸಲ್ ಬ್ಯಾಂಕು ಎಂಬ ಕಲ್ಪನೆಗೆ ಚಾಲನೆ ನೀಡಲಾಯಿತು. ಈ ಬದಲಾವಣೆಯಲ್ಲಿ ಐಡಿಬಿಐ ಮತ್ತು ಐಸಿಐಸಿಐ ಸಂಸ್ಥೆಗಳು ತಮ್ಮ ವ್ಯವಹಾರದ ಮಾದರಿಗಳನ್ನು ಬದಲಾಯಿಸಿ ವಾಣಿಜ್ಯ ಬ್ಯಾಂಕುಗಳಾಗಿ ಕಾರ್ಯನಿರ್ವಹಿಸಲು ಆರಂಭಿಸಿದವು ಮತ್ತು ಅವುಗ ಐಡಿಬಿಐ ಬ್ಯಾಂಕು ಮತ್ತು ಐಸಿಐಸಿಐ ಬ್ಯಾಂಕುಗಳಾಗಿ ಪುನರ್‌ನಾಮಕರಣಗೊಂಡವು. 2000ದ ಮೊದಲ ದಶಕದಲ್ಲಿ ಸರಕಾರದ ಸ್ವಾಮ್ಯದಲ್ಲಿದ್ದ ಐಡಿಬಿಐ ಬ್ಯಾಂಕು ತನ್ನ ಸಾಲನೀಡಿಕೆ ಮತ್ತು ನಿರ್ವಹಣೆಯಲ್ಲಿ ಆಗುತ್ತಿದ್ದ ಪ್ರಶ್ನಾರ್ಹ ನಿರ್ಧಾರಗಳಿಂದ ನಷ್ಟವನ್ನು ಅನುಭವಿಸಿತು. ಆದರೆ 2010ರ ದಶಕದಲ್ಲಿ ವಿಶೇಷಕ್ರಮಗಳನ್ನು ಕೈಗೊಂಡ ಸರಕಾರವು ಹೊಸ ಬಂಡವಾಳವನ್ನೂ ಹೂಡಿ ಬ್ಯಾಂಕು ಮತ್ತೆ ಲಾಭದಾಯಕವಾಗುವಂತೆ ಮಾಡಿತು. 2020–21ಕ್ಕೆ ಅದರ ನಿವ್ವಳ ಲಾಭ ರೂ. 1,359 ಕೋಟಿಯಷ್ಟಾಯಿತು. 2025–26ಕ್ಕೆ ಅದು ರೂ. 9,513 ಕೋಟಿಗೆ ಏರಿತು. ಐಡಿಬಿಐ ಬ್ಯಾಂಕು ತನ್ನ ಹಿಂದಿನ ಆರೋಗ್ಯಕರ ಪರಿಸ್ಥಿತಿಗೆ ಮರಳಿತು.

1950ರ ದಶಕದಲ್ಲಿ ಸ್ಟೇಟ್ ಬ್ಯಾಂಕು ಮತ್ತು ಜೀವ ವಿಮೆಯನ್ನು ರಾಷ್ಟ್ರೀಕರಣಗೊಳಿಸಲಾಯಿತು, ಮಾತ್ರವಲ್ಲ ಪ್ರತೀ ರಾಜ್ಯದಲ್ಲಿಯೂ ರಾಜ್ಯ ಹಣಕಾಸು ಕಾರ್ಪೊರೇಶನ್ (ಎಸ್‌ಎಫ್‌ಸಿ) ಅನ್ನು ಆರಂಭಿಸಿ ಕೈಗಾರಿಕಾ ರಂಗಕ್ಕೆ ಎಲ್ಲಾ ಮಟ್ಟದಲ್ಲಿಯೂ ಹಣಕಾಸು ಸುಲಭದಲ್ಲಿ ಸಿಗುವಂತೆ ಮಾಡಲಾಯಿತು. ಅದೇ ದಶಕದಲ್ಲಿ ಖಾಸಗಿ ಮತ್ತು ಸರಕಾರದ ಸಹಭಾಗಿತ್ವದಲ್ಲಿ ಇಂಡಸ್ಟ್ರಿಯಲ್ ಕ್ರೆಡಿಟ್ ಆಂಡ್ ಇನ್ವೆಸ್ಟ್ಮೆಂಟ್ ಕಾರ್ಪೊರೇಶನ್ ಆಫ್ ಇಂಡಿಯಾ (ಐಸಿಐಸಿಐ) ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಮುಖ್ಯವಾಗಿ ಕೈಗಾರಿಕೆಗಳ ಅಭಿವೃದ್ಧಿಗೆ ಸಾಲ ಒದಗಿಸುವ ಈ ರಂಗವನ್ನು ಅಭಿವೃದ್ಧಿ ಹಣಕಾಸು ರಂಗವೆಂದು ಗುರುತಿಸಿ ಅದರ ಬೆಳವಣಿಗೆ ಮತ್ತು ನಿಯಂತ್ರಣಕ್ಕೋಸ್ಕರ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಹೊಸತೊಂದು ಕೇಂದ್ರ ಹಣಕಾಸು ಸಂಸ್ಥೆಯನ್ನು 1964ರಲ್ಲಿ ಸಂಸತ್ತಿನ ಶಾಸನದ (ಐಡಿಬಿಐ ಆಕ್ಟ್) ಮೂಲಕ ಸ್ಥಾಪಿಸಲಾಯಿತು.

ರಾಮಾಯಣ

22. ಪ್ರಹಸ್ತನನ್ನು ನೀಲನು ಸಂಹರಿಸಿದುದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

[illegible]

ಮುಂದುವರೆಯುವುದು

ಧಾರ್ಮಿಕ, ಆಧ್ಯಾತ್ಮಿಕ, ಸಾಹಿತ್ಯ, ವೈದ್ಯಕೀಯ, ಶಿಕ್ಷಣ, ಉದ್ಯಮ ಹಾಗೂ ಪತ್ರಿಕೋದ್ಯಮ ಕ್ಷೇತ್ರದ ಸಾಧಕರಿಗೆ ವಿಶ್ವ ಮಧ್ವಮತ ವೆಲ್ಫೇರ್ ಫೌಂಡೇಶನ್ ಗೌರವ

ಜಗದ್ಗುರು ಶ್ರೀ ಮಧ್ವಾಚಾರ್ಯರ ದ್ವೈತ ವೇದಾಂತ ತತ್ತ್ವದ ಪ್ರಚಾರ ,ಮಾಧ್ವ ಸಮುದಾಯದ ಕ್ಷೇಮಾಭಿವೃದ್ಧಿಯ ಉದ್ದೇಶದಿಂದ ವಿಶ್ವ ಮಧ್ವಮತ ವೆಲ್ಫೇರ್ ಫೌಂಡೇಶನ್ (ನೋಂ.) ವತಿಯಿಂದ ಹಮ್ಮಿಕೊಂಡಿದ್ದ ಮಧ್ವ ಜಯಂತಿಯನ್ನು ಬಸವನಗುಡಿಯ ಉತ್ತರಾದಿ ಮಠದಲ್ಲಿ ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತ ಫೌಂಡೇಶನ್ ದ್ವೈತ ಸಿದ್ಧಾಂತದ ಪ್ರಚಾರ, ಸಮುದಾಯದ ಕ್ಷೇಮಾಭಿವೃದ್ಧಿ, ಸಾಮರಸ್ಯ ಹಾಗೂ ನೆರವು ನೀಡುವ ಕಾರ್ಯಗಳನ್ನು ಕೈಗೊಳ್ಳುತ್ತಿರುವುದು ಶ್ಲಾಘನೀಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು .

ರಾಜ್ಯ ಸರ್ಕಾರ ಮಧ್ವ ಜಯಂತಿ ಯನ್ನು ಅಧಿಕೃತ ಘೋಷಣೆ ಮಾಡುವಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವಿಜಯ ಮುಳಗುಂದ್ ರವರ ಪಾತ್ರ ಸ್ಮರಣೀಯ ಎಂದು ತಿಳಿಸಿದರು .

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀರಾಮ ಸೇನೆಯ ಅಧ್ಯಕ್ಷ ಪ್ರಮೋದ್ ಮುತಾಲಿಕ್‌ರವರು ಧಾರ್ಮಿಕ ಕ್ಷೇತ್ರದ ವಿದ್ವಾನ್ ಪವಮಾನಾಚಾರ್ಯ ಕಲ್ಲಾಪುರ, ಜ್ಯೋತಿಷಿ ಡಾ. ಪ್ರಸನ್ನಾಚಾರ್ಯ ಕಟ್ಟಿ, ದಾಸ ಸಾಹಿತ್ಯ ಪ್ರಸಾರಕ ಪ್ರಮೋದಾಚಾರ್ಯ ಹನಮಸಾಗರ್ ಹಾಗೂ ಅನುಮಾನತೀರ್ಥ ಆಚಾರ್ಯ ಅವರಿಗೆ 'ಮಧ್ವ ವಿಜಯ' ಪ್ರಶಸ್ತಿ ಹೃದ್ರೋಗ ತಜ್ಞ ಡಾ. ವೇಣುಗೋಪಾಲ ರಾಮರಾವ್, ಉದ್ಯಮಿ ಬಿ.ಎಸ್. ವೇದವ್ಯಾಸ, ನರಗುಂದ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ. ಶಚೀಂದ್ರ ಎಲ್. ನರಗುಂದ ಹಿರಿಯ ಪತ್ರಕರ್ತ 'ಕೋಲಾರ ವಾಣಿ' ಸಂಪಾದಕ ಬಿ.ಎನ್. ಮುರಳಿಪ್ರಸಾದ್ ಅವರಿಗೆ 'ಹನುಮ ಮಧ್ವೇಶ' ಪ್ರಶಸ್ತಿ ಮಾಡಿ ಗೌರವಿಸಿದರು .

ಸಿ.ಎ. ಮುರಳಿ,ಹಾಗೂ ಸಂಸ್ಕೃತಿ ಚಿಂತಕ, ಪ್ರಣವ ಮೀಡಿಯಾ ಹೌಸ್ ಪ್ರಕಾಶನದ ಕಾರ್ಯನಿರ್ವಾಹಕ ಡಾ. ಗುರುರಾಜ ಪೋಶೆಟ್ಟಿಹಳ್ಳಿ ಫೌಂಡೇಶನ್ ಕರ್ನಾಟಕ ರಾಜ್ಯಾಧ್ಯಕ್ಷ ಕೃಷ್ಣ ಎ.ಪಿ. ಸಂಸ್ಥಾಪಕ ಅಧ್ಯಕ್ಷ ವೆಂಕೋಬ ರಾವ್ ಬುಕ್ಕಸಾಗರ, ಸಹ ಸಂಸ್ಥಾಪಕ – ಖಜಾಂಚಿ ಶ್ರೀನಿವಾಸ ಜೋಶಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಜೋಯಿಸ್ ,ಬೆಂಗಳೂರು ನಗರ ಅಧ್ಯಕ್ಷ ಅನಿಲ್ ಆಚಾರ್ಯ , ಮೋಹನ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು

ಮಧ್ವ ಜಯಂತಿ ಸಂಪನ್ನ – ಸಾಧಕರಿಗೆ 'ಮಧ್ವ ವಿಜಯ', 'ಹನುಮ ಮಧ್ವೇಶ' ಪ್ರಶಸ್ತಿ ಪ್ರದಾನ

ಪರೀಕ್ಷಾ ಸಂಭ್ರಮ
ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381
21

ಪರೀಕ್ಷೆಯ ಚಿಂತೆ ತೀವ್ರಗೊಂಡಾಗ ಮಿದುಳು ಅಪಾಯದ ಸನ್ನೆ ನೀಡುತ್ತದೆ, ಆಗ ಒತ್ತಡದ ಹಾರ್ಮೋನುಗಳು ಸ್ರವಿಸುತ್ತವೆ. ನಿದ್ರೆ ಛಿದ್ರಗೊಂಡು ರೋಗನಿರೋಧಕ ಶಕ್ತಿ ಕುಸಿಯುತ್ತದೆ, ಪರಿಣಾಮವಾಗಿ ತಲೆನೋವು, ಜಠರ ಅಸ್ವಸ್ಥತೆ, ಜ್ವರದಂತಹ ಬಳಲಿಕೆ ಕಾಣಿಸಿಕೊಳ್ಳುತ್ತದೆ. ಅಸಮಯದ ಭೋಜನ, ನಿಶಿಜಾಗರಣೆ, ಜಲಸೇವನೆಯ ಕೊರತೆ ಇದನ್ನು ಇನ್ನಷ್ಟು ಉಲ್ಬಣಗೊಳಿಸುತ್ತವೆ.

ಪರೀಕ್ಷೆ ಹೊತ್ತಲ್ಲಿ ಜ್ವರದ ಭ್ರಮೆಯೇಕೆ?

ಪರೀಕ್ಷೆಗೆ ಕೆಲವು ದಿನಗಳು ಬಾಕಿ ಇರುವಾಗ ದೇಹ ಕಾವೇರಿದಂತೆ, ಶಿರಭಾರ, ಮೈಕೈ ನೋವು, ನಿತ್ರಾಣ ಆವರಿಸುತ್ತದೆ. ಜ್ವರವೇನೋ ಎಂದು ಥರ್ಮಾಮೀಟರ್ ನೋಡಿದರೆ ಉಷ್ಣತೆ ಸಹಜವಾಗಿರುತ್ತದೆ. ಇದು ನಿಜದ ಸೋಂಕಲ್ಲ, ಮನೋಜ್ವರ.

ಆತಂಕವು ದೇಹದ ಮೇಲೆ ಬೀರುವ ಮನೋದೈಹಿಕ ಪ್ರತಿಕ್ರಿಯೆಯೇ ಈ ಭ್ರಮೆ.

ಇದನ್ನು ಕಾಯಿಲೆಯೆಂದು ಭ್ರಮಿಸಬೇಡಿ. ದಿನಕ್ಕೆ ಏಳು ಗಂಟೆ ಸುಖನಿದ್ರೆ, ಅಗತ್ಯ, ಸಮಯಕ್ಕೆ ಸರಿಯಾಗಿ ಪೌಷ್ಟಿಕ ಆಹಾರ ಸೇವಿಸಿ, ಸಾಕಷ್ಟು ನೀರು ಕುಡಿಯಿರಿ. ದಿನವೂ ಹದಿನೈದು ನಿಮಿಷ ಮುಕ್ತ ಗಾಳಿಯಲ್ಲಿ ವಿಹರಿಸಿ, ಆಳವಾದ ಉಸಿರಾಟ ಅಭ್ಯಸಿಸಿ.

ಪಠ್ಯವನ್ನು ಸಣ್ಣ ಸಣ್ಣ ಖಂಡಗಳಾಗಿ ವಿಂಗಡಿಸಿ,

ಎಲ್ಲವನ್ನೂ ಒಂದೇ ದಿನ ಮುಗಿಸಬೇಕೆಂಬ ಹಠ ಬಿಡಿ, ಸಾಧ್ಯವಾದಷ್ಟನ್ನು ಶಾಂತವಾಗಿ ಪೂರ್ಣಗೊಳಿಸಿ.

ನೆನಪಿಡಿ, ಪರೀಕ್ಷೆ ಬದುಕಿನ ತುದಿಯಲ್ಲ. ಆರೋಗ್ಯವನ್ನು ಬಲಿಕೊಟ್ಟು ಬರೆದ ಪರೀಕ್ಷೆ ಸಾರ್ಥಕವಲ್ಲ. ದೇಹ ಜ್ವರದಂತೆ ಮುನ್ಸೂಚನೆ ನೀಡಿದರೆ ಕಿವಿಗೊಟ್ಟು ವಿಶ್ರಮಿಸಿ. ತಿಳಿಮನಸ್ಸು ಮತ್ತು ಸದೃಢ ದೇಹದಿಂದ ಎದುರಿಸಿದ ಪರೀಕ್ಷೆಯೇ ಉತ್ತಮ ಫಲವನ್ನು ತಂದುಕೊಡುತ್ತದೆ.

ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ ಹಾಸನ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ಹಾಸನಾಂಬ ದೇವಿಯ ದರ್ಶನವು ವರ್ಷಕ್ಕೊಮ್ಮೆ ಒಂದು ವಾರದ ಕಾಲ ದರ್ಶನವಾಗುತ್ತದೆ. ಹಾಸನದ ಜನತೆಗೆ ಹಾಸನಾಂಬ ದೇವಿಯ ದರ್ಶನ ಈ ಬಾರಿ ನವೆಂಬರ್ ತಿಂಗಳಲ್ಲಿ ಸಿಕ್ಕಿದೆ. ಎಲ್ಲರೂ ಶಿರವನ್ನು ಬಾಗಿ ನಮಿಸುವ ದೇವಿಯ ದರ್ಶನಕ್ಕೆ ಕಾತುರದಿಂದ ಕಾಯುತ್ತಿದ್ದಾರೆ. ತಾಯಿಯುವಗರ್ಭ ಗುಡಿಯ ಒಳಗಿನ ಉಜ್ವಲಿಸುವ ದೀಪದ ಬೆಳಕನ್ನು ನೋಡಲು ಭಕ್ತಾದಿಗಳು ಹಾತೊರೆಯುತ್ತಾರೆ. ಯಾರನ್ನು ಮೇಲು-ಕೀಳು ಎಂದು ನೋಡದೆ ಎಲ್ಲರನ್ನೂ ಹರಿಸಿ ತಾಯಿ ಎಂದು ಭಕ್ತಿಯಲ್ಲಿ ಬೇಡುತ್ತಾರೆ.ಹಾಸನಾಂಬ ದೇವಿಯ ದರ್ಶನವು ವರ್ಷಕ್ಕೆ ಒಮ್ಮೆ ಆಗುವುದು ಪ್ರತಿಯೊಬ್ಬರಿಗೂ ತಿಳಿದಂತಹ ವಿಷಯವಾಗಿದೆ. ನಮ್ಮ ಆಚಾರ ವಿಚಾರಗಳಲ್ಲಿ ನೋಡಿದರೆ ಹಾಸನಾಂಬ ದೇವಿಯ ಮಡಿವಂತಿಕೆ, ನಿರ್ಮಲ್ಯ, ನಿಯಮ ನಿಷ್ಠೆಗೆ ಒಲಿಯುವಳು ಎಂದು ತಿಳಿದುಬಂದಿದೆ. ಈ ಬಾರಿ ನವೆಂಬರ್ ಒಂದರಿಂದ ಹಾಸನಾಂಬ ದೇವಿಯ ದೇವಾಲಯದ ಬಾಗಿಲು ತೆರೆದಿದ್ದು, ಭಕ್ತಾದಿಗಳ ದರ್ಶನಕ್ಕಾಗಿ ಸಿದ್ಧವಾಗಿದೆ. ಈ ದೇವಾಲಯದ ಪ್ರಮುಖರಾದ ತಹಶೀಲ್ದಾರ್, ಹಾಸನ, ತಾಯಿಯ ಮುಂತಾದವರ ಸಮ್ಮುಖದಲ್ಲಿ ಈ ದೇವಾಲಯವನ್ನು ತೆರೆಯಲಾಗುತ್ತದೆ. ಬಹಳ ಹಿಂದಿನಿಂದ ಬಂದಂತಹ ಇತಿಹಾಸವೆಂದರೆ ಬಲಿಪಾಡ್ಯಮಿಯ ಮೂರನೇ ದಿನ ಅವರಲ್ಲರ ಸಮ್ಮುಖದಲ್ಲಿ ದೇವಿಗೆ ದೀಪ, ಅಕ್ಕಿ, ನೈವೇದ್ಯ ಇಟ್ಟು ಅಲಂಕಾರವನ್ನು ಮಾಡಿ ಭಕ್ತಿಯಿಂದ ದೇವಾಲಯವನ್ನು ಮುಚ್ಚಲಾಗುತ್ತದೆ. ಎಂಬುದು ತಿಳಿದು ಬಂದಂತಹ ವಿಷಯ. ಈ ದೇವಾಲಯದ ದರ್ಶನ ಮಾಡಲು ಹಲವಾರು ರಾಜ್ಯಗಳಿಂದ ಇತ್ತೀಚಿನ ವರದಿಗಳ ಪ್ರಕಾರ ವಿದೇಶಗಳಿಂದಲೂ ಸಹ ದರ್ಶನಕ್ಕಾಗಿ ಬರುತ್ತಿದ್ದಾರೆ ಎಂಬುದು ತಿಳಿದು ಬರುತ್ತಿದೆ.

ಕೇಳಿದ್ದೀರಾ , ನೋಡಿದ್ದೀರಾ ವಿಸ್ಮಯದ ದೇಗುಲ ಹಾಸನಾಂಬ ದೇವಾಲಯ

ಹಾಸನಾಂಬ ದೇವಾಲಯದ ದಂತ ಕಥೆಯನ್ನು ಹೀಗೆಂದು ಹೇಳಬಹುದು. ಮನೆ ಕೆಲಸವನ್ನು ಬಿಟ್ಟು ಸೋಮವಾರ ದೇವರನ್ನು ಕುರಿತು ಧ್ಯಾನ ಮಾಡುತ್ತ ಮಲಗಿರುವಾಗ ಆಕೆಯ ಅತ್ತೆ ದೇವಿಯ ಎದುರಿಗೆ ಇದ್ದ ಬಿಂದಾನದ ಬಟ್ಟಲು ತೆಗೆದು ಸೋಮವಾರ ತಲೆಗೆ ಚೆಲ್ಲಿದರಂತೆ. ಚೆಲ್ಲಿದ ತಕ್ಷಣ ಸೊಸೆ ಭಕ್ತಿಯಿಂದ ಅಮ್ಮ ಹಾಸನಾಂದೆ ಕಾಪಾಡು ತಾಯಿ ಎಂದು ಕೂಗಿಕೊಂಡರಂತೆ. ದೇವಿಯು ತನ್ನ ಭಕ್ತೆಯ ಮೊರೆ ಕೇಳಿ ತನ್ನ ಸನ್ನಿಧಿಯಲ್ಲಿ ಕಲ್ಲಾಗಿದ್ದು ಇಲ್ಲಿಗೆ ಬರುವವರೆಲ್ಲರ ಭಕ್ತಿ ಭಾವಕ್ಕೆ ನೀನು ಸಾಕ್ಷಿಯಾಗುವೆ ಎಂದು ಹರಿಸಿದರಂತೆ ಎಂಬುದು ಪ್ರತಿಯೊಬ್ಬರಿಗೂ ತಿಳಿದಂತಹ ವಿಷಯ. ಗರ್ಭ ಗುಡಿಯನ್ನು ಗಮನಿಸಿದರೆ ನಿಯಮಿತ ದಿನಗಳಲ್ಲಿ ಪ್ರತಿವರ್ಷ ತೆರೆಯುವ ದೇವಾಲಯದಲ್ಲಿ ಕೃಷ್ಣಪ್ಪ ನಾಯಕನ ಕಾಲದಿಂದಲೂ ಅಶ್ವಿಜ ಮಾಸ ಪೂರ್ಣಿಮೆಯ ನಂತರ ಬರುವ ಗುರುವಾರದಂದು ಹಾಸನಾಂಬೆಯ ದೇವಾಲಯ ತೆರೆಯಲ್ಪಡುತ್ತದೆ. ಜನಸಾಗರವು ಸಹಸ್ರ ಸಂಖ್ಯೆಗಾಗಿ ಬಂದು ದೇವಿಯ ದರ್ಶನ ಪಡೆಯುತ್ತದೆ. ಗರ್ಭಗುಡಿಯಲ್ಲಿ ಮುತ್ತಿನೋಡಿಯಲ್ಲಿರುವಂತಹ ಅದ್ಭುತ ಸ್ಥಳೋಟೆ ಹಾಸನಾಂಬೆಗೆ ಇಂದಿನ ವರೆಗೂ ಅಚ್ಚರಿ ದೀಪವು ಅದೇ ಅಲಂಕರಿಸಿದ ಹೂ ಬಾಡದೆ, ಅಕ್ಕಿಯು ಅನ್ನವಾಗಿರುವದನ್ನು ನೋಡಲು ಭಕ್ತಾದಿಗಳು ಮುಗಿಬಿದ್ದು ಕಾಯುತ್ತಿದ್ದಾರೆ. ಇಲ್ಲಿರುವ ಸಪ್ತ ಮಾತೃಕೆಯರು ಶ್ರೀ ದುರ್ಗಾ ಅವತಾರರಾಗಿದ್ದಾರೆ.

ಹಾಸನ ನಗರದ ಹೃದಯ ಭಾಗದಲ್ಲಿ ಇರುವಂತಹ ದೇವಿರೆಯ ಬ್ರಹ್ಮದೇವಿ. ಕೆಂಚಮ್ಮ ದೇವಿಯ ಹೊಸಪೇಟೆಯಲ್ಲಿ ನೆಲೆಸಿದ್ದಾಳೆ. ಅದರಕ್ಕೆ ಸುರೋಟಿಗೆ ವಾಸಕ್ಕೆ ಸುರೋಟಿಪುರವಾಗಿರುವ ಹಾಸನಾಂಬೆ ಸಿಂಹಾಸನಪುರಿಯ ಆದಿ ದೇವತೆ, ಭಕ್ತಿಯಿಂದ ಬೇಡಿದವರಿಗೆ ವರ ಕೊಡುವ ಶಕ್ತಿ ದೇವತೆಯಾಗಿದ್ದಾಳೆ.

12ನೇ ಶತಮಾನದ ವಿಷಯಕ್ಕೆ ಬಂದರೆ ಹಾಸನದ ಚೆನ್ನಪಟ್ಟಣ ಪಾಳೆಯಗಾರ ಶ್ರೀ ಕೃಷ್ಣಪ್ಪ ನಾಯಕನ ಕಾಲದಲ್ಲಿ ಕೃಷ್ಣನಾಯಕನ ಕಾರ್ಯ ನಿಮಿತ್ತ ಪ್ರಯಾಣ ಹೊರಟಾಗ ಮೂಲ ಒಂದು ಅಡ್ಡಿ ಬಂದು ಆ ಅಡ್ಡ ನ್ನು ಅವರು ಮನವೆಂದು ಭಾವಿಸುತ್ತಾನೆ. ಈ ಮೇಲೆ ಪುಷ್ಪವಾದ ಅರಿಶಿನ ಸುರೋಟಿಗೆ ಈ ಸ್ಥಳದಲ್ಲಿ ದೇಗುಲ ಕಟ್ಟಿ ನಾನು ಹಾಸನದೆ ಎಂದೇ ಹೆಸರಾಗಿ

ಹಾಸನದ ದೇವಿಯೂ ಹಾಸನಾಂಬೆಯು ತಾಯಿ
ಮಾಸ ನವೆಂಬರ್ ನಲಿ ದರುಶನವದು
ಸೀಸನನು ಮುಗಿಯುತಲಿ ಜನರಲ್ಲಿ ಬರುತಿರಲು
ಸೋಸಿದರೆ ಹರಿಸುವೆಯು ಲಕ್ಷ್ಮಿ ದೇವಿ.....

ಕೈ ಮುಗಿದು ಬೇಡುವೆನು ದೇವಿ ಹರಸು ತಾಯಿ ಎಲ್ಲರಿಗೂ ಭಕ್ತಿ ಭಾವದಲಿ ಬಂದಿಹವು ನಾವೆಲ್ಲ ದರ್ಶನ ಕೊಡು ನೀ ದೇವಿ...



ಇಲ್ಲಿ ನೆಲೆಸುವೆ ಎಂದರಂತೆ. ಕುದುರೆ ಗಂಡಿಯಲ್ಲಿ ಇರುವ ಶಾಸನ 114ನೇ ವೀರಗಲ್ಲಿನ ಶಾಸನದ ಪ್ರಕಾರ ಹೀಗಿದೆ. ಈ ದೇವಾಲಯದ ಕಥೆಗಳನ್ನು ನೋಡುತ್ತಾ ಹೋದರೆ ಕಾಶೀವಾರಣಾಸಿಯಿಂದ ದಕ್ಷಿಣ ಅಭಿಮುಖವಾಗಿ ವಾಯುವಿಹಾರಕ್ಕೆ ಎಂದು ಬಂದ ಸಪ್ತ ಮಾತೃಕೆಯರು ಪ್ರಕೃತಿಯ ಸೌಂದರ್ಯಕ್ಕೆ ಮನಸೋತು ನೆಲೆಸಲು ನಿರ್ಧರಿಸಿದ ಕ್ಷೇತ್ರವೇ ಸಿಂಹಾಸನಪುರಿ ಅಂದರೆ ಹಾಸನ ಎಂದು ವರ್ಣಿಸಲಾಗಿದೆ. ಅಂದರೆ ಬ್ರಾಹ್ಮಿದೇವಿ, ಮಾಹೇಶ್ವರಿ, ಕುಮಾರಿ, ವೈಷ್ಣವಿ, ವರಾಹಿ, ಇಂದ್ರಾಣಿ, ಮತ್ತು ಚಾಮುಂಡಿ ಇವರು ಬಂದರೆಂದು ಪ್ರಕೃತಿ ಅವರಲ್ಲಿ ವೈಷ್ಣವಿ, ವರಾಹಿ ಮತ್ತು ಇಂದ್ರಾಣಿ ಈ ಮೂರು ದೇವತೆಗಳು ಹುತ್ತದಲ್ಲಿ ನೆಲೆಸಿದ ಸ್ಥಳವೇ ಹಾಸನಾಂಬೆಯ ದೇಗುಲ ದೇವನೊಬ್ಬನೆ ಆದರೂ ಆದಿ ಮಹಿಳೆಯರು ಪುರುಷ ಮತ್ತು ಸ್ತ್ರೀಯರ ಎರಡು ರೂಪಗಳನ್ನು ಒಂದಾಗಿ ಗರ್ಭಗುಡಿಯಲ್ಲಿ ಹುತ್ತರೋಪಾದಿಯಲ್ಲಿ ಇರುವ ಅದಕ್ಕೆ ಸುರೋಟಿಗೆ ಹಾಸನಾಂಬೆಗೆ ಇಂದಿನ ವರ್ಷ ಹಚ್ಚಿದ್ದ ದೀಪವು ಹಾರದೆ ಮೋಡಿದ ಹೂ ಬಾಡದೆ ಹಾಗೂ ನೈವೇದ್ಯಕ್ಕಿಂತ ಅಕ್ಕಿ ಅನ್ನವಾಗುವುದು ವಿಸ್ಮಯ. ಈ ವಿಸ್ಮಯ ದೃಶ್ಯವನ್ನು ಬಹುಸಂಖ್ಯ ವರ್ಷದ ಹಿಂದಿಂದಲೂ ಪ್ರತ್ಯಕ್ಷವಾಗಿ ನೋಡಿದ ಜನರು ವಿಸ್ಮಯವೆಂದು ದೇವತೆಗೆ ಭಕ್ತಿ ಭಾವದಿಂದ ಪೂಜಿಸುತ್ತಾರೆ.

ಹಾಗೆ ಇನ್ನೊಂದು ವಿಷಯವೆಂದರೆ ಮಹಾಭಾರತದ ಅರ್ಜುನನ ಮೊಮ್ಮಗ ಜನಮೇಜಯ ಶಾಪಗ್ರಸ್ತನಾಗಿದ್ದ ಕಾಲದಲ್ಲಿ ಇಲ್ಲಿ ನೆಲೆಸಿದ ಆಗ ಈ ಸ್ಥಳಕ್ಕೆ ಸಿಂಹಾಸನಪುರಿ ಎಂದು ಹೆಸರು ಬಂದಿತು ಎಂಬುದು ಆದು ಮಾಹಿತಿಯಿಂದ ಹಾಸನ ಎಂದುಯಾಗಿದೆ ಎಂದು ನಂಬಲಾಗಿದೆ. ಈ ದೇವಾಲಯದ ಪ್ರಾಂಗಣದಲ್ಲಿ ಮುಖ್ಯವಾಗಿ ಮೂರು ದೇವಾಲಯಗಳಿವೆ. ದೊಡ್ಡ ಗಣಪತಿ ದೇವಾಲಯ, ಹಾಸನಾಂಬ ದೇವಾಲಯ ಹಾಗೂ ಸಿದ್ಧೇಶ್ವರ ದೇವಾಲಯ ಎಂಬುದು ಆ ದೇವಾಲಯವನ್ನು ಪ್ರವೇಶಿಸಿದವರಿಗೆ ಸುಲಭವಾಗಿ ತಿಳಿಯುವಂತೆ ಮಾಡಿದ್ದಾರೆ. ಇಲ್ಲಿ ಇನ್ನೂ ಒಂದು ಮುಖ್ಯವಾದ ಸ್ಥಳವೆಂದರೆ ಕಲ್ಲಪ್ಪನ ಗುಡಿ ಇಲ್ಲಿ ಮೂರು ವಿಗ್ರಹಗಳಿವೆ ವಾರಾಹಿ ಪ್ರಕಾರ ಈ ದೇವಾಲಯವನ್ನು ಕಳ್ಳ ತನ ಮಾಡಲು ಬಂದ ಕಳ್ಳರು ದೇವಿಯ ಅಕ್ಕಿಗೆ ಒಗ್ಗಾದರಂತೆ ಈ ವೇಳೆ ಅಕ್ಕಿ ಕಳ್ಳರಿಗೆ ಕಲ್ಲಾಗುವಂತೆ ಶಾಪ ನೀಡಿದಂತೆ ಇಂದಕ್ಕೆ ಕಲ್ಲಪ್ಪನ ಗುಡಿ ಎಂದು ಕರೆಯುತ್ತಾರೆ.ಒಬ್ಬರೆ ವರ್ಷಕ್ಕೊಮ್ಮೆ ತೆಗೆಯುವ ಹಾಸನಾಂಬ ದೇವಾಲಯವು, ಇಡೀ ದೇವಾಲಯದಂತೆ ಪೂಜಾರಿಗೊಂದು ಎಲ್ಲಾ ಕಡೆಯಿಂದಲೂ ಜನರು ದರ್ಶನಕ್ಕಾಗಿ ಬರುತ್ತಾರೆ.

ದೇವಾಲಯ ತೆರೆದ ದಿನವೆಲ್ಲವೂ ಜಾತ್ರೆಯ ದಿನದಂತೆ ವಿಜೃಂಭಣೆಯಿಂದ ಕಾರ್ಯವನ್ನು ನಿರ್ವಹಿಸುತ್ತಾರೆ.

ಭಕ್ತಿ ಭಾವದಲ್ಲಿ ಭಕ್ತಾದಿಗಳು ಮುಳುಗಿರುತ್ತಾರೆ. ಹಾಸನಾಂಬ ದೇವಿಯ ಕೃಪೆಯು ಎಲ್ಲರಿಗೂ ಲಭಿಸಲಿ ಎನ್ನುತ್ತದೆ. ಈ ಲೇಖನಿಗೆ ಮುಕ್ತಾಯವನ್ನು ಹೇಳುತ್ತಿದ್ದೇನೆ. ಜೈ ಹಿಂದ್ ಜೈ ಕರ್ನಾಟಕ ಮಾತೆ.

ದೈನಂದಿನ ನಿಯಮಿತ ವ್ಯಾಯಾಮದಿಂದ ಒತ್ತಡ ಕಡಿಮೆಯಾಗುತ್ತದೆಯೇ? ಸಂಶೋಧನೆ ತಿಳಿಸುವುದೇನು?

ನಾವು ಪ್ರತಿದಿನ ಎದುರಿಸುವ ಅವಸರದ ಸನ್ನಿವೇಶಗಳು ಹಾಗೂ ಕೆಲಸದ ಅತಿಯಾದ ಒತ್ತಡ ನಮಗೆ ಅರಿವಿಲ್ಲದೆಯೇ ನಮ್ಮಲ್ಲಿ ಮಾನಸಿಕ ಒತ್ತಡ ಉಂಟುಮಾಡುತ್ತವೆ. ಕಾಲಕ್ರಮೇಣವಾಗಿ ಮಾನಸಿಕ ಹೊರೆಯು ನಮ್ಮ ದೈಹಿಕ ಆರೋಗ್ಯದ ಮೇಲೆ ಹಾಗೂ ನಮ್ಮ ಉತ್ಸಾಹ ಇಲ್ಲವೇ ಪ್ರೇರಣೆಯ ಮಟ್ಟದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತದೆ. ಈ ರೀತಿಯ ಸಮಸ್ಯೆಗಳನ್ನು ನಿವಾರಿಸಲು ಕೇವಲ ಔಷಧಿಗಳನ್ನೇ ಅವಲಂಬಿಸುವ ಬದಲು, ದೇಹವನ್ನು ಸಕ್ರಿಯವಾಗಿರಿಸಿಕೊಳ್ಳುವ ಮೂಲಕ ಮನಸ್ಸಿನ ಶಾಂತಿಯನ್ನು ಕಂಡುಕೊಳ್ಳಬಹುದು. ನಿಯಮಿತ ವ್ಯಾಯಾಮ ಎಂದರೆ, ಕೇವಲ ದೇಹದ ತೂಕ ಇಳಿಸಿಕೊಳ್ಳುವುದು ಇಲ್ಲವೇ ದೈಹಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಮಾತ್ರವಾಗಿರುವುದಿಲ್ಲ. ವ್ಯಾಯಾಮ ಮಾಡುವುದರಿಂದ ಮನಸ್ಸನ್ನು ಶಾಂತಗೊಳಿಸಲು ಹಾಗೂ ಅನಗತ್ಯ ಚಿಂತೆಗಳಿಂದ ಮುಕ್ತಗೊಳಿಸಲು ಸರಳವಾಗಿರುವ ನೈಸರ್ಗಿಕ ಮಾರ್ಗವಾಗಿದೆ. ನಿತ್ಯ ವ್ಯಾಯಾಮಕ್ಕಾಗಿ ಸ್ವಲ್ಪ ಸಮಯ ಮೀಸಲಿಡುವುದರಿಂದ ಹೇಗೆ ಮನಸ್ಸನ್ನು ಹಗುರಗೊಳಿಸಲು ಸಾಧ್ಯವಾಗುತ್ತದೆ. ಪ್ರತಿದಿನ ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ಒತ್ತಡ ತಗ್ಗುತ್ತದೆ ಎಂಬುದರ ನಡುವಿನ ಸಂಬಂಧವನ್ನು ವಿವರಿಸಲು ಸಂಶೋಧಕರು ಎರಡು ಪ್ರಮುಖ ಕಾರಣಗಳನ್ನು ತಿಳಿಸುತ್ತಾರೆ. ನಿಯಮಿತವಾಗಿ ವ್ಯಾಯಾಮ ಮಾಡುವವರು ಬೇಗನೇ ಒತ್ತಡದಿಂದ ಮುಕ್ತಿ ಪಡೆಯಲು ತುಂಬಾ ಸುಲಭವಾಗುತ್ತದೆ. ಹಲವು ಅಧ್ಯಯನಗಳು ತಿಳಿಸುವ ಪ್ರಕಾರ, ನಿರಂತರವಾಗಿ ವ್ಯಾಯಾಮ ಮಾಡುವ ವ್ಯಕ್ತಿಗಳು ಕಠಿಣ ಸನ್ನಿವೇಶಗಳನ್ನು ಎದುರಿಸುವಾಗಲೂ ಸಕಾರಾತ್ಮಕ ಮನಸ್ಥಿತಿಯನ್ನು ಕಾಪಾಡಿಕೊಳ್ಳುವಲ್ಲಿ ಹೆಚ್ಚು ಸಮರ್ಥರಾಗಿರುತ್ತಾರೆ. ಇದಕ್ಕೆ ವಿರುದ್ಧವಾಗಿ ವ್ಯಾಯಾಮ ಮಾಡದವರು ತಕ್ಷಣದ ಒತ್ತಡ ಹೆಚ್ಚು ಒಳಗಾಗುತ್ತಾರೆ. ದೈಹಿಕವಾಗಿ ಸಕ್ರಿಯವಾಗಿರುವುದು ವ್ಯಕ್ತಿಗಳನ್ನು ಯಾವುದೇ ಸವಾಲಿನ ಪರಿಸ್ಥಿತಿಯನ್ನು ಎದುರಿಸಲು ಸಿದ್ಧಗೊಳಿಸುತ್ತದೆ ಎಂಬುದನ್ನು ಅಧ್ಯಯನ ವಿವರಿಸುತ್ತದೆ. ವೈದ್ಯರ ಬಳಿಗೆ ಬರುವ ಅನೇಕ ರೋಗಿಗಳು ಮುಖ್ಯವಾಗಿ ಒತ್ತಡದಿಂದ ಉಂಟಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುತ್ತಾರೆ. ಮಧುಮೇಹ, ಬೊಜ್ಜು, ಹೃದಯರೋಗ, ನಿದ್ರಾಹೀನತೆ, ತಲೆನೋವು ಹಾಗೂ ಬೆನ್ನುನೋವಿನಂತಹ ಸಮಸ್ಯೆಗಳ ಹಿಂದೆ ಒತ್ತಡವು ಪ್ರಮುಖ ಕಾರಣವಾಗಿರುತ್ತದೆ.

ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಪುಟ್ಟ ಮಳಿಗೆಯಿಂದ ಜನಪ್ರಿಯ ಬ್ರ್ಯಾಂಡ್‌ವರೆಗೆ: ಹಟ್ಟಿ ಕಾಫಿಯ ಯಶೋಗಾಥೆ!

ಕನಸು ಕಾಣುವುದು ಸುಲಭ; ಅದನ್ನು ಪರಿಶ್ರಮದಿಂದ ನನಸಾಗಿಸುವುದೇ ನಿಜವಾದ ಸಾಧನೆ. ಸಣ್ಣ ಆರಂಭವೂ ದೊಡ್ಡ ಇತಿಹಾಸಕ್ಕೆ ನಾಂದಿಯಾಗಬಲ್ಲದು ಎಂಬುದಕ್ಕೆ ಹಟ್ಟಿ ಕಾಫಿಯ ಯಶಸ್ಸು ಸಾಕ್ಷಿ. ಕರ್ನಾಟಕದ ಕಾಫಿ ಪರಂಪರೆಯನ್ನು ಆಧುನಿಕ ಉದ್ಯಮದೊಂದಿಗೆ ಬೆಸೆದು, ಜನರ ಮನಸ್ಸಿನಲ್ಲಿ ವಿಶಿಷ್ಟ ಸ್ಥಾನ ಗಳಿಸಿರುವ ಸಂಸ್ಥೆ ಹಟ್ಟಿ ಕಾಫಿ ಬೆಂಗಳೂರಿನ ಗಾಂಧಿ ಬಜಾರ್‌ನ ಪುಟ್ಟ ಮಳಿಗೆಯಲ್ಲಿ ಆರಂಭವಾದ ಈ ಉದ್ಯಮ ಇಂದು ಅನೇಕ ನಗರಗಳಲ್ಲಿ ತನ್ನದೇ ಆದ ಗುರುತನ್ನು ಮೂಡಿಸಿದೆ. ಇದರ ಹಿಂದೆ ಉದ್ಯಮಿ ಯು.ಎಸ್. ಮಹೇಂದರ್ ಅವರ ದೂರದೃಷ್ಟಿ, ಪರಿಶ್ರಮ ಮತ್ತು ಉದ್ಯಮಶೀಲತೆಯ ಮನೋಭಾವವಿದೆ.

ಸಣ್ಣ ಆರಂಭ, ದೊಡ್ಡ ಕನಸು : 2009ರಲ್ಲಿ ಬೆಂಗಳೂರಿನ ಬಸವನಗುಡಿಯ ಗಾಂಧಿ ಬಜಾರ್‌ನಲ್ಲಿ ಸುಮಾರು 30 ಚದರ ಅಡಿಯ ಪುಟ್ಟ ಮಳಿಗೆಯ ಮೂಲಕ ಹಟ್ಟಿ ಕಾಫಿಯ ಪಯಣ ಆರಂಭವಾಯಿತು. ಅಂದು ಐದು ರೂಪಾಯಿಗೆ ಫಿಲ್ಟರ್ ಕಾಫಿ ನೀಡುವ ಮೂಲಕ ಸಾಮಾನ್ಯ ಜನರಿಗೂ ಕೈಗೆಟುಕುವ ದರದಲ್ಲಿ ಉತ್ತಮ ಕಾಫಿ ಒದಗಿಸುವ ಉದ್ದೇಶವನ್ನು ಸಂಸ್ಥೆ ಹೊಂದಿತ್ತು. ಕಾಫಿ ಬೆಳೆಗಾರರ ಕುಟುಂಬದ ಹಿನ್ನೆಲೆ ಮತ್ತು ಕಾಫಿ ವ್ಯಾಪಾರದ ಅನುಭವ ಹೊಂದಿದ್ದ ಮಹೇಂದರ್ ಅವರು, ಕಾಫಿಯನ್ನು ಕೇವಲ ವ್ಯಾಪಾರದ ವಸ್ತುವಾಗಿ ನೋಡದೆ, ನಮ್ಮ ಸಂಸ್ಕೃತಿ ಮತ್ತು ಆತಿಥ್ಯದ ಪ್ರತೀಕವಾಗಿ ಪರಿಚಯಿಸುವ ಕನಸು ಕಂಡರು. ಆ ಕನಸೇ ಮುಂದೆ ಹಟ್ಟಿ ಕಾಫಿಯ ಬೆಳವಣಿಗೆಗೆ ಭದ್ರ ಬುನಾದಿಯಾಯಿತು.

ಪರಿಶ್ರಮವೇ ಯಶಸ್ಸಿನ ಮೆಟ್ಟಿಲು : ಯಾವುದೇ ಉದ್ಯಮದ ಆರಂಭ ಸುಲಭವಲ್ಲ. ಸೀಮಿತ ಬಂಡವಾಳ, ಮಾರುಕಟ್ಟೆಯ ಸ್ಪರ್ಧೆ, ಗ್ರಾಹಕರ ವಿಶ್ವಾಸ ಗಳಿಸುವ ಸವಾಲುಗಳು ಪ್ರತಿಯೊಬ್ಬ ಉದ್ಯಮಿಯನ್ನೂ ಪರೀಕ್ಷಿಸುತ್ತವೆ. ಆದರೆ ದೃಢಸಂಕಲ್ಪ ಮತ್ತು ನಿರಂತರ ಪರಿಶ್ರಮವಿದ್ದರೆ ಅಡೆತಡೆಗಳನ್ನು ಅವಕಾಶಗಳಾಗಿ ಪರಿವರ್ತಿಸಬಹುದು ಎಂಬುದನ್ನು ಹಟ್ಟಿ ಕಾಫಿಯ ಪಯಣ ತೋರಿಸುತ್ತದೆ. ಉತ್ತಮ ರುಚಿ, ಕಾಫಿಯ ಸುವಾಸನೆ, ಗುಣಮಟ್ಟ ಮತ್ತು ಗ್ರಾಹಕರ ತೃಪ್ತಿಗೆ ಆದ್ಯತೆ ನೀಡಿದ ಸಂಸ್ಥೆ, ಜನರ ವಿಶ್ವಾಸವನ್ನು ಗಳಿಸಿತು. ಗ್ರಾಹಕರ ಮೆಚ್ಚುಗೆಯೇ ಅದರ ಬೆಳವಣಿಗೆಗೆ ಪ್ರೇರಣೆಯಾಯಿತು. ಒಂದು ಸಣ್ಣ ಮಳಿಗೆಯಲ್ಲಿ ಆರಂಭವಾದ ಉದ್ಯಮವು ಮುಂದೆ ಕಾರ್ಪೊರೇಟ್ ಕಚೇರಿಗಳು, ಐಟಿ ಕಂಪನಿಗಳ ಆವರಣಗಳು, ವಾಣಿಜ್ಯ ಪ್ರದೇಶಗಳು ಮತ್ತು ಇತರ

ಪ್ರಮುಖ ಸ್ಥಳಗಳಿಗೆ ವಿಸ್ತರಿಸಿತು. ಈ ಬೆಳವಣಿಗೆಯು ಸರಿಯಾದ ಯೋಜನೆ, ಗುಣಮಟ್ಟದ ನಿರ್ವಹಣೆ ಮತ್ತು ಗ್ರಾಹಕರ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯದ ಮಹತ್ವವನ್ನು ಸಾರುತ್ತದೆ. **ಪರಂಪರೆಯ ರುಚಿಗೆ ಆಧುನಿಕ ಸ್ಪರ್ಶ :** ಹಟ್ಟಿ ಕಾಫಿಯ ವಿಶೇಷತೆ ಅದರ ಹೆಸರಿನಲ್ಲಿಯೂ, ಅದರ ಅನುಭವದಲ್ಲಿಯೂ ಅಡಗಿದೆ. 'ಹಟ್ಟಿ' ಎಂಬ ಪದ ಹಳ್ಳಿಯ ಆತ್ಮೀಯತೆಯನ್ನು ನೆನಪಿಸಿದರೆ, ಫಿಲ್ಟರ್ ಕಾಫಿ ದಕ್ಷಿಣ ಭಾರತದ ಆಹಾರ ಸಂಸ್ಕೃತಿಯ ಸೊಗಡನ್ನು ಪರಿಚಯಿಸುತ್ತದೆ.ಆಧುನಿಕ ಕಾಫಿ ಸಂಸ್ಕೃತಿಯ ನಡುವೆಯೂ ಸಾಂಪ್ರದಾಯಿಕ ಫಿಲ್ಟರ್ ಕಾಫಿಯ ರುಚಿಯನ್ನು ಹೊಸ ಪೀಳಿಗೆಗೆ ತಲುಪಿಸುವುದು ಸಂಸ್ಥೆಯ ಪ್ರಮುಖ ವೈಶಿಷ್ಟ್ಯವಾಗಿದೆ. ಸ್ಥಳೀಯ ಪರಂಪರೆಯನ್ನು ಉಳಿಸಿಕೊಂಡೇ ಅದನ್ನು ಆಧುನಿಕ ಉದ್ಯಮವಾಗಿ ಬೆಳೆಸಬಹುದು ಎಂಬುದಕ್ಕೆ ಹಟ್ಟಿ ಕಾಫಿ ಉತ್ತಮ ಉದಾಹರಣೆ.

ಸಾಮಾಜಿಕ ಕಾಳಜಿಯೊಂದಿಗೆ ಉದ್ಯಮ : ಉದ್ಯಮದ ಯಶಸ್ಸು ಕೇವಲ ಲಾಭದಲ್ಲಿ ಅಳೆಯಬಾರದು ಅದು ಸಮಾಜಕ್ಕೆ ನೀಡುವ ಕೊಡುಗೆಯಲ್ಲಿಯೂ ಪ್ರತಿಫಲಿಸಬೇಕು. ಹಟ್ಟಿ ಕಾಫಿಯ ಸಾಮಾಜಿಕ ಉಪಕ್ರಮಗಳಲ್ಲಿ ಹಿರಿಯ ನಾಗರಿಕರು ಹಾಗೂ ವಿಶೇಷ ಸಾಮರ್ಥ್ಯವುಳ್ಳ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಪ್ರಯತ್ನಗಳು ಗಮನಾರ್ಹವಾಗಿವೆ. ಪರಿಸರ ಸ್ನೇಹಿ ಕ್ರಮಗಳಿಗೂ ಸಂಸ್ಥೆ ಆದ್ಯತೆ ನೀಡಿದೆ.ಇಂತಹ ಪ್ರಯತ್ನಗಳು ಉದ್ಯಮವು ಆರ್ಥಿಕ ಬೆಳವಣಿಗೆಯ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನೂ ನಿರ್ವಹಿಸಬಹುದು ಎಂಬ ಸಂದೇಶವನ್ನು ನೀಡುತ್ತವೆ.

ಯುವಕರಿಗೆ ಸ್ಫೂರ್ತಿಯ ಬೆಳಕು : ಹಟ್ಟಿ ಕಾಫಿಯ ಯಶೋಗಾಥೆ ಯುವ ಉದ್ಯಮಿಗಳಿಗೆ ಹಲವು ಪಾಠಗಳನ್ನು ಕಲಿಸುತ್ತದೆ. ದೊಡ್ಡ ಸಾಧನೆಗೆ ಆರಂಭದಲ್ಲೇ ದೊಡ್ಡ ಬಂಡವಾಳ ಇರಬೇಕೆಂದಿಲ್ಲ. ಸ್ಪಷ್ಟ ಗುರಿ, ಹೊಸ ಆಲೋಚನೆ, ಗುಣಮಟ್ಟದ ಮೇಲಿನ ನಿಷ್ಠೆ, ಗ್ರಾಹಕರ ವಿಶ್ವಾಸ ಮತ್ತು ಸತತ ಪರಿಶ್ರಮ ಇದ್ದರೆ ಸಣ್ಣ ಉದ್ಯಮವೂ ದೊಡ್ಡ ಮಟ್ಟಕ್ಕೆ ಬೆಳೆಯಬಲ್ಲದು.ವಿಶೇಷವಾಗಿ, ನಮ್ಮ ನಾಡಿನ ಉತ್ಪನ್ನಗಳು ಮತ್ತು ಪರಂಪರೆಗಳಿಗೆ ಹೊಸ ರೂಪ ನೀಡಿ ಉದ್ಯೋಗ ಸೃಷ್ಟಿಸುವ ಅವಕಾಶಗಳು ಅಪಾರವಾಗಿವೆ ಎಂಬುದನ್ನು ಈ ಸಂಸ್ಥೆಯ ಬೆಳವಣಿಗೆ ನೆನಪಿಸುತ್ತದೆ.

ಸಮಾರೋಪ : ಹಟ್ಟಿ ಕಾಫಿ ಕೇವಲ ಒಂದು ಕಪ್ ಕಾಫಿಯ ಕಥೆಯಲ್ಲ ಅದು ಕನಸು, ಪರಿಶ್ರಮ, ಆತ್ಮವಿಶ್ವಾಸ ಮತ್ತು ಸಾಧನೆಯ ಕಥೆ. ಗಾಂಧಿ ಬಜಾರ್‌ನ ಪುಟ್ಟ ಮಳಿಗೆಯಿಂದ ಆರಂಭವಾದ ಈ ಪಯಣ, ದೃಢಸಂಕಲ್ಪವಿದ್ದರೆ ಸಣ್ಣ ಆರಂಭವೂ ದೊಡ್ಡ ಯಶಸ್ಸಿಗೆ ದಾರಿಯಾಗಬಲ್ಲದು ಎಂಬುದನ್ನು ಸಾಬೀತುಪಡಿಸಿದೆ. ''**ಯಶಸ್ಸು ಎಂದರೆ ಎತ್ತರಕ್ಕೆ ಬೆಳೆಯುವುದಷ್ಟೇ ಅಲ್ಲ :** ನಮ್ಮ ಬೆಳವಣಿಗೆಯ ಮೂಲಕ ಇತರರಿಗೂ ಅವಕಾಶ ಮತ್ತು ಸ್ಫೂರ್ತಿ ನೀಡುವುದಾಗಿದೆ.''ಹಟ್ಟಿ ಕಾಫಿಯ ಯಶೋಗಾಥೆ ಯುವ ಮನಸ್ಸುಗಳಲ್ಲಿ ಉದ್ಯಮಶೀಲತೆಯ ಕಿಡಿ ಹೊತ್ತಿಸಿ, ಕನ್ನಡ ನಾಡಿನ ಉದ್ಯಮ ಕ್ಷೇತ್ರಕ್ಕೆ ಇನ್ನಷ್ಟು ಹೊಸ ಸಾಧಕರನ್ನು ನೀಡಲಿ ಎಂಬುದು ಆಶಯ.

ಪಶು ಇಲಾಖೆಗೆ ಗ್ರಹಣ: 27 ಆಸ್ಪತ್ರೆಗಳು ಅನಾಥ, ಸರ್ಕಾರದ ನಿದ್ರೆ ಎಂದು ಮುಗಿಯುತ್ತೆ..?

- ಉದಯವಾಹಿನಿ ವಿಶೇಷ ತನಿಖಾ ವರದಿ
- ಇಲಿಯಾಸ್ ಪಟೇಲ್. ಬಳಗಾನೂರ ರಾಜ್ಯ ವಿಶೇಷ ವರದಗಾರರು
- ಉದಯವಾಹಿನಿ ಯಾದಗಿರಿ:

ಬರಗಾಲದ ಹೊಡೆತ, ಸರಿಯಾದ ಬೆಲೆಯಿಲ್ಲದ ಕೃಷಿ ಉತ್ಪನ್ನಗಳು, ಸಾಲದ ಶೂಲ ಹೀಗೆ ಪ್ರಕೃತಿ ಮತ್ತು ವ್ಯವಸ್ಥೆ ಎರಡರಿಂದಲೂ ತುಳಿತಕ್ಕೊಳಗಾಗಿರುವ ಯಾದಗಿರಿ ಜಿಲ್ಲೆಯ ರೈತನ ಕೊನೆಯ ಆಸರೆ ಎಂದರೆ ಅದು ಅವರ ಕೊಟ್ಟಿಗೆಯಲ್ಲಿರುವ ನಾಲ್ಕು ಜಾನುವಾರುಗಳು. ಆದರೆ, ಕಲ್ಯಾಣ ಕರ್ನಾಟಕದ ಭಾಗವಾದ ಯಾದಗಿರಿಯಲ್ಲಿ ಪಶುಸಂಗೋಪನೆ ಇಲಾಖೆಯನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಣಿಸಿದ್ದು, ಸಾಕುಪ್ರಾಣಿಗಳ ಜೀವಕ್ಕೆ ಭದ್ರತೆಯೇ ಇಲ್ಲದಂತಾಗಿದೆ.ಜಿಲ್ಲೆಯಾದ್ಯಂತ ಕನಿಷ್ಠ 27 ಪಶು ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ ಕಾಯಂ ವೈದ್ಯರಿಲ್ಲದೆ ಬಾಗಿಲು ಮುಚ್ಚುವ ಹಂತ ತಲುಪಿವೆ. ಜನಪ್ರತಿನಿಧಿಗಳ ನಿರ್ಲಕ್ಷ್ಯ

ಉದಯವಾಹಿನಿ ಹೈಲೆಟ್ಸ್

- ★ 27 ಆಸ್ಪತ್ರೆಗಳಿಗೆ ಕಾಯಂ ವೈದ್ಯರಿಲ್ಲ:
- ★ 'ಸರ್ಕಾರ ಇದ್ದೂ ಸತ್ತಂತೆ': ಕಣ್ಣೀರಿಟ್ಟ ಅನ್ನದಾತರು:
- ★ 371(ಎ) ವಿಶೇಷ ಕಾಯ್ದೆ ಕೇವಲ ಕಾಗದಕ್ಕಷ್ಟೇ ಸೀಮಿತ: ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ವಿಫಲ.
- ★ ಖಾಸಗಿ ಲೂಟಿಕೋರರ ಪಾಲಾಗುತ್ತಿರುವ ರೈತರು:
- ★ ಸರಿಯಾದ ಚಿಕಿತ್ಸೆ ಸಿಗದೆ ಜಾನುವಾರುಗಳ ಸಾವು:
- ★ ಉಗ್ರ ಹೋರಾಟದ ಎಚ್ಚರಿಕೆ: ರೈತರು

ಹಾಗೂ ಆಡಳಿತಶಾಹಿಯ ನಿಷ್ಕ್ರಿಯತೆಯಿಂದಾಗಿ ಸರ್ಕಾರ ಇದ್ದೂ ಸತ್ತಂತಿದೆ ಎಂದು ರೈತರು ಆಕ್ರೋಶದ ಬೆಂಕಿ ಉಗುಳುತ್ತಿದ್ದಾರೆ.

ವಾಸ್ತವಸ್ಥಿತಿ: ಅಂಕಿ-ಅಂಶಗಳಲ್ಲೇ ಅಡಗಿದೆ ಇಲಾಖೆಯ ವಿಫಲತೆ! ಯಾದಗಿರಿ ಜಿಲ್ಲೆಯ ಗ್ರಾಮೀಣ ಭಾಗದ ಆರ್ಥಿಕತೆಯ ಜೀವನಾಡಿಯೇ ಜಾನುವಾರು ಸಾಕಾಣಿಕೆ. ಆದರೆ ಇಲ್ಲಿನ ಪಶು ವೈದ್ಯಕೀಯ ಸೇವೆಗಳ ವಾಸ್ತವ ಸತ್ಯ ಹೀಗಿದೆ ವಿಭಾಗ /

ಉದಯವಾಹಿನಿ ಚಿತ್ರ

ವಿಷಯಪ್ರಸ್ತುತ ಜಿಲ್ಲೆಯ ವಾಸ್ತವ ಸ್ಥಿತಿ ಖಾಲಿ ಇರುವ ಕಾಯಂ ವೈದ್ಯರ ಹುದ್ದೆಗಳು 27 ಪಶು ಆಸ್ಪತ್ರೆಗಳಲ್ಲಿ ಕಾಯಂ ವೈದ್ಯಾಧಿಕಾರಿಗಳೇ ಇಲ್ಲ! ಪರ್ಯಾಯ ವ್ಯವಸ್ಥೆಯ ದುಸ್ಥಿತಿ ಒಬ್ಬನೇ ವೈದ್ಯರಿಗೆ 3-4 ಆಸ್ಪತ್ರೆಗಳ 'ಪ್ರಭಾರ' (Deputation) ಹೊಣೆ.ಆಸ್ಪತ್ರೆ ತೆರೆಯುವ ಅವಧಿವಾರಕ್ಕೆ ಕೇವಲ ಒಂದು ಅಥವಾ ಎರಡು ದಿನ ಬಾಗಿಲು ಓಪನ್.ಸಿಬ್ಬಂದಿ ಅಭಾವಜವಾನರು ಮತ್ತು ಡಿ-ಗ್ರೂಪ್ ಸಿಬ್ಬಂದಿಯೇ ಸಿರಿಂಜ್ ಹಿಡಿಯುವ ದುಸ್ಥಿತಿ. ರೈತರಿಗೆ ತಗಲುವ ದಿನಂಪ್ರತಿ ನಷ್ಟಖಾಸಗಿ ಚಿಕಿತ್ಸೆಗೆ ಪ್ರತಿ ಭೇಟಿಗೆ 1,500 ರಿಂದ 5,000 ವರೆಗೆ ಖರ್ಚು.

371(ಎ) ಕಾಯ್ದೆಯಿದ್ದರೂ ತುಂಬದ ಹುದ್ದೆಗಳು: ಶಾಸಕರು, ಸಚಿವರ ಮೌನ ಏಕೆ? ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂವಿಧಾನದ 371(ಎ) ವಿಧಿ ಪ್ರಕಾರ ಉದ್ಯೋಗ ಶಿಕ್ಷಣದಲ್ಲಿ ವಿಶೇಷ ಆದ್ಯತೆ ಇದೆ. ಆದರೆ, ಈ ಭಾಗದ ಅತ್ಯಂತ ಬಡ ಜಿಲ್ಲೆಯಾದ ಯಾದಗಿರಿಯಲ್ಲಿ 27 ಪಶು ವೈದ್ಯಾಧಿಕಾರಿಗಳ ಹುದ್ದೆಗಳು ವರ್ಷಗಳಿಂದ ಖಾಲಿ ಬಿದ್ದಿದ್ದರೂ ಭರ್ತಿ ಮಾಡಲು ಸರ್ಕಾರ ಮನಸ್ಸು ಮಾಡುತ್ತಿಲ್ಲ.

ಪ್ರಭಾರ ವೈದ್ಯರ ಹೆಸರಿನಲ್ಲಿ ಕಣ್ಣೊರೆಸುವ ತಂತ್ರ: ಪ್ರಭಾರ ಆಧಾರದ ಮೇಲೆ ವೈದ್ಯರನ್ನು ನೇಮಿಸುವ ಸರ್ಕಾರ, ಅವರು ವಾರಕ್ಕೊಮ್ಮೆ ಬಂದು ಹೋಗುವುದರಿಂದ ತುರ್ತು ಸಂದರ್ಭದಲ್ಲಿ ಜಾನುವಾರುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ನಕಲಿ ವೈದ್ಯರ ಹಾವಳಿ: ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದಿರುವುದನ್ನು ಬಂಡವಾಳ ಮಾಡಿಕೊಂಡಿರುವ ಅನುಭವವಿಲ್ಲದ 'ಖಾಸಗಿ ಕಂಪೌಂಡರ್‌ಗಳು' ಮತ್ತು ನಕಲಿ ವೈದ್ಯರು ಗ್ರಾಮೀಣ ಭಾಗದಲ್ಲಿ ದೋಚುತ್ತಿದ್ದಾರೆ. ತಪ್ಪು ಚಿಕಿತ್ಸೆಯಿಂದಾಗಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ತಳಿ ಹಸುಗಳು, ಎಮ್ಮೆಗಳು ಪ್ರಾಣ ಕಳೆದುಕೊಳ್ಳುತ್ತಿವೆ.

ರೈತರ ಸಂಕಷ್ಟ: ನಷ್ಟದ ಮೇಲೆ ನಷ್ಟದ ಸುಳಿ! **ಪರಿಹಾರವೂ ಸಿಗದಂತೆ ವಂಚನೆ:** ಕಾಯಿಲೆಯಿಂದ ಪ್ರಾಣಿ ಸತ್ತರೆ, ವಿಮೆ ಹಣ ಅಥವಾ ಪರಿಹಾರ ಪಡೆಯಲು 'ಪಶು ವೈದ್ಯರ ದೃಢೀಕರಣ ಪತ್ರ' (Post-Mortem / Death Certificate) ಕಡ್ಡಾಯ. ಆದರೆ ಆಸ್ಪತ್ರೆಯಲ್ಲಿ ವೈದ್ಯರೇ ಇಲ್ಲದಿರುವುದರಿಂದ ರೈತರಿಗೆ ವಿಮೆ ಪರಿಹಾರವೂ ಸಿಗುತ್ತಿಲ್ಲ. ಹಾಲಿನ ಉತ್ಪಾದನೆಗೆ ಹೊಡೆತ: ಸರಿಯಾದ ಸಮಯಕ್ಕೆ ಲಸಿಕೆ, ಚಿಕಿತ್ಸೆ ಮತ್ತು ಹಾರ್ಮೋನ್ ಇಂಜೆಕ್ಷನ್‌ಗಳು ಸಿಗದೆ ಕ್ಷೀರ ಕ್ರಾಂತಿಗೆ ದೊಡ್ಡ ತಡೆ ಉಂಟಾಗಿದೆ.

ಸಾಲ ಮಾಡಿ ಚಿಕಿತ್ಸೆ: ಬೆಳೆ ನಷ್ಟದಿಂದ ತತ್ತರಿಸಿದ ರೈತ, ತನ್ನ ಜಾನುವಾರು ಉಳಿಸಿಕೊಳ್ಳಲು ಖಾಸಗಿ ವೈದ್ಯರಿಗೆ ನೀಡಲು ಮತ್ತೆ ಲೇವಾದೇವಿಗಾರರ ಬಳಿ ಸಾಲ ಮಾಡುವಂತಾಗಿದೆ.

ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ 'ಉದಯ ವಾಹಿನಿ'ಯ ನೇರ ಪ್ರಶ್ನೆಗಳು

- ಪ್ರಶ್ನೆ 1: 27 ಆಸ್ಪತ್ರೆಗಳಿಗೆ ಕಾಯಂ ವೈದ್ಯರಿಲ್ಲದಿರುವುದು ಜಿಲ್ಲಾಡಳಿತ ಹಾಗೂ ಪಶುಸಂಗೋಪನೆ ಸಚಿವರ ಗಮನಕ್ಕೆ ಬಂದಿಲ್ಲವೇ?
- ಪ್ರಶ್ನೆ 2: ಹಿಂದುಳಿದ ಜಿಲ್ಲೆಯ ರೈತರ ಹಿತರಕ್ಷಣೆ ಎಂದರೆ ಬರಿ ಬೊಬ್ಬೆ ಹೊಡೆಯುವುದಷ್ಟೇನಾ? ಪ್ರತ್ಯಕ್ಷವಾಗಿ ವೈದ್ಯರನ್ನು ನೇಮಿಸಲು ಆಡಳಿತಾತ್ಮಕ ತೊಡಕೇನು?
- ಪ್ರಶ್ನೆ 3: ಸೂಕ್ತ ಚಿಕಿತ್ಸೆ ಸಿಗದೆ ಸಾಯುತ್ತಿರುವ ಜಾನುವಾರುಗಳ ನಷ್ಟವನ್ನು ಸರ್ಕಾರವೇ ಭರಿಸುತ್ತದೆಯೇ?

ಉದಯವಾಹಿನಿ ಚಿತ್ರ

> ಕೂಡಲೇ ರಾಜ್ಯ ಸರ್ಕಾರ, ಪಶುಸಂಗೋಪನೆ ಸಚಿವರು ಹಾಗೂ ಯಾದಗಿರಿ ಜಿಲ್ಲಾಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಖಾಲಿ ಇರುವ 27 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಅಥವಾ ಶೀಘ್ರ ನಿಯೋಜನೆ ಮೂಲಕ ಭರ್ತಿ ಮಾಡಬೇಕು. ಇಲ್ಲವಾದಲ್ಲಿ, ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಿಂದ ಸಾವಿರಾರು ಜಾನುವಾರುಗಳನ್ನು ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ತಂದು ಕಟ್ಟಿಹಾಕಿ ಬೃಹತ್ ಜಾನುವಾರು ಚಳವಳಿ ಹಾಗೂ ರಾಜ್ಯ ಹೆದ್ದಾರಿ ಬಂದ್ ನಡೆಸಲಾಗುವುದು
>
> ಮಲ್ಲನಗೌಡ ಹಗರಟಗಿ (ರಾಜ್ಯ ಕಾರ್ಯಾಧ್ಯಕ್ಷ, ಭಾರತೀಯ ಕೃಷಿಕ ಸಮಾಜ)

ಏರ್ ಇಂಡಿಯಾ ಎಕ್ಸ್‌ಪ್ರೆಸ್ ನೇರ ವಿಮಾನ ಸೇವೆ ಆರಂಭ

ಉದಯವಾಹಿನಿ ಚಿತ್ರ

- ಉದಯವಾಹಿನಿ, ಮಂಗಳೂರು-

ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣವು ತನ್ನ ಅಂತರ್‌ರಾಷ್ಟ್ರೀಯ ವಿಮಾನ ಸಂಪರ್ಕ ಜಾಲದಲ್ಲಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದು, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಂಸ್ಥೆಯು ಯುಎಇಯ ಪ್ರಮುಖ ನಗರವಾದ ರಾಸ್ ಅಲ್ ಖೈಮಾಗೆ ಮಂಗಳೂರಿನಿಂದ ನೇರ ವಿಮಾನ ಸಂಪರ್ಕ ಸೇವೆಯನ್ನು ಅಧಿಕೃತವಾಗಿ ಆರಂಭಿಸಿದೆ.ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನಿಂದ ವಾರದಲ್ಲಿ ಎರಡು ದಿನ (ಸೋಮವಾರ ಮತ್ತು ಶನಿವಾರ) ವಿಮಾನ ಹಾರಾಟ ಸೌಲಭ್ಯ ಇರುತ್ತದೆ. ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ 2026ರ ಚಳಿಗಾಲದ ವೇಳಾಪಟ್ಟಿಯ ಎರಡನೇ ದಿನದಂದು ಈ ಸೇವೆಗೆ ಚಾಲನೆ ನೀಡಲಾಗಿದೆ. ಮಂಗಳೂರಿನಿಂದ ಸಂಪರ್ಕ ಹೊಂದುವ ಅಂತರ್‌ರಾಷ್ಟ್ರೀಯ ನಗರಗಳ ಪಟ್ಟಿಗೆ ರಾಸ್ ಅಲ್ ಖೈಮಾ ಹೊಸದಾಗಿ ಸೇರ್ಪಡೆಗೊಂಡಿದೆ.

ಮೊದಲ ವಿಮಾನಕ್ಕೆ ಉತ್ತಮ ಸ್ಪಂದನೆ: ಸೋಮವಾರ ಮಂಗಳೂರಿನಿಂದ ಹೊರಟ ಚಾಲನಾ ವಿಮಾನ ಐಎಕ್ 871 ರಲ್ಲಿ ಒಟ್ಟು 146 ಪ್ರಯಾಣಿಕರು ರಾಸ್ ಅಲ್ ಖೈಮಾಗೆ ಪ್ರಯಾಣ ಬೆಳೆಸಿದರು. ಇನ್ನು ರಾಸ್ ಅಲ್ ಖೈಮಾದಿಂದ ಮಂಗಳೂರಿಗೆ ಐಎಕ್ಸ್ 872 ವಿಮಾನದಲ್ಲಿ 36 ಮಂದಿ ಪ್ರಯಾಣಿಕರು ಆಗಮಿಸಿದರು. ಹೊಸ ಮಾರ್ಗಕ್ಕೆ ಆರಂಭದಲ್ಲೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ವಿಮಾನ ಸಂಚಾರದ ವೇಳಾಪಟ್ಟಿ: ಪ್ರತಿ ಸೋಮವಾರ ಮತ್ತು ಶನಿವಾರ ಮಂಗಳೂರಿನಿಂದ ಐಎಕ್ಸ್ 871 ವಿಮಾನವು ಬೆಳಗ್ಗೆ 9:30ಕ್ಕೆ ರಾಸ್ ಅಲ್ ಖೈಮಾಗೆ ತೆರಳಲಿದೆ. ಐಎಕ್ಸ್ 872 ಸಂಜೆ 6:25ಕ್ಕೆ ರಾಸ್ ಅಲ್ ಖೈಮಾದಿಂದ ಮಂಗಳೂರಿಗೆ ಆಗಮಿಸಲಿದೆ.

> ರಾಸ್ ಅಲ್ ಖೈಮಾ ನಗರವು ದುಬೈ ಮತ್ತು ಶಾರ್ಜಾಗೆ ಕೇವಲ ಒಂದು ಗಂಟೆಯ ರಸ್ತೆ ಪ್ರಯಾಣದ ಅಂತರ ದಲ್ಲಿದ್ದು, ಯುಎಇಯಲ್ಲಿರುವ ಕರಾವಳಿ ಭಾಗದ ಅನಿವಾಸಿ ಭಾರತೀಯರಿಗೆ ಈ ನೂತನ ಸೇವೆ ಅತ್ಯಂತ ಅನುಕೂಲಕರವಾಗಲಿದೆ.

ಯುವಜನರು ಸನ್ಮಾರ್ಗದಲ್ಲಿ ನಡೆದು ಉತ್ತಮ ಸಮಾಜ ನಿರ್ಮಿಸಲಿ

- ಉದಯವಾಹಿನಿ, ವಿಜಯಪುರ, :

ಮಹರ್ಷಿ ವಾಲ್ಮೀಕಿ ಅವರು ಆದಿಕವಿಯಾಗಿ 'ರಾಮಾಯಣ'ದಂತಹ ಮಹಾನ್ ಕಾವ್ಯವನ್ನು ರಚಿಸುವ ಮೂಲಕ ಭಾರತೀಯ ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಗೆ ಅಪಾರ ಕೊಡುಗೆ ನೀಡಿದ್ದಾರೆ. ರಾಮಾಯಣದಲ್ಲಿನ ಆದರ್ಶಗಳು, ಜೀವನ ಮೌಲ್ಯಗಳು ಹಾಗೂ ಮಾನವೀಯ ಸಂದೇಶಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿವೆ ಎಂದು ನಾಗಠಾಣ ಕ್ಷೇತ್ರದ ಶಾಸಕ ವಿಠ್ಠಲ ಕಟಕಧೊಂಡ ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಹಾಗೂ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ

ಉದಯವಾಹಿನಿ ಚಿತ್ರ

ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ವಿರಚಿತ ರಾಮಾಯಣವು ಭಾರತೀಯ ಸಾಹಿತ್ಯ ಲೋಕದ ಅಮೂಲ್ಯ ಕೃತಿಯಾಗಿದೆ. **ಇದು ಕೇವಲ ಮಹಾಕಾವ್ಯವಲ್ಲ;** ಮಾನವೀಯ ಸಂಬಂಧಗಳು, ಕರ್ತವ್ಯನಿಷ್ಠೆ, ತ್ಯಾಗ, ಸತ್ಯ, ಧರ್ಮ, ಸಹೋದರತ್ವ ಹಾಗೂ ಆದರ್ಶ ಜೀವನದ ಮೌಲ್ಯಗಳನ್ನು ಪರಿಚಯಿಸುವ ಮಹಾನ್ ಗ್ರಂಥವಾಗಿದೆ. ಹೀಗಾಗಿ ರಾಮಾಯಣದ ಸಂದೇಶಗಳು

> ಮಹನೀಯರ ಚಿಂತನೆ ಮತ್ತು ಸಂದೇಶಗಳನ್ನು ಯುವಜನತೆಗೆ ಪರಿಚಯಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರೇರಣೆ ನೀಡಬೇಕು ಎಂದರು.
>
> -ಶಾಸಕ ವಿಠ್ಠಲ ಕಟಕಧೊಂಡ

ಹಲವು ತಲೆಮಾರುಗಳಿಂದ ಜನರನ್ನು ಪ್ರೇರೇಪಿಸುತ್ತಿವೆ ಎಂದು ಹೇಳಿದರು.

ಮಹನೀಯರ ಜಯಂತಿಗಳನ್ನು ಆಚರಿಸುವ ಉದ್ದೇಶ ಅವರ ಸಾಧನೆಗಳನ್ನು ಸ್ಮರಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿ ಅನುಷ್ಠಾನಗೊಳಿಸಬೇಕು. ಇಂತಹ ಆಚರಣೆಗಳು ವಿವಿಧ ಸಮುದಾಯಗಳ ಜನರನ್ನು ಒಗ್ಗೂಡಿಸುವುದರೊಂದಿಗೆ ಸಾಮಾಜಿಕ ಸಾಮರಸ್ಯ, ಸಮಾನತೆ ಹಾಗೂ ಪರಸ್ಪರ ಗೌರವದ ಮನೋಭಾವ ಬೆಳೆಸಲು ಪೂರಕವಾಗಿವೆ.

ಎಸ್‌ಐಆರ್ ವಿರುದ್ಧ ಬ್ರಹ್ಮಾವರದಲ್ಲಿ ಕಾಂಗ್ರೆಸ್ ಪ್ರತಿಭಟನೆ

- ಉದಯವಾಹಿನಿ, ಉಡುಪಿ:

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನೆ ಮತ್ತು ಪಾದಯಾತ್ರೆ ನಡೆಯಿತು. ಬ್ರಹ್ಮಾವರದ ಬಂಟರ ಭವನದಿಂದ ಆರಂಭವಾದ ಪಾದಯಾತ್ರೆ ಆಕಾಶವಾಣಿ ವೃತ್ತ, ಗಾಂಧಿ ಮೈದಾನ, ಮಾರ್ಕೆಟ್ ರಸ್ತೆ ಮೂಲಕ ಬಸ್ ನಿಲ್ದಾಣದವರೆಗೆ ಸಾಗಿತು. ಈ ಸಂದರ್ಭದಲ್ಲಿ ಜ್ಞಾನೇಶ್ ಕುಮಾರ್ ಅವರ ಅಣಕು ಶವಯಾತ್ರೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಬಳಿಕ ಪ್ರತಿಕೃತಿ ದಹಿಸಿ ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗದ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಮುಖಂಡ ಪ್ರಸಾದ್ ರಾಜ್ ಕಾಂಚನ್, ಎಸ್‌ಐಆರ್ ಅಸ್ತ್ರದ ಮೂಲಕ ಮಧ್ಯಮ ವರ್ಗದವರು, ಬಡವರು ಹಾಗೂ ಕಾರ್ಮಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿಯೂ ಸುಮಾರು 15 ಸಾವಿರ ಮಂದಿಯನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿದ ಅವರು, ಗ್ರಾಮೀಣ ಭಾಗದ ಅನಕ್ಷರಸ್ಥರು ಹಾಗೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನರ

ಉದಯವಾಹಿನಿ ಚಿತ್ರ

ಮತದಾನದ ಹಕ್ಕಿಗೆ ಧಕ್ಕೆಯಾಗಿದೆ ಎಂದು ದೂರಿದರು. ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ದೇಶದ ಪ್ರಜ್ಞಾವಂತ ಮತದಾರರ ಮುಂದೆ ಇಂತಹ ತಂತ್ರಗಳು ನಡೆಯುವುದಿಲ್ಲ. ಮುಂದಿನ ಚುನಾವಣೆಯಲ್ಲಿ ಜನರು ಬಿಜೆಪಿಯನ್ನು ಸೋಲಿಸಿ ಮನೆಗೆ ಕಳುಹಿಸಲಿದ್ದಾರೆ ಎಂದರು. ಬಡವರು ಹಾಗೂ ಹಿಂದುಳಿದ ವರ್ಗಗಳ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಮಗಾರಿ ಪೂರ್ಣಗೊಂಡರೂ ಬಳಕೆಗೆ ಬಾರದ ಸಾರ್ವಜನಿಕ ಶೌಚಾಲಯ.!

- ಉದಯವಾಹಿನಿ, ಕೊಲ್ಹಾರ:

ಉದಯವಾಹಿನಿ ಚಿತ್ರ

ಪಟ್ಟಣದ ನಂಬರ್ 1ರ ಬಸ್ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಲಾಗಿರುವ ಶೌಚಾಲಯದ ಕಾಮಗಾರಿ ಪೂರ್ಣಗೊಂಡಿದ್ದರೂ, ಇದುವರೆಗೆ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸದಿರುವುದು ಪ್ರಯಾಣಿಕರ ಆಕ್ರೋಶಕ್ಕೆ ಕಾರಣವಾಗಿದೆ.ಪಟ್ಟಣದ ಬಸ್ ನಿಲ್ದಾಣಕ್ಕೆ ಪ್ರತಿದಿನ ನೂರಾರು ಮಹಿಳಾ ಪ್ರಯಾಣಿಕರು ಆಗಮಿಸುತ್ತಿದ್ದು, ಶೌಚಾಲಯದ ಅಗತ್ಯತೆ ಹೆಚ್ಚಾಗಿದೆ. ಆದರೆ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಶೌಚಾಲಯದ ಕಟ್ಟಡ ಸಿದ್ಧಗೊಂಡು ಹಲವು ದಿನಗಳು ಕಳೆದರೂ ಬಾಗಿಲು ತೆರೆಯದಿರುವುದರಿಂದ ಮಹಿಳೆಯರು ತೀವ್ರ ತೊಂದರೆ ಅನುಭವಿಸುವಂತಾಗಿದೆ.ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಂಡ ಬಳಿಕವೂ ಬಳಕೆಗೆ ಬಾರದಿರುವುದು ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಪ್ರಶ್ನೆ ಮೂಡಿಸಿದೆ. ಶೌಚಾಲಯದ ಕಾಮಗಾರಿ ಪೂರ್ಣಗೊಂಡಿದ್ದರೂ ಅದನ್ನು ಸಾರ್ವಜನಿಕರ ಸೇವೆಗೆ ಸಮರ್ಪಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ಸ್ಥಳೀಯರು ಹಾಗೂ ಪ್ರಯಾಣಿಕರಿಂದ ಕೇಳಿಬರುತ್ತಿದೆ.

ಈ ಕುರಿತು ಸಂಬಂಧಿಸಿದ ಕೆಎಸ್‌ಆರ್‌ಟಿಸಿ ಮೇಲಧಿಕಾರಿಗಳು ಹಾಗೂ ಸ್ಥಳೀಯ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಶೌಚಾಲಯ ಬಳಕೆಗೆ ಅಗತ್ಯವಿರುವ ವ್ಯವಸ್ಥೆಗಳನ್ನು ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಬೇಕು. ಅಲ್ಲದೆ, ಶೌಚಾಲಯದ ನಿರ್ವಹಣೆ ಮತ್ತು ಸ್ವಚ್ಛತೆಗಾಗಿ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿ, ನಿರಂತರ ಸ್ವಚ್ಛತೆ ಕಾಪಾಡಲು ಕ್ರಮ ಕೈಗೊಳ್ಳಬೇಕು ಎಂದು ಪ್ರಯಾಣಿಕರು ಆಗ್ರಹಿಸಿದ್ದಾರೆ. ಶೌಚಾಲಯ ಬಳಕೆಗೆ ಮುಕ್ತಗೊಳಿಸಲು ಆಗ್ರಹ.ಈ ಕುರಿತು ಪ್ರತಿಕ್ರಿಯಿಸಿರುವ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ಪರಶುರಾಮ ಚಿಮ್ಮಲಗಿ, ರೇವಣಸಿದ್ಧ ಗಡ್ಡಿ ಅವರು, ಕಾಮಗಾರಿ ಪೂರ್ಣಗೊಂಡಿದ್ದರೂ ಬಳಕೆಗೆ ಬಾರದೆ ತಟಸ್ಥವಾಗಿರುವ ಸಾರ್ವಜನಿಕ ಮಹಿಳಾ ಶೌಚಾಲಯವನ್ನು ಶೀಘ್ರದಲ್ಲೇ ಸಾರ್ವಜನಿಕರ ಸೇವೆಗೆ ಮುಕ್ತಗೊಳಿಸಬೇಕು. ಮಹಿಳಾ ಪ್ರಯಾಣಿಕರ ಅನುಕೂಲಕ್ಕಾಗಿ ಶೌಚಾಲಯದ ಸ್ವಚ್ಛತೆ ಹಾಗೂ ನಿರ್ವಹಣೆಗೆ ಅಗತ್ಯ ಸಿಬ್ಬಂದಿಯನ್ನು ನೇಮಿಸಿ, ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಖರ್ಗೆ ಆದೇಶದಂತೆ ದೇಶದಾದ್ಯಂತ ಜಿಲ್ಲಾ, ತಾಲ್ಲೂಕಾ ಅಧ್ಯಕ್ಷರ ನೇಮಕ

- ಉದಯವಾಹಿನಿ,ಚಿಂಚೋಳಿ:

ಇಡಿ ಭಾರತ ದೇಶದ್ಯಾಂತ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಆದೇಶದಂತೆ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರಿಂದಲ್ಲೇ ಕಾಂಗ್ರೆಸ್ ಜಿಲ್ಲಾ ಮತ್ತು ತಾಲ್ಲೂಕು ಅಧ್ಯಕ್ಷರ ನೇಮಕ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಕಿರಣ ದೇಶಮುಖ ಹೇಳಿದರು.ಪಟ್ಟಣದ ಚನ್ನ ಕಲ್ಯಾಣ ಮಂಟಪದಲ್ಲಿ ತಾಲ್ಲೂಕಾ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಕಾಳಗಿ ಚಿಂಚೋಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆ ಪ್ರಕ್ರಿಯೆ ಅಂಗವಾಗಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಂಘಟನ ಸೃಜನ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,2028ಮತ್ತು 2029ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಮುಂದಿಟ್ಟುಕೊಂಡು ದೇಶದ ಎಲ್ಲಾ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕಗಳ ನೂತನ ಅಧ್ಯಕ್ಷರ ಬದಲಾವಣೆ ಮಾಡುಲಾಗುತ್ತಿದೆ 24/7ಪಕ್ಷದ ಸಲುವಾಗಿ ಹಗಲಿರುಳು ಶ್ರಮಿಸುವವರನ್ನು ಗುರುತಿಸುವ ಕೆಲಸ ಪಕ್ಷ ಮಾಡುತ್ತಿದೆ ಎಂದರು.

ಮುಂಬರುವ ತಾಪಂ.ಜಿಪಂ.ಗ್ರಾ.ಪಂ.ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಶ್ರಮಿಸಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ,ಎಸ್‌ಐಆರ್ ಕುರಿತು ಜನರಿಗೆ ಆಗುವ ಅನ್ಯಾಯವನ್ನು ದೇಶದಾದ್ಯಂತ ಪಕ್ಷ ಹೋರಾಟ ಹಮ್ಮಿಕೊಂಡಿದ್ದು ಮುಂಚೂಣಿ ನಾಯಕರು ಸಂಪೂರ್ಣ ಬೆಂಬಲ ನೀಡಬೇಕು ಈಗಾಗಲೇ ನ.1ಕ್ಕೆ ಕಲಬುರ್ಗಿಯಿಂದ 100ಜನ ಪ್ರಮುಖ ನಾಯಕರು ದಿಲ್ಲಿ ಪ್ರತಿಭಟನೆಗೆ ಹೋಗುತ್ತಿದ್ದೇವೆ ಮತ್ತು ನ.05ಕ್ಕೆ ಕಲಬುರ್ಗಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ ಭಾರತ ದೇಶದ ಸಂವಿಧಾನ ಉಳಿವಿಗಾಗಿ ಮತ್ತು ಸಾರ್ವಜನಿಕರಿಗೆ ನ್ಯಾಯ ದೊರಕಿಸಿಕೊಡಲು ನ್ಯಾಯಯುತವಾಗಿ ಹೋರಾಟ ಮಾಡಲಾಗುತ್ತಿದೆ ಎಂದರು. ಮಾಜಿ ಎಂಎಲ್ಸಿ ಅರವಿಂದ ಅರಳಿ ಮಾತನಾಡಿ ಇದಕ್ಕೂ ಮೊದಲು ಕ್ಷೇತ್ರದ ಶಾಸಕರು ಹಿರಿಯ ಮುಖಂಡರು ನೇತೃತ್ವದಲ್ಲಿ ಅಧ್ಯಕ್ಷರ ನೇಮಕ ಪ್ರಕ್ರಿಯೆ ಮಾಡಲಾಗುತ್ತಿತ್ತು ಈಗ

ಉದಯವಾಹಿನಿ ಚಿತ್ರ

ಎಐಸಿಸಿ ಅಧ್ಯಕ್ಷರ ಆದೇಶದಂತೆ ಕಾರ್ಯಕರ್ತರ ಅಭಿಪ್ರಾಯ ಮೇರೆಗೆ ದೇಶದಾದ್ಯಂತ ಜಿಲ್ಲಾ ತಾಲ್ಲೂಕಾ ಅಧ್ಯಕ್ಷರ ನೇಮಕ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ,23ರಿಂದ 25ರ ಪದಾಧಿಕಾರಿಗಳು ನೇಮಕ ಮಾಡುತ್ತೇವೆ ಅದರಲ್ಲಿ ಒಟ್ಟಾರೆ 31ಘಟಕಗಳ ಮುಂಚೂಣಿ ನಾಯಕರಿಗೆ ನೇಮಕ ಮಾಡುತ್ತೇವೆ ಪದಾಧಿಕಾರಿಗಳ ನೇಮಕ ತಾಲ್ಲೂಕಾ ಅಧ್ಯಕ್ಷರಿಗೆ ಅಧಿಕಾರವಿರುತ್ತೆ ಪದಾಧಿಕಾರಿಗಳು ಆಗುವವರು ಅಧ್ಯಕ್ಷರಿಗೆ ಮನವಿ ಸಲ್ಲಿಸಬೇಕು ಎಂದರು.ಕಾಂಗ್ರೆಸ್ ಪಕ್ಷದ ವಿಕ್ಷಕರಾದ ಲಕ್ಷ್ಮಿಪತಿ ಮತ್ತು ಅಕ್ಕಮಹಾದೇವಿ ಪಾಟೀಲ ಮಾತನಾಡಿದರು.ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಾಲಿ ಸ್ವಾಗತಿಸಿದರು, ಮಲ್ಲಿಕಾರ್ಜುನ ಬುಶೆಟ್ಟಿ ನಿರೂಪಿಸಿದರು,ಶರಣುಪಾಟೀಲ್ ವಂದಿಸಿದರು.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾರ್ಯಕರ್ತರಲ್ಲಿ ಇದೆತರಹ ಹುರುಪುವಿದ್ದರೆ ಸುಭಾಷ್ ರಾಠೋಡ್ ಚಿಂಚೋಳಿ ಶಾಸಕರಾಗುವುದು ಖಚಿತ ಎಂದು ಮಾಜಿ ಎಂಎಲ್ಸಿ ಅರವಿಂದ ಅರಳಿ ಭವಿಷ್ಯ ನುಡಿದರು.ವೇದಿಕೆ ಕಾರ್ಯಕ್ರಮ ನಂತರ ಪ್ರತಿಯೊಂದು ಕಾರ್ಯಕರ್ತರಿಂದ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ದಿಂದ ಬಂದಿರುವ ಉಸ್ತುವಾರಿಗಳು ವಿಕ್ಷಕರು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಂದ ಲಿಖಿತ ಮತ್ತು ಮೌಖಿಕವಾಗಿ ಬಂದಿರುವ ಅರ್ಜಿಗಳು ಮತ್ತು ಸಲಹೆ ಪಡೆದುಕೊಂಡರು.

ಕೆ.ಎಸ್. ಈಶ್ವರಪ್ಪ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಮುತ್ತಿಗೆ ಯತ್ನ

ಹೊರ ವಲಯ ಗೋವಿಂದಪುರ ಹಾಗೂ ಗೋಪಿಶೆಟ್ಟಿಕೊಪ್ಪದಲ್ಲಿ ಬಡವರಿಗಾಗಿ ನೀಡಬೇಕಾದ ಆಶ್ರಯ ಮನೆಗಳನ್ನು ಪೂರ್ಣವಾಗಿ ಹಂಚಿಕೆ ಮಾಡದೇ ಇರುವುದನ್ನು ಖಂಡಿಸಿ ಮುತ್ತಿಗೆ

- ಉದಯವಾಹಿನಿ, ಶಿವಮೊಗ್ಗ:

ಹೊರ ವಲಯ ಗೋವಿಂದಪುರ ಹಾಗೂ ಗೋಪಿಶೆಟ್ಟಿಕೊಪ್ಪದಲ್ಲಿ ಬಡವರಿಗಾಗಿ ನೀಡಬೇಕಾದ ಆಶ್ರಯ ಮನೆಗಳನ್ನು ಪೂರ್ಣವಾಗಿ ಹಂಚಿಕೆ ಮಾಡದೇ ಇರುವುದನ್ನು ಖಂಡಿಸಿ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪನವರ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಮುತ್ತಿಗೆ ಹಾಕಲಾಯಿತು. ಈ ವೇಳೆ ಕೆ.ಎಸ್.ಈಶ್ವರಪ್ಪ ಸೇರಿದಂತೆ ರಾಷ್ಟ್ರ ಭಕ್ತ

> 1 : ಸುಮಾರು 3 ಸಾವಿರ ಮನೆ ನಿರ್ಮಾಣ
> 2 : 1,500ಕ್ಕೂ ಅಧಿಕ ಮನೆ ನಿರ್ಮಾಣ
> 3 : ಹಣ ಬಿಡುಗಡೆ ಮಾಡದ ಕಾರಣಕ್ಕೆ

ಬಳಗದ ಅನೇಕ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಕರೆದೊಯ್ದರು. ಶಿವಮೊಗ್ಗ ನಗರದ ಹೊರ ವಲಯದ ಗೋಪಿಶೆಟ್ಟಿಕೊಪ್ಪ ಹಾಗೂ ಗೋವಿಂದಪುರ ಗ್ರಾಮದಲ್ಲಿ ನಗರದ ಬಡ ಜನತೆಗಾಗಿ ಸುಮಾರು 3 ಸಾವಿರ ಮನೆ ನಿರ್ಮಾಣ ಮಾಡಲಾಗುತ್ತಿದೆ. ಇದರಲ್ಲಿ 1,500ಕ್ಕೂ ಅಧಿಕ ಮನೆ ನಿರ್ಮಾಣ ಮಾಡಲಾಗಿದ್ದು, ಇನ್ನುಳಿದ ಮನೆಗಳ ನಿರ್ಮಾಣ ಮಾಡಬೇಕಿದೆ. ಆದರೆ, ರಾಜ್ಯ ಸರ್ಕಾರ ಗುತ್ತಿಗೆದಾರನಿಗೆ 12 ಕೋಟಿ ರೂ ಹಣ ಬಿಡುಗಡೆ ಮಾಡದ ಕಾರಣಕ್ಕೆ ಆಂಧ್ರ ಮೂಲಕ

ಉದಯವಾಹಿನಿ ಚಿತ್ರ

ಗುತ್ತಿಗೆದಾರ ಕಾಮಗಾರಿ ನಡೆಸದೇ ಹಾಗೆ ಹೋಗಿದ್ದಾರೆ.

ಇದರಿಂದ ಬಡವರು ತಮ್ಮ ಬಳಿಯಿದ್ದ ಬಂಗಾರ ಮಾರಿ, ಸಾಲ ಮಾಡಿ ಪಾಲಿಕೆಗೆಗೆ 80 ಸಾವಿರ ರೂ ಕಟ್ಟಿದ್ದರು. ಹಣ ಕಟ್ಟಿ 9 ವರ್ಷ ಕಳೆದರೂ ಸಹ ಮನೆ ನಿರ್ಮಾಣ ಮಾಡಿಲ್ಲ, ಬಡವರಿಗೆ ಮನೆ ನೀಡದೇ ಸತಾಯಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಆಶ್ರಯ ಮನೆ ಫಲಾನುಭವಿಗಳು ರಾಷ್ಟ್ರಭಕ್ತರ ಬಳಗ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಮುತ್ತಿಗೆ ಹಾಕುವ ಹೋರಾಟ ಹಮ್ಮಿಕೊಂಡಿದ್ದರು. ಇದರಿಂದ ಪೊಲೀಸರು ಮಹಾನಗರ ಪಾಲಿಕೆಯ ಮುಂಭಾಗದ ಗೇಟ್ ಬಂದ್ ಮಾಡಿ, ಬ್ಯಾರಿಕೇಡ್ ಅಳವಡಿಸಿದ್ದರು.

ನಂತರ ಪಾಲಿಕೆ ಆಯುಕ್ತರು ಹೋರಾಟಗಾರರಿಗೆ ಸಮಜಾಯಿಸಿ ನೀಡಿದರೂ ಒಪ್ಪದೇ ಪಾಲಿಗೆಗೆ ಮುತ್ತಿಗೆ ಹಾಕುವ ಯತ್ನ ಮಾಡಿದಾಗ

> ಪಾಲಿಕೆ ಆಯುಕ್ತರು ಮನೆ ನೀಡುವ ಕುರಿತು ಬರೆದುಕೊಡಿ, ನಾವು ಕೋರ್ಟ್‌ಗೆ ಹೋಗುತ್ತೇವೆ. ಸರ್ಕಾರ ಪಾಪರ್ ಆಗಿದೆ. ಗುತ್ತಿಗೆದಾರನಿಗೆ ಹಣ ನೀಡಲು ಸರ್ಕಾರದ ಬಳಿ ಹಣ ಇಲ್ಲ. ನಮ್ಮ ಹೋರಾಟಕ್ಕೆ ಪ್ರಿಯಾಂಕ್ ಖರ್ಗೆ ಅವರು ಜೀಪ್ ತಂದು ನಿಲ್ಲಿಸಿದ್ದಾರೆ. ನಿಮ್ಮ ಜೊತೆ ನಾನು ಜೈಲಿಗೆ ಬರ್ತನೆ ಎಂದರು. - ಕೆ.ಎಸ್. ಈಶ್ವರಪ್ಪ

ಪೊಲೀಸರು ಕೆ.ಎಸ್. ಈಶ್ವರಪ್ಪ, ಇವರ ಪುತ್ರ ಕೆ.ಈ.ಕಾಂತೇಶ್, ಮುಖಂಡರಾದ ವಿಶ್ವಾಸ್ ಸೇರಿದಂತೆ ಇತರೆ ಕಾರ್ಯಕರ್ತರನ್ನು ಬಂಧಿಸಿ ಕರೆದೊಯ್ದರು. ಈ ವೇಳೆ, ಕೆಲಕಾಲ ಗೊಂದಲ ಉಂಟಾಗಿತ್ತು. ನಂತರ ಪೊಲೀಸರು ತಮ್ಮ ಬಸ್‌ಗಳಲ್ಲಿ ಹೋರಾಟಗಾರರನ್ನು ಡಿಎಆರ್ ಮೈದಾನಕ್ಕೆ ಕರೆದುಕೊಂಡು ಹೋದರು.

> ಜಮೀರ್ ಅಹ್ಮದ್ ಬಂದಾಗ 12 ಕೋಟಿ ರೂ ಕೊಡುವುದಾಗಿ ಹೇಳಿದ್ರು, ಆದರೆ ಇದುವರೆಗೂ ಹಣ ಬರಲಿಲ್ಲ. ಬಡವರ ಪರವಾಗಿ ರಾಷ್ಟ್ರ ಭಕ್ತರ ಬಳಗ ನಿಂತಿದೆ. ನನಗೂ ನಾಲ್ಕು ಹೆಣ್ಣು ಮಕ್ಕಳಿದ್ದಾರೆ. ನಮ್ಮ ಮನೆ ದೇವರ ಮೇಲಾಣೆ ನಿಮಗೆ ಮನೆ ಸಿಗುವ ವರೆಗೂ ನಾನು ಹೋರಾಟ ಬಿಡೋದಿಲ್ಲ ಎಂದು ಎಚ್ಚರಿಕೆ ನೀಡಿದರು.
>
> -ಕೆ.ಎಸ್. ಈಶ್ವರಪ್ಪ

ಪ್ರತಿಭಟನೆ ಸಭೆಯಲ್ಲಿ ಮಾತನಾಡಿದ ಕೆ.ಎಸ್.ಈಶ್ವರಪ್ಪ, ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. 1,200 ಅಲಾಟ್ಮೆಂಟ್ ಆಗಿದೆ ಅಂತಾರೆ ಹಾಗಾದರೆ, ಏಕೆ ಫಲಾನುಭವಿಗಳಿಗೆ ಬ್ಯಾಂಕ್ ಲೋನ್ ಕೊಡುತ್ತಿಲ್ಲ. 80 ಸಾವಿರ ರೂ. ಇಲ್ಲಿನ ಜನರಿಗೆ ದೊಡ್ಡ ಹಣವಾಗಿದೆ. ಆದರೆ, ಜಮೀರ್ ಹಾಗೂ ಮಧು ಬಂಗಾರಪ್ಪನವರಿಗೆ ಇದು ದೊಡ್ಡ ಹಣ ಅಲ್ಲ ಎಂದರು.

ನೀವು ನನಗೆ ಐದು ಸಲ ಶಾಸಕ, ಮಂತ್ರಿ, ಉಪ ಮುಖ್ಯಮಂತ್ರಿ ಮಾಡಿದ್ರಿ, ನಿಮ್ಮ ಋಣ ನನ್ನ ಮೇಲೆ ಇದೆ. 3 ಸಾವಿರದಲ್ಲಿ 345 ಮನೆ ಕೀ ನೀಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರದ್ದು ದಪ್ಪ ಎಮ್ಮೆ ಚರ್ಮದ ಸರ್ಕಾರ. ಬಡವರ ಕೆಲಸ ಮಾಡಿ ಕೊಡದ ಜಮೀರ್ ಅಹ್ಮದ್ ರಾಜೀನಾಮೆ ನೀಡಬೇಕು.

ಮಿನಿ ನ್ಯೂಸ್

ತಪ್ಪು ತಿದ್ದಿಕೊಳ್ಳುವವರು ಸಮಾಜದ ಅದ್ಭುತ ವ್ಯಕ್ತಿಗಳಾಗುತ್ತಾರೆ

- ಉದಯವಾಹಿನಿ, ಪುತ್ತೂರು:

ಪ್ರತಿಯೊಬ್ಬ ಮಹಾತ್ಮರೂ ತಮ್ಮ ಸಾಧನೆಗಳ ಮೂಲಕ ಸಮಾಜಕ್ಕೆ ಸನ್ಮಾರ್ಗದ ದಾರಿಯನ್ನು ತೋರಿಸಿದವರಾಗಿದ್ದು, ತಮ್ಮ ಜೀವನಾನುಭವಗಳನ್ನು ಸಮಾಜಕ್ಕೆ ಧಾರೆ ಎರೆದುಕೊಟ್ಟಿದ್ದಾರೆ. ಸರಕಾರ ಅಂತಹ ಮಹಾತ್ಮರ ಜಯಂತಿಯನ್ನು ಆಚರಿಸುವ ಮೂಲಕ ಜನರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದೆ. ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಕೃತಿಯ ಮೂಲಕ ಜಗತ್ತಿಗೆ ಹಿಂದೂ ಸನಾತನ ಧರ್ಮದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ ಎಂದು ಪುತ್ತೂರು ಉಪವಿಭಾಗದ ಪೊಲೀಸ್ ಉಪಾಧೀಕ್ಷ ಪ್ರಮೋದ್ ಕುಮಾರ್ ಹೇಳಿದರು.

ಅವರು ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆಯ ಜಂಟಿ ಆಶ್ರಯದಲ್ಲಿ ಪುತ್ತೂರು ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಂಸ್ಮರಣಾ ದೀಪ ಬೆಳಗಿಸಿ ಮಾತನಾಡಿದರು. ಜೀವನದಲ್ಲಿ ತಪ್ಪು ಮಾಡದವರು ಯಾರೂ ಇರಲಾರರು. ತನ್ನ ತಪ್ಪನ್ನು ತಿದ್ದಿಕೊಳ್ಳುವವರು ಸಮಾಜದಲ್ಲಿ ಅದ್ಭುತ ವ್ಯಕ್ತಿಗಳು, ಮಹಾತ್ಮರೂ ಆಗುತ್ತಾರೆ. ತಪ್ಪನ್ನು ತಿದ್ದಿಕೊಳ್ಳದವರು ಸಮಾಜ ಕಂಟಕರಾಗುತ್ತಾರೆ. ಬೇಡರಾಗಿದ್ದ ವಾಲ್ಮೀಕಿ ಮಹರ್ಷಿಯವರು ನಾರದರ ಪ್ರಭಾವದಿಂದ ತನ್ನ ತಪ್ಪಿನ ಅರಿವಾಗಿ ಜೀವನದಲ್ಲಿ ಪರಿವರ್ತನೆಯಾಗಿ ಸಮಾಜದಲ್ಲಿ ಮಹಾತ್ಮರಾಗಿ ಬೆಳೆದರು. ಅವರು ಸುಂದರ ರಾಮಾಯಣ ಕೃತಿ ರಚಿಸಿ ಸಮಾಜಕ್ಕೆ ಅರ್ಪಣೆ ಮಾಡಿದವರು. ಪ್ರತಿಯೊಬ್ಬರ ಜೀವನದಲ್ಲಿಯೂ ಬದಲಾವಣೆಗೆ ಸಾಕಷ್ಟು ಸಂದರ್ಭಗಳು ಎದುರಾಗುತ್ತಿರುತ್ತದೆ.

ಅವುಗಳನ್ನು ಬಳಸಿಕೊಂಡು ಮುನ್ನಡೆಯಬೇಕು. ಜೀವನದಲ್ಲಿ ಒಳ್ಳೆತನವನ್ನು ಪೋಷಿಸಬೇಕು. ಯೋಚನಾ ಶೈಲಿಯನ್ನು ಬದಲಾಯಿಸಿಕೊಳ್ಳುವ ಮುಖಾಂತರ ಸಮಾಜ, ದೇಶಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಕಾನೂನುಬದ್ಧ ಮಾಂಸ ಸಾಗಾಟ ತಡೆದರೆ 10 ವರ್ಷ ಜೈಲು ಶಿಕ್ಷೆ

- ಉದಯವಾಹಿನಿ, ಮಂಗಳೂರು-

ಉದಯವಾಹಿನಿ ಚಿತ್ರ

ಗೋಹತ್ಯೆ ಹಾಗೂ ಕಾನೂನುಬಾಹಿರ ಜಾನುವಾರು ಸಾಗಾಟವನ್ನು ತಡೆಯಲು ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದರೆ ಸಾಕು, ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಸ್ಪಷ್ಟಪಡಿಸಿದ್ದಾರೆ. 'ತಲಪಾಡಿಯಿಂದ ಜೋಕಟ್ಟೆಗೆ ಅಕ್ರಮ ಗೋ ಸಾಗಾಟ ವಾಹನದ ಮಾಹಿತಿಯನ್ನು ಕಂಕನಾಡಿ ನಗರ ಪೊಲೀಸರಿಗೆ ನೀಡಿದ್ದರೂ ಪೊಲೀಸರು ನಿರ್ಲಕ್ಷಿಸಿದರು' ಎಂದು ಮಂಗಳೂರು ಮಹಾನಗರ ಬಜರಂಗದಳ ಸಂಘಟನೆ ಸಾಮಾಜಿಕ ಜಾಲತಾಣದಲ್ಲಿ ಮಾಡಿರುವ ಆರೋಪಕ್ಕೆ ಸಂಬಂಧಿಸಿ ಅವರು ಸ್ಪಷ್ಟನೆ ನೀಡಿದ್ದಾರೆ.

'ಇದೊಂದು ಮಾಂಸ ಸಾಗಾಟ ಪ್ರಕರಣ. ಈ ಪ್ರಕರಣದಲ್ಲಿ ಮಾಂಸವನ್ನು ಕೇರಳದಿಂದ ಖರೀದಿಸಿ ನಗರದ ಪರವಾನಗಿ ಹೊಂದಿರುವ ಅಂಗಡಿಗೆ ತರಲಾಗಿತ್ತು. ಕರ್ನಾಟಕದಲ್ಲಿ ಗೋಹತ್ಯೆ ನಿಷೇಧವಿದ್ದರೂ, ನಿಯಮಗಳ ಪ್ರಕಾರ ಕಾನೂನುಬದ್ಧ ಮಾಂಸ ಮಾರಾಟ ಮತ್ತು ಸಾಗಾಟಕ್ಕೆ ಇಲ್ಲಿ ಅವಕಾಶವಿದೆ. ಹೀಗಾಗಿ ವಾಹನವನ್ನು ತಡೆಯುವುದು, ದಾಳಿ ಮಾಡುವುದು ಅಥವಾ ಬೆದರಿಕೆ ಹಾಕುವುದು ಸೇರಿದಂತೆ ಯಾವುದೇ ಕಾನೂನುಬದ್ಧ ಕೆಲಸವನ್ನು ತಡೆಯಲು ಯತ್ನಿಸುವುದು ಕೂಡ ಅಪರಾಧ ಎಸಗಿದಂತಾಗುತ್ತದೆ. ಇಂತಹ ಅಪರಾಧಕ್ಕೆ 10 ವರ್ಷಗಳವರೆಗೆ ಜೈಲು ಶಿಕ್ಷೆಯಾಗಬಹುದು ಎಂದು ಎಚ್ಚರಿಸಿದ್ದಾರೆ. ಸೋಮವಾರ ಬೆಳಗ್ಗೆ ಮಾಂಸ ಸಾಗಾಟ ವಾಹನವನ್ನು ತಡೆಯಲು ಯತ್ನಿಸಲಾಗಿದೆ ಎಂಬ ದೂರು ಬಂದಿದೆ. ಇದು ನೈಜ ಎಂದು ಕಂಡುಬಂದರೆ, ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

- ಉದಯವಾಹಿನಿ, ಬೀದರ್:

ಬೀದರ್ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಭಕ್ತಿಭಾವ ಮತ್ತು ಗೌರವಪೂರ್ವಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರ ಮಹಾನ್ ವ್ಯಕ್ತಿತ್ವ, ಸಾಹಿತ್ಯಿಕ ಕೊಡುಗೆ ಹಾಗೂ ಸಮಾಜಕ್ಕೆ ನೀಡಿದ ಅಮೂಲ್ಯ ಸಂದೇಶಗಳನ್ನು ಸ್ಮರಿಸಲಾಯಿತು. ಭಾರತೀಯ ಸಾಹಿತ್ಯ ಲೋಕದಲ್ಲಿ ಆದಿಕವಿ ಮಹರ್ಷಿ ವಾಲ್ಮೀಕಿಯವರು ವಿಶಿಷ್ಟ ಸ್ಥಾನವನ್ನು ಹೊಂದಿದ್ದಾರೆ.

ಅವರು ರಚಿಸಿದ ಮಹಾನ್ ಕಾವ್ಯವಾದ ರಾಮಾಯಣವು ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಜೀವನ ಮೌಲ್ಯಗಳ ಪ್ರತೀಕವಾಗಿದೆ. ರಾಮಾಯಣದ ಮೂಲಕ ಸತ್ಯ, ಧರ್ಮ, ನ್ಯಾಯ, ತ್ಯಾಗ, ಪ್ರೀತಿ, ಸಹನೆ, ಕರ್ತವ್ಯ ನಿಷ್ಠೆ ಮಾನವೀಯತೆಯ ಮಹತ್ವವನ್ನು ಜಗತ್ತಿಗೆ ಸಾರಿದ ಮಹರ್ಷಿ ವಾಲ್ಮೀಕಿಯವರ ಕೊಡುಗೆ ಅಪಾರವಾಗಿದೆ ಬಣ್ಣಿಸಿದರು. ಮಹರ್ಷಿ ವಾಲ್ಮೀಕಿಯವರ ಜೀವನ ಮತ್ತು ಸಾಹಿತ್ಯವು ಸಮಾಜಕ್ಕೆ ಸದಾ ಮಾರ್ಗದರ್ಶನ ನೀಡುತ್ತದೆ. ಅವರ ಕೃತಿಗಳಲ್ಲಿ ಪ್ರತಿಬಿಂಬಿಸುವ ಆದರ್ಶಗಳು ವ್ಯಕ್ತಿಯ ನೈತಿಕ ಬೆಳವಣಿಗೆಗೆ ಮಾತ್ರವಲ್ಲದೆ, ಕುಟುಂಬ ಮತ್ತು ಸಮಾಜದಲ್ಲಿ ಉತ್ತಮ ಸಂಬಂಧಗಳನ್ನು ಬೆಳೆಸಲು ಸಹ ಪ್ರೇರಣೆ ನೀಡುತ್ತವೆ. ಧರ್ಮದ ಮಾರ್ಗದಲ್ಲಿ ನಡೆಯುವುದು, ಸತ್ಯವನ್ನು ಪಾಲಿಸುವುದು, ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುವುದು ಹಾಗೂ ಮಾನವೀಯತೆಯನ್ನು ಗೌರವಿಸುವುದು ಅವರ ಸಂದೇಶಗಳ ಪ್ರಮುಖ ಸಾರವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಬಸ್ಸಿಗಾಗಿ ಕಾಯುವ ಪ್ರಯಾಣಿಕರ ಪರದಾಟ

- ಉದಯವಾಹಿನಿ, ಚಿತ್ತಾಪುರ:

ಜಾತ್ರೆ, ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ತೆರಳುವ ಪ್ರಯಾಣಿಕರು ಬಸ್ಸಿಗಾಗಿ ಕಾಯುತ್ತಾ ತೊಂದರೆ ಅನುಭವಿಸುತ್ತಿರುವ ದೃಶ್ಯ ಕಂಡುಬಂದಿದೆ. ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ಸಾರ್ವಜನಿಕರು ತಮ್ಮ ಊರುಗಳಿಗೆ ತೆರಳಲು ಬಸ್ಸಿಗಾಗಿ ಕಾಯುತ್ತಿರುವುದು ಕಂಡುಬಂತು.

ಬೆಳಗಿನ ಸಮಯದಲ್ಲಿ ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಗೆ ತೆರಳಲು ಹಾಗೂ ಸಾರ್ವಜನಿಕರು ತಮ್ಮ ನಿತ್ಯದ ಕೆಲಸಗಳಿಗೆ ಪ್ರಯಾಣಿಸಲು ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಆದರೆ ಪ್ರಯಾಣಿಕರ ದಟ್ಟಣೆಗೆ ಅನುಗುಣವಾಗಿ ಬಸ್‌ಗಳ ವ್ಯವಸ್ಥೆ ಕಲ್ಪಿಸದಿದ್ದರೆ ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗುತ್ತದೆ.

ವಿಶೇಷವಾಗಿ ಜಾತ್ರೆ, ಹಬ್ಬ ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುವುದರಿಂದ ಸಾರಿಗೆ ಇಲಾಖೆಯು ಪ್ರಯಾಣಿಕರ ಅಗತ್ಯಕ್ಕೆ ತಕ್ಕಂತೆ ಹೆಚ್ಚುವರಿ ಬಸ್‌ಗಳನ್ನು ಓಡಿಸಬೇಕು. ವಿದ್ಯಾರ್ಥಿಗಳು ಮತ್ತು ದೂರದ ಊರುಗಳಿಗೆ ತೆರಳುವ ಪ್ರಯಾಣಿಕರಿಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	12:00 ರಿಂದ 01:30
ಗುಳಿಕ ಕಾಲ	ಬೆಳಿಗ್ಗೆ	10:30 ರಿಂದ 12:00
ಯಮಗಂಡ ಕಾಲ	ಬೆಳಿಗ್ಗೆ	07:30 ರಿಂದ 09:00

ಮೇಷ ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ ಹಾಗೂ ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ – ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಸಮೃದ್ಧಿ ತರುತ್ತದೆ.

ವೃಷಭ ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಬಯಕೆ ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಅನಿರೀಕ್ಷಿತ ಪ್ರಣಯ ಪ್ರಸಂಗಗಳು ಎದುರಾಗಬಹುದು.

ಮಿಥುನ ಟೀಕಿಸಲು ನಿಮ್ಮ ಸಮಯ ವ್ಯರ್ಥ ಮಾಡುವುದು ನಿಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರಬಹುದಾದ್ದರಿಂದ ಹಾಗೆ ಮಾಡಬೇಡಿ. ಜಂಟಿ ಯೋಜನೆಗಳ್ತು ಸಂಶಯಾಸ್ಪದ ಹಣಕಾಸು ಯೋಜನೆಗಳಲ್ಲಿ ಹೂಡಿಕೆ ಮಾಡಬೇಡಿ. ಮಕ್ಕಳು ಹೊರಾಂಗಣ ಹೆಚ್ಚು ಸಮಯ ಕಳೆಯುತ್ತಾರೆ.

ಕಟಕ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ – ಆದರೆ ಆರ್ಥಿಕವಾಗಿ ಲಾಭದಾಯಕವಾಗಿರುತ್ತವೆ. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ ಇವು ನಿಮ್ಮ ಮನಸ್ಸಿನ ಮೇಲೆ ಒತ್ತಡ ತರುತ್ತವೆ.

ಸಿಂಹ ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ನಿಮ್ಮ ಭಾವನೆಗಳನ್ನು ತಡೆಹಿಡಿಯಬೇಡಿ ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ. ನೀವು ನಿಮ್ಮ ಮನೆಯ ಯಾವುದೇ ಸದಸ್ಯರಿಂದ ಹಣವನ್ನು ಸಾಲ ತೆಗೆದುಕೊಂಡಿದ್ದರೆ

ಕನ್ಯಾ ಉತ್ತಮ ಜೀವನಕ್ಕಾಗಿ ನಿಮ್ಮ ಆರೋಗ್ಯ ಮತ್ತು ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು.

ತುಲಾ ಇಂದಿನ ದಿನ ಯಾರಿಗೂ ಸಾಲ ನೀಡಬೇಡಿ ಮತ್ತು ಕೊಡುವುದು ಅಗತ್ಯವಾಗಿದ್ದರೆ ಕೊಡುವವರಿಂದ ಅವರು ಯಾವಾಗ ಹಣವನ್ನು ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ.

ವೃಶ್ಚಿಕ ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಇಂದು ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ.

ಧನಸ್ಸು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣವನ್ನು ಖರ್ಚುಮಾಡಬಹುದು ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ–ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ.

ಮಕರ ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ನಿಮ್ಮ ಹಣ ಖರ್ಚಾಗುತ್ತಿದೆ ಎಂಬುದರ ಮೇಲೆ ನಿಗಾ ಇರಿಸುವ ಅಗತ್ಯವಿದೆ ನೀವು ತೊಂದರೆಗೊಳಗಾಗಬಹುದು ನಿಮ್ಮ ವಿಚಿತ್ರ ವರ್ತನೆಯ ಹೊರತಾಗಿಯೂ ಸಂಗಾತಿ ಸಹಕಾರಿಯಾಗಿರುತ್ತಾರೆ.

ಕುಂಭ ಗಾಳಿಗೊಡ್ಡಿದ ಆಹಾರ ನಿಮಗೆ ಅನಾರೋಗ್ಯ ತರಬಹುದಾದ್ದರಿಂದ ಅವುಗಳನ್ನು ತಿನ್ನಬೇಡಿ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ. ನಿಮ್ಮ ಸಂಗಾತಿಯೊಡನೆ ಒಂದು ಉತ್ತಮ ತಿಳುವಳಿಕೆ ಮನೆಯಲ್ಲಿ ಸಂತೋಷ–ಶಾಂತಿ ಸಮೃದ್ಧಿಯನ್ನು ತರುತ್ತದೆ.

ಮೀನ ನಿಮ್ಮ ವೈಯಕ್ತಿಕ ಸಮಸ್ಯೆಗಳು ಮಾನಸಿಕ ಸಂತೋಷವನ್ನು ಹಾಳು ಮಾಡಬಹುದು. ಆದರೆ ಒತ್ತಡವನ್ನು ನಿಭಾಯಿಸಲು ಆಸಕ್ತಿದಾಯಕವಾದದ್ದನ್ನೇನಾದರೂ ಓದುವ ಮೂಲಕ ಸ್ವಲ್ಪ ಮಾನಸಿಕ ವ್ಯಾಯಾಮ ಮಾಡಿಕೊಳ್ಳಿ. ನಿಮ್ಮ ಹಳೆಯ ಯಾವುದೇ ರೋಗ ಇಂದು ನಿಮ್ಮನ್ನು ಕಾಡಬಹುದು.

ಮದಗಜಗಳ ಕಾದಾಟಕ್ಕೆ ಹೆದರದೆ ಅಖಾಡಕ್ಕಿಳಿದ ನಾಯಿ

ಉದಯವಾಹಿನಿ ಚಿತ್ರ

• **ಉದಯವಾಹಿನಿ ಹಾಸನ:**

ದೈತ್ಯ ಆನೆ ಎಲ್ಲಿ, ಎಳಸು ನಾಯಿ ಎಲ್ಲಿ? ಆದರೆ, ಎರಡು ದೈತ್ಯ ಕಾಡಾನೆಗಳ ನಡುವೆ ನಡೆಯುತ್ತಿದ್ದ ಭೀಕರ ಕಾದಾಟವನ್ನು ಶ್ವಾನವೊಂದು ಮಧ್ಯಪ್ರವೇಶಿಸಿ ಬಿಡಿಸಿರುವ ಅಪರೂಪದ ಹಾಗೂ ರೋಮಾಂಚನಕಾರಿ ಘಟನೆ ನಡೆದಿದೆ. ಹೌದು, ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಜಗಬೋರನಹಳ್ಳಿ ಗ್ರಾಮದ ಬಳಿ ಎರಡು ಕಾಡಾನೆಗಳ ಭೀಕರ ಕಾದಾಟ ನಡೆಯುತಿತ್ತು. ಆದರೆ, ಈ ವೇಳೆ ಮಧ್ಯಪ್ರವೇಶಿಸಿದ ನಾಯಿಯೊಂದು ಬೊಗಳುತ್ತಾ ಆನೆಗಳ ಜಗಳವನ್ನು ಬಿಡಿಸಲು ಯತ್ನಿಸಿದ ಅಪರೂಪದ ಘಟನೆ ನಡೆದಿದೆ.

ಕಾಡಾನೆಗಳ ಹಿಂಡಿನಿಂದ ಹೊರಬಂದಿದ್ದ ಎರಡು ಪ್ರಾಯದ ಬೃಹತ್ ಮದಗಜಗಳು ಜಗಬೋರನಹಳ್ಳಿ ಗ್ರಾಮದ ತೋಟದ ಬಳಿ ಮುಖಾಮುಖಿಯಾಗಿ ಒಂದನ್ನೊಂದು ಸದೆಬಡಿಯಲು ಭೀಕರವಾಗಿ ಕಾದಾಡುತ್ತಿದ್ದವು. ದಂತಗಳಿಂದ ಪರಸ್ಪರ ತಿವಿಯುತ್ತಾ ಆನೆಗಳು ತೀವ್ರ ಆಕ್ರೋಶದೊಂದಿಗೆ ಜಗಳವಾಡುತ್ತಿದ್ದ ದೃಶ್ಯ ಸ್ಥಳೀಯರಲ್ಲಿ ಭಾರೀ ಭೀತಿ ಸೃಷ್ಟಿಸಿತ್ತು. ಆದರೆ, ದೈತ್ಯ ಆನೆಗಳು ಜಗಳವಾಡುತ್ತಿದ್ದ ಜಾಗಕ್ಕೆ ಅನಿರೀಕ್ಷಿತವಾಗಿ ಎಂಟ್ರಿ ಕೊಟ್ಟ ಸಾಕು ನಾಯಿಯೊಂದು, ಕಿಂಚಿತ್ತೂ ಹೆದರದೆ, ಆನೆಗಳ ಸುತ್ತಲೂ ಓಡಾಡುತ್ತಾ ಗಟ್ಟಿಯಾಗಿ ಬೊಗಳಲು ಆರಂಭಿಸಿದೆ.

ಇನ್ನು, ನಾಯಿಯ ಸತತ ಬೊಗಳಾಟ ಹಾಗೂ ಆಕ್ರಮಣಕಾರಿ ನಡವಳಿಕೆಯಿಂದ ದಿಕ್ಕುತಪ್ಪಿದ ಕಾಡಾನೆಗಳು, ತಕ್ಷಣವೇ ತಮ್ಮ ನಡುವಿನ ಜಗಳವನ್ನು ನಿಲ್ಲಿಸಿವೆ. ಏತನ್ಮಧ್ಯೆ, ಆನೆಗಳ ಕಾದಾಟವನ್ನು ನಿಯಂತ್ರಿಸಲು ಹಾಗೂ ಅವುಗಳನ್ನು ಶಾಂತಗೊಳಿಸಲು ಆನೆ ಕಾರ್ಯಪಡೆ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲಿ ಹರಸಾಹಸ ಪಡುತ್ತಿದ್ದರು. ಈ ಮಧ್ಯೆ, ಶ್ವಾನವು ನಿರಂತರವಾಗಿ ಬೊಗಳಿ ಆನೆಗಳ ಗಮನವನ್ನು ಬೇರೆಡೆ ಸೆಳೆಯಲು ಯತ್ನಿಸಿದ್ದು ಸಾರ್ವಜನಿಕರ ಆಶ್ಚರ್ಯಕ್ಕೆ ಕಾರಣವಾಗಿದೆ.

ಸೌಜನ್ಯ ಪ್ರಕರಣ ಮರು ತನಿಖೆ ಚುರುಕು ಅಧಿಕಾರಿಗಳಿಗೆ SIT ನೋಟಿಸ್..!

• **ಉದಯವಾಹಿನಿ, ಮಂಗಳೂರು:**

ಉದಯವಾಹಿನಿ ಚಿತ್ರ

ಸೌಜನ್ಯ ಅತ್ಯಾಚಾರ ಕೊಲೆ ಪ್ರಕರಣದ ಮರು ತನಿಖೆಯನ್ನು ವಿಶೇಷ ತನಿಖಾ ತಂಡ ಚುರುಕುಗೊಳಿಸಿದ್ದು, ಈ ಹಿಂದೆ ಪ್ರಕರಣದ ತನಿಖೆಯಲ್ಲಿ ಭಾಗಿಯಾಗಿದ್ದ 15ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ನೋಟಿಸ್ ಜಾರಿಗೊಳಿಸಿದೆ.

2012ರಲ್ಲಿ ನಡೆದ ಸೌಜನ್ಯ ಪ್ರಕರಣದ ತನಿಖೆ ಆರಂಭದಲ್ಲಿ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ನಡೆದಿತ್ತು. ಬಳಿಕ ಅಪರಾಧ ತನಿಖಾ ದಳ ಕೇಂದ್ರ ತನಿಖಾ ದಳದ ಹಂತಗಳಿಗೂ ತಲುಪಿತ್ತು.ಈ ವೇಳೆ ತನಿಖೆಯ ಜವಾಬ್ದಾರಿ ನಿವ ’ರ್ಹಿಸಿದ್ದ ಅಧಿಕಾರಿಗಳಿಂದ ಮಾಹಿತಿ ಪಡೆಯಲು ಎಸ್‌ಐಟಿ ಮುಂದಾಗಿದೆ.ಮೂಲಗಳ ಪ್ರಕಾರ, ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 160ರ ಅಡಿಯಲ್ಲಿ ನೋಟಿಸ್ ನೀಡಲಾಗಿದ್ದು, ಶುಕ್ರವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ ಎಂದು ತಿಳಿದುಬಂದಿದೆ.ಹಿಂದಿನ ತನಿಖೆಯ ವೇಳೆ ಕೈಗೊಂಡ ಕ್ರಮಗಳು, ಸಂಗ್ರಹಿಸಲಾದ ಸಾಕ್ಷ್ಯಗಳು ಪ್ರಕರಣಕ್ಕೆ ಸಂಬಂಧಿಸಿದ ಇತರ ಪ್ರಮುಖ ಅಂಶಗಳ ಕುರಿತು ಮಾಹಿತಿ ಪಡೆಯುವುದು ವಿಚಾರಣೆಯ ಉದ್ದೇಶವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಹಳೆಯ ದಾಖಲೆಗಳು, ಹೇಳಿಕೆಗಳು ಲಭ್ಯವಿರುವ ಮಾಹಿತಿಗಳನ್ನು ಎಸ್‌ಐಟಿ ಪರಿಶೀಲಿಸುತ್ತಿದೆ. ಹಿಂದಿನ ತನಿಖೆಯ ವಿವಿಧ ಹಂತಗಳಲ್ಲಿ ನಡೆದ ಬೆಳವಣಿಗೆಗಳನ್ನು ಮರುಪರಿಶೀಲಿಸುವ ಜೊತೆಗೆ, ಅಗತ್ಯವಿರುವ ಹೆಚ್ಚುವರಿ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದುಕೊಳ್ಳಲು ಮುಂದಾಗಿದೆ ಎಂದು ಹೇಳಲಾಗುತ್ತಿದೆ.

ಭೂಮಿ ಇರುವವರೆಗೂ ವಾಲ್ಮೀಕಿ ಅಜರಾಮರ : ಸೊರಟೂರ ಗ್ರಾಮದ ವಾಲ್ಮೀಕಿ ಆಶ್ರಯದಲ್ಲಿ ಜರುಗಿದ ಮಹರ್ಷಿ ವಾಲ್ಮೀಕಿ ಜಯಂತಿ

• **ಉದಯವಾಹಿನಿ ಗದಗ:**

ಸೊರಟೂರ ಭೂಮಿಯ ಮೇಲೆ ಬೆಟ್ಟಗಳು, ಪರ್ವತಗಳು ಹಾಗೂ ನದಿಗಳು ಇರುವವರೆಗೂ ರಾಮಾಯಣದ ಕಥೆ ಜಗತ್ತಿನಲ್ಲಿ ಪ್ರಚಲಿತವಾಗಿರುತ್ತದೆ ಎಂಬ ಆಶಯ ರಾಮಾಯಣದಲ್ಲಿಯೇ ವ್ಯಕ್ತವಾಗಿದೆ ಎಂದು ವಾಲ್ಮೀಕಿ ಸಮಾಜದ ಅಧ್ಯಕ್ಷ ಶೇಷಪ್ಪ ಹುಲಿಕಟ್ಟಿ ಹೇಳಿದರು ಸೊರಟೂರ ಗ್ರಾಮದ ಶ್ರೀ ವಾಲ್ಮೀಕಿ ದೇವಸ್ಥಾನದ ಆವರಣದಲ್ಲಿ ಗ್ರಾಮ ಪಂಚಾಯಿತಿ ಹಾಗೂ ವಾಲ್ಮೀಕಿ ಸಮಾಜದ ಆಶ್ರಯದಲ್ಲಿ ಜರುಗಿದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು ರಾಮಾಯಣ ಇರುವವರೆಗೂ ಅದನ್ನು ಜಗತ್ತಿಗೆ ಪರಿಚಯಿಸಿದ ಮಹರ್ಷಿ ವಾಲ್ಮೀಕಿಯವರ ಹೆಸರು ಕೂಡ ಚಿರಸ್ಥಾಯಿಯಾಗಿ ಉಳಿಯಲಿದೆ ಎಂದರು ಕಾಲ ಬದಲಾದರೂ, ತಲೆಮಾರುಗಳು ಉರುಳಿದರೂ, ಮಾನವೀಯ ಮೌಲ್ಯಗಳನ್ನು ಸಾರುವ ರಾಮಾಯಣದ ಮಹತ್ವ ಕುಂದುವುದಿಲ್ಲ. ಹೀಗಾಗಿ, ರಾಮಾಯಣದ ಮೂಲಕ ಜಗತ್ತಿನ ಸಾಹಿತ್ಯ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಪರಂಪರೆಗೆ ಅಮೂಲ್ಯ ಕೊಡುಗೆ ನೀಡಿದ ಮಹರ್ಷಿ ವಾಲ್ಮೀಕಿಯವರು ಭೂಮಿ ಇರುವವರೆಗೂ ಅಜರಾಮರ ಎಂಬುದು ಅವರ ಜೀವನ ಸಾಧನೆಯ ಮಹತ್ವವನ್ನು ಸಾರುತ್ತದೆ ಎಂದು ಹೇಳಿದರು


ಉದಯವಾಹಿನಿ ಚಿತ್ರ

ಕೆ.ಸಿ.ಸಿ.ಬ್ಯಾಂಕ್ ನಿರ್ದೇಶಕ ಮಲ್ಲಪ್ಪ ಕಲಗುಡಿ ಮಾತನಾಡಿ, ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಮಹರ್ಷಿ ವಾಲ್ಮೀಕಿಯವರಿಗೆ ವಿಶಿಷ್ಟ ಸ್ಥಾನವಿದೆ. ಸಂಸ್ಕೃತ ಭಾಷೆಯಲ್ಲಿ ರಚಿಸಲಾದ ರಾಮಾಯಣದ ಕರ್ತೃ, ಆದಿಕವಿ ಹಾಗೂ ಮಹಾನ್ ತತ್ವಜ್ಞಾನಿ ಎಂದೇ ಅವರು ಪ್ರಸಿದ್ಧರಾಗಿದ್ದಾರೆ. ಅವರ ಜನ್ಮದಿನದ ಸ್ಮರಣಾರ್ಥ ಪ್ರತಿ ವರ್ಷ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತದೆ. ಅದರಂತೆ, ಇಂದು ದೇಶ, ರಾಜ್ಯಾದ್ಯಂತ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತಿದ್ದು, ಮಹರ್ಷಿಗಳ ಆದರ್ಶಗಳನ್ನು ಸ್ಮರಿಸುವುದು ಮತ್ತು ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಈ ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದರು

ಪಿಡಿಓ ಸಂತೋಷ ಹೂಗಾರ ಮಾತನಾಡಿ, ಮಹರ್ಷಿ ವಾಲ್ಮೀಕಿಯವರ ಜೀವನದ ಕುರಿತು ಭಾರತೀಯ ಪುರಾಣ ಮತ್ತು ಪರಂಪರೆಗಳಲ್ಲಿ ಹಲವು ಕಥೆಗಳು ಪ್ರಚಲಿತದಲ್ಲಿವೆ. ಅವುಗಳಲ್ಲಿ ರತ್ನಾಕರನ ಕಥೆ ಪ್ರಮುಖವಾಗಿದೆ. ಜನಪ್ರಿಯ ಪರಂಪರೆಯ ಕಥನದ ಪ್ರಕಾರ, ರತ್ನಾಕರನು ಆರಂಭದಲ್ಲಿ ದಾರಿಹೋಕರನ್ನು ದೋಚಿ ಜೀವನ ನಡೆಸುತ್ತಿದ್ದನು. ನಾರದ ಮಹರ್ಷಿಗಳ ಭೇಟಿಯ ನಂತರ ತನ್ನ ಜೀವನದ ತಪ್ಪುಗಳನ್ನು ಅರಿತು, ಪಶ್ಚಾತ್ತಾಪದ ಹಾದಿಯಲ್ಲಿ ಸಾಗಿದನು. ತಪಸ್ಸು ಧ್ಯಾನ ಮತ್ತು ಆತ್ಮಜ್ಞಾನದ ಮೂಲಕ ಆಧ್ಯಾತ್ಮಿಕ ಪರಿವರ್ತನೆ ಹೊಂದಿ ಮಹರ್ಷಿ ವಾಲ್ಮೀಕಿಯಾದನು ಎಂಬುದು ಈ ಕಥೆಯ ಸಾರವಾಗಿದೆ ಎಂದರು

ವೇದಿಕೆಯಲ್ಲಿ ಮಲ್ಲಪ್ಪ ಕಲಗುಡಿ, ಗೋವಿಂದ ತಳಕಲ್ಲ, ಪ್ರಕಾಶ ಹಿರೇಮಠ, ವೆಂಕಟೇಶ ರತ್ನತೂರ, ಶರಣಪ್ಪ ಮಾದಣ್ಣವರ, ಮೈಲಾರಿ ರತ್ನತೂರ, ಪಿಡಿಓ ಸಂತೋಷ ಹುಗಾರ, ಮುತ್ತು ತೋಪಿನ ಸೇರಿದಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದವರು ಹಾಗೂ ವಾಲ್ಮೀಕಿ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಅಧಿಕಾರಕ್ಕಿಂತ ಸೇವೆಗೆ ಆದ್ಯತೆ

ಅಧಿಕಾರದಲ್ಲಿದ್ದಾಗಲೂ ಜನಸಾಮಾನ್ಯರೊಂದಿಗೆ ಬೆರೆತು ಕೆಲಸ ಮಾಡಿದ್ದೇನೆ. ಜನರಿಂದ ದೊರೆಯುವ ಪ್ರೀತಿ, ವಿಶ್ವಾಸವೇ ನನ್ನ ನಿಜವಾದ ಶಕ್ತಿ

• **ಉದಯವಾಹಿನಿ ಬೀದರ್:**

‘ಕನ್ನಡ ಸಾಹಿತ್ಯ ಪರಿಷತ್ತು ಅಧಿಕಾರದ ಕೇಂದ್ರವಾಗದೆ, ಕನ್ನಡ ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಯ ಸೇವಾ ಕೇಂದ್ರವಾಗಬೇಕು. ಆಡಳಿತವೆಂದರೆ ಅಧಿಕಾರವಲ್ಲ, ಅದೊಂದು ಸೇವೆ ಎಂಬ ತತ್ವವನ್ನು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದೇನೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸ್ಥಾನದ ಆಕಾಂಕ್ಷಿ, ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ. ಸೋಮಶೇಖರ್ ಹೇಳಿದರು.

1 : ನಾಡು, ನುಡಿಯ ಸೇವೆ ಮಾಡಲು
2 : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
3 : ಸಾಮಾಜಿಕ ನ್ಯಾಯದ ತತ್ವಗಳನ್ನು

ಕನ್ನಡ ಸಾಹಿತ್ಯ ಪರಿಷತ್ತಿನ ಮುಂಬರುವ ಚುನಾವಣೆಯ ಹಿನ್ನೆಲೆಯಲ್ಲಿ ಬೀದರ್, ವಿಜಯಪುರ ಹಾಗೂ ಬಸವಕಲ್ಯಾಣದಲ್ಲಿ ಹಮ್ಮಿಕೊಂಡಿದ್ದ ಪ್ರಚಾರ ಸಭೆಗಳಲ್ಲಿ ಮಾತನಾಡಿದ ಅವರು, ಪರಿಷತ್ತಿನಲ್ಲಿ ಸಾಮಾಜಿಕ ನ್ಯಾಯ, ಭೌಗೋಳಿಕ ನ್ಯಾಯ, ಪ್ರಾದೇಶಿಕ ನ್ಯಾಯ ಹಾಗೂ ಪ್ರತಿಭಾ ನ್ಯಾಯಕ್ಕೆ ಆದ್ಯತೆ ನೀಡುವುದು ತಮ್ಮ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

ಬಸವಣ್ಣನವರ ವಚನಗಳು ತಮ್ಮ ಬದುಕಿಗೆ ಮಾರ್ಗದರ್ಶಿಯಾಗಿವೆ. ಸಮಾನತೆ, ಮಾನವೀಯತೆ, ಮಹಿಳೆಯರ ಬಗ್ಗೆ ಗೌರವ ಹಾಗೂ ಸಾಮಾಜಿಕ ನ್ಯಾಯದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಸ್ತ್ರೀಶಕ್ತಿಯನ್ನು ಗೌರವಿಸುವುದು ತಮ್ಮ ಕುಟುಂಬದ ಸಂಪ್ರದಾಯವಾಗಿದೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ಗಡಿ ಜಿಲ್ಲೆಗಳಿಗೆ ನ್ಯಾಯ ಒದಗಿಸಲು ಆಗ್ರಹ: ಸಭೆಯಲ್ಲಿ ಮಾತನಾಡಿದ ವಿವಿಧ ಮುಖಂಡರು, ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಆಡಳಿತ ಮಂಡಳಿಗಳ ಅವಧಿಯಲ್ಲಿ ಬೀದರ್ ಸೇರಿದಂತೆ ಗಡಿ ಜಿಲ್ಲೆಗಳಿಗೆ ನಿರೀಕ್ಷಿತ ಪ್ರಾತಿನಿಧ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೀದರ್‌ನಂತಹ ಗಡಿ ಜಿಲ್ಲೆಗಳಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವಂತೆ ಮನವಿ ಮಾಡಿದರೂ ಸೂಕ್ತ ಸ್ಪಂದನೆ ದೊರೆತಿಲ್ಲ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಉಳಿವಿಗೆ ಗಡಿ ಜಿಲ್ಲೆಗಳ ಕೊಡುಗೆ ಅಪಾರವಾಗಿದ್ದು, ಅವುಗಳಿಗೆ ಪರಿಷತ್ತಿನಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ಒತ್ತಾಯಿಸಿದರು. ಡಾ. ಸಿ. ಸೋಮಶೇಖರ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರೆ ಗಡಿ ಜಿಲ್ಲೆಗಳ ಸಮಸ್ಯೆಗಳಿಗೆ ಸ್ಪಂದಿಸುವುದರೊಂದಿಗೆ ಸಾಹಿತ್ಯ, ವಿಜ್ಞಾನ ಮತ್ತು ಸಂಸ್ಕೃತಿಯನ್ನು ಒಗ್ಗೂಡಿಸಿ ಪರಿಷತ್ತನ್ನು ಮುನ್ನಡೆಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

> ಅಬಕಾರಿ ಆಯುಕ್ತರಾಗಿ, ಕೃಷಿ ಮಾರುಕಟ್ಟೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವಿದೆ. ಆಡಳಿತದಲ್ಲಿ ಗಳಿಸಿದ ಅನುಭವವನ್ನು ಸಾಹಿತ್ಯ ಪರಿಷತ್ತಿನ ಅಭಿವೃದ್ಧಿಗೆ ಬಳಸಿಕೊಳ್ಳುವ ಉದ್ದೇಶ ಹೊಂದಿದ್ದೇನೆ ಎಂದು ಹೇಳಿದರು. -ಡಾ. ಸಿ. ಸೋಮಶೇಖರ್

ಸರಳ ವ್ಯಕ್ತಿತ್ವಕ್ಕೆ ಮೆಚ್ಚುಗೆ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ರೈತ ಕುಟುಂಬದ ಹಿನ್ನೆಲೆಯಿಂದ ಬಂದ ಡಾ. ಸೋಮಶೇಖರ್ ಅವರು ಕಠಿಣ ಪರಿಶ್ರಮದ ಮೂಲಕ ಐಎಎಸ್ ಅಧಿಕಾರಿಯಾಗಿ ಬೆಳೆದಿದ್ದಾರೆ. ತುಮಕೂರಿನಲ್ಲಿ ಜಿಲ್ಲಾಧಿಕಾರಿಯಾಗಿ, ರಾಮನಗರದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಮುಖಂಡರು ಸ್ಮರಿಸಿದರು. ನಿವೃತ್ತಿಯ ನಂತರವೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಅವರು, ಕಳೆದ ನಾಲ್ಕು ವರ್ಷಗಳಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಸಂಚರಿಸಿ ಸಾಹಿತ್ಯಾಸಕ್ತರು ಹಾಗೂ ಪರಿಷತ್ತಿನ ಸದಸ್ಯರನ್ನು ಸಂಪರ್ಕಿಸುತ್ತಿದ್ದಾರೆ. ಪರಿಷತ್ತನ್ನು ಜನಸಾಮಾನ್ಯರಿಗೆ ಮತ್ತಷ್ಟು ಹತ್ತಿರವಾಗಿಸುವ ದೃಷ್ಟಿಕೋನ ಹೊಂದಿದ್ದಾರೆ ಎಂದು ಹೇಳಿದರು.

> ‘ಅಧಿಕಾರದಲ್ಲಿದ್ದಾಗಲೂ ಜನಸಾಮಾನ್ಯರೊಂದಿಗೆ ಬೆರೆತು ಕೆಲಸ ಮಾಡಿದ್ದೇನೆ. ಜನರಿಂದ ದೊರೆಯುವ ಪ್ರೀತಿ, ವಿಶ್ವಾಸವೇ ನನ್ನ ನಿಜವಾದ ಶಕ್ತಿ. ಅದೇ ಪ್ರೀತಿ ಮತ್ತು ವಿಶ್ವಾಸದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ನಾಡು, ನುಡಿಯ ಸೇವೆ ಮಾಡಲು ಮುಂದಾಗಿದ್ದೇನೆ’ ಎಂದರು. -ಡಾ. ಸಿ. ಸೋಮಶೇಖರ್

ಮತದಾನ ಪ್ರಮಾಣ ಹೆಚ್ಚಿಸಲು ಕರೆ: ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಶೇ 40ರಿಂದ 45ರಷ್ಟು ಮಾತ್ರ ಮತದಾನವಾಗುತ್ತಿದೆ. ಈ ಪ್ರಮಾಣವನ್ನು ಹೆಚ್ಚಿಸಲು ಸದಸ್ಯರನ್ನು ಖುದ್ದಾಗಿ ಸಂಪರ್ಕಿಸಿ ಮತದಾನದ ಮಹತ್ವ ತಿಳಿಸಬೇಕು ಎಂದು ಡಾ. ಸೋಮಶೇಖರ್ ಕಾರ್ಯಕರ್ತರಿಗೆ ಮನವಿ ಮಾಡಿದರು.

ಮಲ್ಲಿಕಾರ್ಜುನ ಖರ್ಗೆ ಬಹಿರಂಗ ಕ್ಷಮೆಯಾಚನೆಗಾಗಿ ಬಿಜೆಪಿ ಪ್ರತಿಭಟನೆ

• **ಉದಯವಾಹಿನಿ ಬಳ್ಳಾರಿ, :**

ಪ್ರಧಾನಮಂತ್ರಿ, ನರೇಂದ್ರ ಮೋದಿ ಹಾಗೂ ಅವರ ದಿವಂಗತ ತಂದೆಯವರ ಕುರಿತು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿರುವ ಆಕ್ಷೇಪಾರ್ಹ ಹೇಳಿಕೆಯನ್ನು ಖಂಡಿಸಿ ಹಾಗು ಅವರು ಬಹಿರಂಗವಾಗಿ ಕ್ಷಮೆಯಾಚನೆ ಮಾಡಬೇಕೆಂದು ಆಗ್ರಹಿಸಿ ನಗರದಲ್ಲಿಂದು ಬಿಜೆಪಿ ಪ್ರತಿಭಟನೆ ನಡೆಸಿತು.

ನಗರದ ಗಡಗಿ ಚೆನ್ನಪ್ಪ ಸರ್ಕಲ್ ನಲ್ಲಿ ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ನೇತೃತ್ವದಲ್ಲಿ ಸೇರಿದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ಮತ್ತು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಘೋಷಣೆ ಕೂಗಿದರು.

ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಹೇಳಿಕೆಗೆ ಬೇಷರತ್ ಕ್ಷಮೆಯಾಚಿಸಬೇಕು, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ರಾಜಕೀಯದಲ್ಲಿ ವೈಯಕ್ತಿಕ ನಿಂದನೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಲಾಯ್ತು.

ಈ ವೇಳೆ ಮಾತನಾಡಿದ ಸೋಮಶೇಖರ ರೆಡಿ, ಸ್ವತಃ ಕಾಂಗ್ರೆಸ್ ಪಕ್ಷದ ಕಾರ್ಯಕರ್ತನೇ ಮೋದಿ ಎಲ್ಲಿಗೂ ಹೋಗಲ್ಲ, ಅವರು ಇದ್ದೇ ಇರ್ತಾರೆ ಎಂದಿದ್ದಾನೆ. ಈಗಲಾದರೂ ಕಾಂಗ್ರೆಸ್‌ನವರಿಗೆ ತಿಳಿಯಬೇಕು. ಕೇವಲ ಸುಳ್ಳು ಹೇಳಿಕೆಗಳಿಂದ ಪ್ರತಿಭಟನೆ ಮಾಡಿದರೆ ಜನ ಮೆಚ್ಚಲ್ಲ, ಜನಮೆಚ್ಚುವಂತಹ ಕೆಲಸ ಮಾಡಿ ಅಧಿಕಾರಕ್ಕೆ ಬರಬೇಕು. ವಿಶ್ವವೇ ಕೊಂಡಾಡುವ ನಾಯಕ ಮೋದಿ ಹಾಗು ಅವರ ತಂದೆ ಬಗ್ಗೆ ಮಾತನಾಡಿ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಕೀಳು ಸಂಸ್ಕೃತಿಯನ್ನು ತೋರಿಸಿದ್ದಾರೆ ಈಗಲಾದರೂ ತಮ್ಮಮಾತುಗಳ ಬಗ್ಗೆ ಬಹಿರಂಗ ಕ್ಷಮೆ ಕೇಳಬೇಕು ಎಂದರು.

ಉದಯವಾಹಿನಿ ಚಿತ್ರ

ಕನ್ನಡ ರಾಜ್ಯೋತ್ಸವ ಸರಳವಾಗಿ ಆಚರಿಸಲು ತಿರ್ಮಾನ

• **ಉದಯವಾಹಿನಿ ಹಗರಿಬೊಮ್ಮನಹಳ್ಳಿ.**

ಬರಗಾಲ ನಿಮಿತ್ತ ಈ ಬಾರಿ ಕನ್ನಡ ರಾಜ್ಯೋತ್ಸವ ಅತ್ಯಂತ ಅರ್ಥಗರ್ಭಿತ, ಸರಳವಾಗಿ ಆಚರಿಸಲು ಒಮ್ಮತದ ತೀರ್ಮಾನ ಮಾಡಲಾಯಿತು ಎಂದು ತಹಶೀಲ್ದಾರ್ ಆರ್. ಕವಿತ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಮಂಗಳವಾರ ನಡೆದ ಕನ್ನಡ ರಾಜ್ಯೋತ್ಸವದ ಪೂರ್ವ ಬಾವಿ ಸಭೆ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಕನ್ನಡ ಸಂಘಟನೆ ಬುಡ್ಡಿ ಬಸವರಾಜ ಮಾತನಾಡಿ ವರ್ಷಕ್ಕೆ ಒಮ್ಮೆ ಕನ್ನಡ ರಾಜ್ಯೋತ್ಸವ ಆಚರಿಸುತ್ತಿರುವ ನಾವು ಪ್ರತಿ ವರ್ಷ ಸರಳವಾಗಿ ಆಚರಿಸಿದರೆ ಕನ್ನಡ ಬಗ್ಗೆ ಅಭಿಮಾನಕ್ಕೆ ದಕ್ಕೆಯಾಗುತ್ತದೆ.

ಆದರೂ ಬರಗಾಲ ಇದೆ ಈ ವರ್ಷ ಸರಳವಾಗಿ ಸೇರಿ ಎಲ್ಲಾ ಅಂಗಡಿಗಳ ಮೇಲೆ ಕನ್ನಡ 60 ಪರ್ಸೆಂಟ್ ಇರಬೇಕು. ಇದರ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದರು. ಇದಕ್ಕೆ ತಹಶೀಲ್ದಾರ್ ಮಾತನಾಡಿ ಕನ್ನಡ ಬೋರ್ಡ್ ಗಳ ವಿಚಾರದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಗಳು ಇದರ ಬಗ್ಗೆ

ಉದಯವಾಹಿನಿ ಚಿತ್ರ

ಗಮನ ಹರಿಸಿ ನಿರ್ಲಕ್ಷ್ಯ ಮಾಡದೇ 60 ರಷ್ಟು ನಾಮಫಲಕ ಸೇರಿದಂತೆ ಕನ್ನಡ ಬಳಕೆ, ಮಾಡುವಂತೆ ಆದೇಶಿಸಿದರು.

ಕನ್ನಡ ವೃತ್ತ, ಜೊತೆಗೆ ಕನ್ನಡ ಧ್ವಜ ಹೆಚ್ಚಾಗಿ ಕಟ್ಟುವ ವಿಚಾರ ಕೂಡ ಮಾಡಲಾಗುವುದು.ಈ ಕೃಷ್ಣಮೂರ್ತಿ,ಕಲಾವಿದ ಟಿ. ಕೊಟ್ರೇಶ್,ವರ್ದನ್ ಟೈಲರ್ ಶಿವಕುಮಾರ್, ಬ್ಯಾಲಾಳ್ ವಿಶ್ವನಾಥ್ ಸ್ವಾಮಿ,ಎನ್ ಎಂ. ಗೌಸ್, ಮಾತನಾಡಿದರು.ಬಿಆರ್ ಸಿ ಪ್ರಭಾಕರ್, ತೋಟಗಾರಿಕೆ ಅಧಿಕಾರ ವಿಜಯಕುಮಾರ ನಿಚ್ಚಾಪುರ, ಜೆಸ್ಕಾಂ ಎಇಇ ಹೇಮರಡ್ಡಿ,ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಾದ ರಾಜಕುಮಾರ ನಾಯ್ಕ, ಇತರರು ಇದ್ದರು.

ಪತ್ರಕರ್ತರ ವರದಿಗಳಿಂದ ಸರ್ಕಾರಗಳೇ ಉರುಳಿವೆ: ಶಾಸಕ ನಾಡಗೌಡ

• **ಉದಯವಾಹಿನಿ, ಮುದ್ದೇಬಿಹಾಳ:**

ಪತ್ರಕರ್ತರ ವರದಿಗಳಿಂದ ಕೆಲವರು ಸಂಕಷ್ಟಕ್ಕೆ ಒಳಗಾಗಬಹುದು. ಆದರೆ ಅವರನ್ನು ದ್ವೇಷಿಸುವ ಬದಲು, ವರದಿಗಾರಿಕೆಗೆ ನಾವೇ ಅವಕಾಶ ಮಾಡಿಕೊಟ್ಟಿದ್ದೇವೆ ಎಂಬುದನ್ನು ಅರಿಯಬೇಕು ಎಂದು ಶಾಸಕ ಹಾಗೂ ಕರ್ನಾಟಕ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ ಅಪ್ಪಾಜಿ ಹೇಳಿದರು.

ಪಟ್ಟಣದ ವಿಜಯಮಹಾಂತೇಶ ಮಂಗಲ ಭವನದಲ್ಲಿ ಭಾನುವಾರ ಕರ್ನಾಟಕ ಮಾಧ್ಯಮ ಒಕ್ಕೂಟದಿಂದ ಆಯೋಜಿಸಿದ್ದ ವಾರ್ಷಿಕ ಪ್ರಶಸ್ತಿ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪತ್ರಿಕಾರಂಗ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿದ್ದು, ಸಮಾಜದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು. ತಮ್ಮ ರಾಜಕೀಯ ಜೀವನದಲ್ಲಿ ಪತ್ರಕರ್ತರ ವರದಿಯಿಂದ ಕಾಂಗ್ರೆಸ್ ಟಿಕೆಟ್ ದೊರೆಯಲು ಸಹಕಾರಿಯಾಯಿತು ಎಂದು ಸ್ಮರಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಮಾತನಾಡಿ, ಪತ್ರಿಕಾರಂಗದಲ್ಲಿ ಅವಕಾಶಗಳ ಜತೆಗೆ ಸವಾಲುಗಳೂ ಇವೆ ಎಂದರು. ಮಾಧ್ಯಮ ರತ್ನ ಪ್ರಶಸ್ತಿ ಪುರಸ್ಕೃತೆ ಶ್ವೇತಾ ಆಚಾರ್ಯ ಮಾತನಾಡಿ, ನಿಷ್ಠೆ ಮತ್ತು ನಿಷ್ಠುರ ವರದಿಗಾರಿಕೆ ಪತ್ರಕರ್ತರ ಪ್ರಮುಖ ಜವಾಬ್ದಾರಿ ಎಂದರು. ಜೀವಮಾನ ಮಾಧ್ಯಮ ಸಾಧಕ ರತ್ನ ಪ್ರಶಸ್ತಿ ಪುರಸ್ಕೃತ ಮುರುಗೇಶ ಶಿವಪೂಜೆ ಪ್ರಶಸ್ತಿಯನ್ನು ತಮ್ಮ ಗುರುಗಳು ಹಾಗೂ ಬೆಂಬಲಿಸಿದವರಿಗೆ ಅರ್ಪಿಸಿದರು.

ಉದಯವಾಹಿನಿ ಚಿತ್ರ

ಕರ್ನಾಟಕ ಮಾಧ್ಯಮ ಒಕ್ಕೂಟದ ರಾಜ್ಯಾಧ್ಯಕ್ಷ ನಾರಾಯಣ ಮಾಯಾಚಾರಿ ಮಾತನಾಡಿ, ಆಮಿಷಗಳಿಗೆ ಒಳಗಾಗದೆ ವರದಿಗಾರಿಕೆ ಮಾಡಬೇಕು ಹಾಗೂ ಪತ್ರಕರ್ತರ ಸಂಕಷ್ಟಗಳಿಗೆ ಸ್ಪಂದಿಸಬೇಕು ಎಂದರು. ತಾಲ್ಲೂಕು ಅಧ್ಯಕ್ಷ ಪರಶುರಾಮ ಕೊಣ್ಣೂರ ಒಕ್ಕೂಟದ ಉದ್ದೇಶ ವಿವರಿಸಿದರು.

ಚನ್ನವೀರ ಶಿವಾಚಾರ್ಯರು ಆಶೀರ್ವಚನ ನೀಡಿದರು.

ಪ್ರಶಸ್ತಿ ಪ್ರದಾನ: ಮಾಧ್ಯಮ ಸಾಧಕ ರತ್ನ ಪ್ರಶಸ್ತಿಯನ್ನು ಮಲ್ಲಿಕಾರ್ಜುನ ತಿಪ್ಪಾರ ಹಾಗೂ ಪರಶುರಾಮ ಬಾಸಗಿ ಅವರಿಗೆ, ಮಾಧ್ಯಮ ರತ್ನ ಪ್ರಶಸ್ತಿಯನ್ನು ಶರಣು ಮರನೂರ, ಯೂನುಸ್ ಮೂಲಿಮನಿ, ಚೇತನ ಶಿವಶಿಂಪಿ, ಮಕಬೂಲ್ ಬನ್ನೆಟ್ಟಿ ಹಾಗೂ ಯಲ್ಲಾಲಿಂಗ ಪೂಜಾರಿ ಅವರಿಗೆ ನೀಡಲಾಯಿತು. ಅತ್ಯುತ್ತಮ ಪತ್ರಿಕಾ ವಿತರಕ ಪ್ರಶಸ್ತಿಯನ್ನು ರವಿ ಕುಂಬಾರ ಹಾಗೂ ಚಂದ್ರಶೇಖರ ಮೂಖಿಹಾಳ ಪಡೆದರು.

ವಿಶೇಷ ಸನ್ಮಾನ: ಶರಣು ಸಜ್ಜನ, ಡಾ. ರಂಗನಾಥ ವೈದ್ಯ, ಸ್ನೇಹಾ ನಲವಡೆ, ಅರವಿಂದ ಕೊಪ್ಪ ಹಾಗೂ ಕ್ರೀಡಾ ಸಾಧಕರಾದ ಕುಮಾರಿ ಶಕುಂತಲಾ ಮತ್ತು ವಿಕ್ರಾಂತ ಶಾರದಳ್ಳಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಆರ್.ಎಸ್. ಪಾಟೀಲ ಕೂಚಬಾಳ, ಶಿವಶಂಕರಗೌಡ ಹಿರೇಗೌಡರ, ಸಿ.ಬಿ. ಅಸ್ಕಿ, ರಾಹುಲಗೌಡ ಪಾಟೀಲ, ಜಿ.ಟಿ. ಘೋರ್ಪಡೆ, ಗುರಣ್ಣ ತಾರನಾಳ, ವೈ. ಎಚ್. ವಿಜಯಕರ, ಸಿಕಂದರ ಜಾನ್ವೇಕರ, ಪ್ರಭುರಾಜ ಕಲಬುರ್ಗಿ ಹಾಗೂ ಶಶಿಕಾಂತ ಮಾಲಗತ್ತಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೆದ್ದಾರಿಯಲ್ಲಿ ಬಿದ್ದಿದ್ದ ನೂರಾರು ಚೀಲಗಳನ್ನು ಹೊತ್ತೊಯ್ದ ಜನ!

• **ಉದಯವಾಹಿನಿ, ಹಾಸನ:**

ಉದಯವಾಹಿನಿ ಚಿತ್ರ

ಬೆಂಗಳೂರಿನಿಂದ ಮಂಗಳೂರಿಗೆ ಸಿಮೆಂಟ್ ಸಾಗಿಸುತ್ತಿದ್ದ ಟ್ರಕ್ ಟೈಯರ್ ಬ್ಲಾಸ್ಟ್ ಆಗಿ ಪಲ್ಟಿಯಾಗಿದ್ದು, ರಸ್ತೆಯಲ್ಲಿ ಬಿದ್ದಿದ್ದ ನೂರಾರು ಸಿಮೆಂಟ್ ಮೂಟೆಗಳನ್ನು ಸ್ಥಳೀಯರು ಹಾಗೂ ಅಪರಿಚಿತರು ಹೊತ್ತೊಯ್ದಿದ್ದಾರೆ. ಈ ಭೀಕರ ಅಪಘಾತವು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಗುಳಗಳಲೆ ಗ್ರಾಮದ ಬಳಿ ನಡೆದಿದೆ.

ಈ ಲಾರಿಯು ಬೆಂಗಳೂರಿನಿಂದ ಮಂಗಳೂರಿಗೆ ಸಿಮೆಂಟ್ ಮೂಟೆಗಳನ್ನು ಸಾಗಿಸುತ್ತಿತ್ತು. ಆದರೆ, ಗುಳಗಳಲೆ ಬಳಿ ಚಲಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಟೈಯರ್ ಸ್ಫೋಟಗೊಂಡ ಪರಿಣಾಮ ಲಾರಿ ನಿಯಂತ್ರಣ ತಪ್ಪಿ ಹೆದ್ದಾರಿಯಲ್ಲೇ ಪಲ್ಟಿಯಾಗಿದೆ. ಇನ್ನು, ಅಪಘಾತದ ತೀವ್ರತೆಗೆ ಜಾರ್ಖಂಡ್ ಮೂಲದ ಟ್ರಕ್ ಚಾಲಕ ರಾಜೇಶ್ ಯಾದವ್ (30) ಎಂಬುವವರಿಗೆ ಗಂಭೀರ ಗಾಯಗಳಾಗಿದ್ದು, ತಕ್ಷಣವೇ ಆತನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮುಂದುವರೆದು, ಅಪಘಾತದ ಬಳಿಕ ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಲಾರಿಯನ್ನು ರಸ್ತೆಯಿಂದ ತೆರವುಗೊಳಿಸಿದ್ದರು. ಆದರೆ, ಅಪಘಾತ ನಡೆದು ಒಂದು ದಿನ ಕಳೆದರೂ ರಸ್ತೆಯ ಬದಿಯಲ್ಲಿ ಬಿದ್ದಿದ್ದ ಸಿಮೆಂಟ್ ಚೀಲಗಳನ್ನು ವಾಪಸ್ ಕೊಂಡೊಯ್ಯಲು ಕಂಪನಿಯಾಗಲಿ ಅಥವಾ ಮಾಲೀಕರಾಗಲಿ ತಕ್ಷಣವೇ ಬಾರದ ಹಿನ್ನೆಲೆಯಲ್ಲಿ, ರಾತ್ರಿ ವೇಳೆ ಬಂದ ಅಪರಿಚಿತರು ಟ್ರ್ಯಾಕ್ಟರ್ ಇತರೆ ವಾಹನಗಳಲ್ಲಿ ನೂರಾರು ಸಿಮೆಂಟ್ ಮೂಟೆಗಳನ್ನು ಕದ್ದು ಕೊಂಡೊಯ್ದಿದ್ದಾರೆ.

ಇಸ್ಪೀಟು, ಮಟ್ಕಾ ದಂಧೆ ನಿಲ್ಲದಿದ್ದರೆ ಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆ

ದಾವಣಗೆರೆ ಜಿಲ್ಲೆಯಲ್ಲಿ ಇಸ್ಪೀಟು, ಮಟ್ಕಾ ದಂಧೆ ಜಾಸ್ತಿಯಾಗಿದೆ. ಇದರಿಂದ ಮನೆ ಮಕ್ಕಳು ಹಾಳಾಗುತ್ತಿದ್ದಾರೆ, ಅರ್ಥಿಕ ಪರಿಸ್ಥಿತಿ ಕೆಡುತ್ತಿದೆ

• **ಉದಯವಾಹಿನಿ, ದಾವಣಗೆರೆ:**

ಜಿಲ್ಲೆಯಲ್ಲಿ ಇಸ್ಪೀಟು, ಮಟ್ಕಾ ದಂಧೆ ಹೆಚ್ಚಾಗಿದೆ ಎಂದು ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಅವರು ಆಕ್ರೋಶ ಹೊರಹಾಕಿದ್ದಾರೆ. ಈ ಕುರಿತು ದಾವಣಗೆರೆಯ ನಿವಾಸದಲ್ಲಿ ಮಾತನಾಡಿದ ಶಾಸಕ ಶಿವಗಂಗಾ ಬಸವರಾಜ್ ಅವರು, ನಾನು ಬರೆದ ಪತ್ರ ವೈರಲ್ ಆಗಿದೆ ಎಂದು ಹೇಳುತ್ತಿದ್ದಾರೆ. ಪತ್ರ ಬರೆದಿದ್ದೇನೆ, ಆದರೆ ಸಹಿ

1 : ಜನರು ನನ್ನ ಬಳಿ ಹೇಳ್ತಾ ಇದ್ದಾರೆ
2 : ಸಣ್ಣ ಪ್ರಮಾಣದ ದಾಳಿ ನಡೆಸಿದ್ದಾರೆ
3 : ಪತ್ರ ಬರೆಯಲು ಮುಂದಾಗಿದ್ದೇನೆ

ಹಾಕಿ ಕಳಿಸಿಲ್ಲ. ನಮಗೆ ಗೌರವಕ್ಕಿಂತ ಹೆಚ್ಚು ಯಾವುದು ದೊಡ್ಡದಲ್ಲ. ಚನ್ನಗಿರಿ ಅಷ್ಟೇ ಅಲ್ಲ, ಇಡೀ ಜಿಲ್ಲೆಯಲ್ಲಿ ಇಸ್ಪೀಟು, ಮಟ್ಕಾ ದಂಧೆ ಜಾಸ್ತಿಯಾಗಿದೆ.

ನಮ್ಮ ಜಿಲ್ಲೆಯ ಎಸ್‌ಪಿ ಹಾಗೂ ಪೂರ್ವ ವಲಯ ಐಜಿಪಿ ಅವರನ್ನು ವಾಪಸ್ ಕರೆಸಿಕೊಳ್ಳಬೇಕು. ಇಲ್ಲ ಸಿಎಂ ಹಾಗೂ ಗೃಹ ಸಚಿವರೇ ಬಂದು ಅಕ್ರಮ ಚಟುವಟಿಕೆ ನಿಲ್ಲಿಸಬೇಕು. ಇದನ್ನು ಕಡಿಮೆ ಮಾಡದೇ ಇದ್ದರೆ ನಾನೇ ಹೋರಾಟಕ್ಕೆ ಇಳಿಯುತ್ತೇನೆ. ಗ್ಯಾರೆಂಟಿ ಕೊಡುವ ಹಣವನ್ನು ಹೆಣ್ಣು ಮಕ್ಕಳಿಂದ ಕಸಿದುಕೊಂಡು ಹೋಗುವ ಪ್ರಕರಣಗಳು ಇವೆ. ಇನ್ನೊಂದು ವಿಡಿಯೋ ಬಂದ್ರೆ ನಾನೇ ಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆಗೆ ಕೂರುತ್ತೇನೆ. ಇಂದು ಸಿಎಂ ಹಾಗೂ ಗೃಹ ಸಚಿವರಿಗೆ ಪತ್ರ ನೀಡುತ್ತೇನೆ. ನಾನು ಹೇಳಿದ ತಕ್ಷಣ ಅಲ್ಲೊಂದು ಇಲ್ಲೊಂದು ಸಣ್ಣ ಪ್ರಮಾಣದ ದಾಳಿ ನಡೆಸಿದ್ದಾರೆ. ಅಲ್ಲಿ ಸೀಜ್ ಮಾಡಿದ್ದು ಎಷ್ಟು ಎಂದು ನಿಮಗೂ ಗೊತ್ತಿದೆ. ಮಗಳ ಮದುವೆಗೆ ಇಟ್ಟಿದ್ದ ಒಡವೆಗಳನ್ನು ಅಡವಿಟ್ಟು ಜೂಜಾಡಿದ್ದಾರೆ. ಆದ್ದರಿಂದ ಕ್ರಮ ಕೈಗೊಳ್ಳುವಂತೆ ಪತ್ರ ಬರೆಯಲು ಮುಂದಾಗಿದ್ದೇನೆ ಎಂದು ತಿಳಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ವಿಚಾರವಾಗಿ ಮಾತನಾಡಿದ ಶಾಸಕರು, ಕುಡಿಯುವ ನೀರಿಗೆ 15 ದಿನ ತೊಂದರೆಯಾಗಿದೆ. ಮೋಟಾರ್ ಕೆಟ್ಟು ಹೋಗಿದೆ. ರಿಪೇರಿ ಮಾಡಿಸಿ ಕಳಿಸುತ್ತೇನೆ. ಅದು ನಮ್ಮ ನಿಮ್ಮ ಜಮೀನಿನ ಹೊಲದ ಪಂಪ್ ಸೆಟ್‌ನಂತೆ ಅಲ್ಲ. ಎಲ್ಲಿ ತೆಗೆದುಕೊಂಡಿದ್ದಾರೋ ಅಲ್ಲೇ ಹೋಗಿ ರಿಪೇರಿ ಮಾಡಿಸಬೇಕು. ಇನ್ನು ಸ್ವಲ್ಪ ದಿನದಲ್ಲೇ ನೀರು ಪೂರೈಕೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

> ಇದರಿಂದ ಮನೆ ಮಕ್ಕಳು ಹಾಳಾಗುತ್ತಿದ್ದಾರೆ, ಅರ್ಥಿಕ ಪರಿಸ್ಥಿತಿ ಕೆಡುತ್ತಿದೆ ಎಂದು ಜನರು ನನ್ನ ಬಳಿ ಹೇಳ್ತಾ ಇದ್ದಾರೆ. ಇದರ ಬಗ್ಗೆ ಎಸ್‌ಪಿಯಿಂದ ಹಿಡಿದು ಡಿಜಿ ಸಲೀಂ ಅವರಿಗೆ ಮನವಿ ಮಾಡಿದರೂ ಕೂಡ ಕಡಿಮೆಯಾಗಿಲ್ಲ. ಬದಲಾಗಿ ಇನ್ನೂ ಹೆಚ್ಚಾಗಿದೆ. ಇದರಿಂದ ಸಿಎಂ ಹಾಗೂ ಗೃಹ ಸಚಿವರಿಗೆ ಮನವಿ ಮಾಡಿದ್ದೇನೆ ಎಂದರು. –ಶಾಸಕ ಶಿವಗಂಗಾ ಬಸವರಾಜ್

ಬಿಜೆಪಿ ಅಭ್ಯರ್ಥಿ ಕಾಲಿಗೆ ಬಿದ್ದಿದ್ದು ವೈರಲ್

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಕಾಲಿಗೆ ಬಿಜೆಪಿ ಅಭ್ಯರ್ಥಿ ಬಿದ್ದ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ಪರಿಷತ್ ಅಭ್ಯರ್ಥಿ ಕೆಎಂ ಸುರೇಶ್, ನಾವು ಹಾಗೂ ಸಚಿವರು ಎಲ್ಲರೂ ಪರಿಚಯಸ್ಥರು. ಜಿಲ್ಲಾ ಉಸ್ತುವಾರಿ ಸಚಿವರಿಗೆ ಬಿಜೆಪಿ ಅಭ್ಯರ್ಥಿ ಕಾಲಿಗೆ ಬಿದ್ದಿದ್ದು ವೈರಲ್ ಮಾಡೋದು ಸರಿಯಲ್ಲ.

ಹಿರಿಯರು ಎಂದು ಕಾಲಿಗೆ ಬೀಳೋದು ಸಹಜ. ನಾನು ಕೂಡ ಬಿಜೆಪಿಯ ಮಾಜಿ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಅವರ ಕಾಲಿಗೆ ಬೀಳುತ್ತೇನೆ. ನನ್ನ ರಾಜಕೀಯ ಗುರುಗಳು ಅವರೇ ಎಂದು ಹೇಳುತ್ತೇನೆ. ಹಾಗಾದ್ರೆ, ಇದು ಹೊಂದಾಣಿಕೆನಾ?. ಕಾಲಿಗೆ ಬಿದ್ದ ತಕ್ಷಣ ಹೊಂದಾಣಿಕೆ ಅಂತ ಹೇಳಿದ್ರೆ, ಹೆಂಗೆ. ಹಿಂದೂ ಸಂಪ್ರದಾಯದಲ್ಲಿ ಹಿರಿಯರ ಕಾಲಿಗೆ ಬೀಳೋದು ಸಂಪ್ರದಾಯ ಎಂದು ಸ್ಪಷ್ಟನೆ ನೀಡಿದ್ದಾರೆ.